WHITE PAPER ON SHARAVATI VALLEY PROJECT.

The motion was consider—(Debate contd.)

†Sri GANJI VEERAPPA (Harihar).—Mr. Speaker, Sir, yesterday at the close of the session I was discussing the question of rockfilling work on the upstream. With regard to this work two or three points arise for analysis. A pertinent question was raised as to why in this case of rockfilling work the matter was not placed before the H. E. C. P. because in other similar cases the matters were referred to the H. E. C. P. The other matter that was raised was when the main contractor Messrs. Tarapore & Co. declined to take up this rockfilling work, why was the matter not referred to arbitrators by the Government We must remember that all these tenders were received in the middle of May 1962. According to the Department, at that hour they had to take some decision either on the basis of the rates tendered by the 7 contractors or on some other basis. The only point that was before them in the first week of May 1962 was that they must see to the completion of this work in time because, as they have said, the workload was about 150,000 c. ft. There were only 150 days before the monsoon would set in and they had calculated thousand cubic feet of work per day and it was alright. Otherwise the work could not be managed and if it could not be completed within 150 days, the amount of harm would be incalculable. So, facts are before us. The work load was there. If the entire work had to be done in 150 days, they either had to go for the lowest tender or negotiate or fix up capable contractors. For finishing this work in 150 days, they would require immense manpower, nearly 250 to 300 lorries, earth-moving machinery and compressors, etc. They could not by magic produce all these. If none of these contractors could come to terms, where could be the immense manpower, technical know-how, etc? We have to be fair to the Government and to the department. Under the circumstances, Government took a correct decision.

As I said yesterday, as between the seven tenderers, they thought that three or four persons quoted abnormally high rates. They could not accept those rates. Therefore they called for negotiation and with the four lowest tenderers they discussed with regard to reasonable rates. As I said yesterday, the rate arrived at Rs. 104 per thousand cubic feet has been fair, because on the departmental date it was Rs. 105. As Mr. Kadidal Manjappa said yesterday, there was an obligation cast on the main contractor to do the work at the rate of Rs. 150 he had quoted. Let us remember the other case of the earthen dam, change of design, etc. A similar situation would have arisen here also. Government could not have come to terms with the contractor. The contractor went to arbitration. On the earlier occasion, he had quoted Rs. 216. But the award of the arbitrators was Rs. 245. Unfortunately, there would not be a situation for negotiation for the Government if it went up to arbitration, and if it went to arbitration they would have to accept the finding unless there was something legally wrong. If Government

had thought of going for arbitration when Messrs. Tarapore & Co. had quoted Rs. 150, perhaps the arbitrators would have given Rs. 200. So, Sir, I am glad that the Government and the Department took a wise decision in not going to arbitration and compel an unwilling man and allow the risk of giving higher rates, because the previous instance was there. Under the circumtances, an analysis of all these factors go to prove that Government had no other option in this case, but to sit over the table on account of the shortness of time, urgency of work, etc., negotiate and come to reasonable understanding in the rates. Rs. 104 per thousand cubic feet was certainly reasonable, because the prevailing rates in the market was more when you take into consideration the rates that were prevailing in Nagarjunasagar and other projects, and only after expert opinion about this, this rate had been arrived at. They have not fixed at that rate arbitrarily, because they were dealing with crores of rupees. Under the circumstances, what the Department and the Government have done was the best and it has resulted in a saving of 33 lakhs to the exchequer. I repeat once again, instead of criticising the Government, we have to congratulate them, because they have saved 33 lakhs.

Sri C. J. MUCKANNAPPA (Sira).—Let the Hon'ble Member prove how 33 lakhs were saved to Government to the satisfaction of this House.

Sri GANJI VEERAPPA.—If there is any doubt in the mind of the Hon'ble Member, let me remind him that the rate quoted by Tarapore & Co. was Rs. 150. He had the prior right under clauses 27 and 28 of the agreement. If you take all these things into consideration, there is no other conclusion but to accept the facts by saying that this has resulted in a savings to the Government, and more than anything else, they have seen to the completion of the work within the scheduled time. It has been done within 150 days as calculated. Otherwise, it would have resulted in a catastrophe. Looking at the thing, I would ask my friends to take into consideration the time before them and the responsibility of the department and the Government, and be fair to the Government. I expect my other friends, who have had doubts, now that there is proper explanation, to come out with a feeling of satisfaction and say here, we congratulate the Government, we did not know these things and on facts we are satisfied and therefore congratulate the Government. My friend Mr. Krishna, if he is fair. minded, will do it.

A question may be asked, when one of the contractors had quoted Rs. 100, why did you fix it at Rs. 104 among the four contractors. On the face of it, it looks like that. But you have to take into consideration the rate quoted by Hazarath & Co., one of the contractors, at Rs. 105. This contractor who quoted Rs. 100/....... ....

Sri C. J. MUCKANNAPPA.—He first quoted Rs. 40 and then sent a telegram changing it to Rs. 100.

9.00 A. M.

Sri GANJI VEERAPPA.—Regarding this aspect of the matter as to why a rate of Rs. 104 was fixed when one of the contractors had quoted Rs. 100, we have to bestow thought and analyse as to what circumstances were there to give a higher rate. It leads to suspect the *bonafides* of the departmental people. In this case, what appears to us on facts is, Hazarath & Co. had quoted Rs. 105; Ramiah had quoted Rs. 40 and later on corrected it by telegram and gave Rs. 100, and for the entire work Shankaranarayana & Co. had given Rs. 100. In this connection we must remember that for a lesser work if you ask him to tender, he would naturally quote higher rates. The retail price is naturally higher than the wholesale price. When a contractor quotes a certain work at some rate, for a portion of the work, he would certainly quote a higher rate. The retail prices must necessarily be more. If Rs. 100 as quoted by this contractor, Shankaranarayana & Co., was for the entire work, for one-third of the work, naturally, he would quote higher rates. But what they have done is, they have arrived at reasonable figures. Even the contractors should not be allowed to suffer and lose. He should be allowed to have a reasonable margin of profit. Under the circumstances, they have fixed a reasonable rate of Rs. 104, which, of course, works out on calculation to a saving of nearly 33 lakhs. This is sufficient with regard to this work, namely, rock-filling work. Now, with regard to the other question, namely that Government should have gone to arbitration, I would say that Government had wisdom enough in not going for arbitration, as it would have resulted in a disadvantage to the Government.

I have got the greatest love and respect for Sri Kadidal Manjappa. In spite of that, I have got to disagree with him. He was saying that the idea of giving this huge work to contractors was not good and that it should have been better to get these works done by amani. We should remember in this connection, that in fact while starting this project, the then Government took a decision on these matters and a White Paper was also issued to this House on an earlier occasion explaining why Government took a decision to get it done by contractors and not by amani. The present Government had stepped into the shows, and whatever legacies were left, whether good or bad, they had to be carried out. I would not say bad because with the best intention perhaps, it appeared to them correct and they took a decision. What I am trying to bring to the notice of the Hon'ble House is the fact that there was some legacy left by the previous Government *i.e.*, decision regarding the mode of work to be given to the contractors. They could not have defied that decision. This legacy was there. On an earlier occasion, a white paper was issued in this House. Sri Kadidal Manjappa was a member of the Cabinet and was a party to the decision. Now, he cannot point out that and say Government was wrong.

Mr. SPEAKER.—What prevents him from saying "if I made a mistake, let me be condemned first"?

SrI GANJI VEERAPPA.—What I mean to say is that the ex-Minister himself has coming out with a statement that this ought not to have been done. I am sorry that a person who is responsible directly or indirectly should say now and that too against persons who were not responsible, it is not correct. What I am pointing out is that criticism should not have come from those people who were responsible for this decision. They may represent for what they have done. But it cannot come here as a criticism. I would say, in fact, such a criticism is not strange. If we go to the Lalbagh, we find retired officers assembling there criticising the youngsters in office. They will be saying that what the youngsters are doing is not correct, that in their time, they were doing correctly, that the standards had deteriorated and soon. In this way only, retired officers in Lalbagh will be talking. So also, retired Ministers or older people will be thinking, that in their days things were like that and somehow things have gone bad. Mr. Kadidal Manjappa has retired-he is still with us and I wish he takes bigger responsibilities. Anyway the tendency among retired people, whether officers or Ministers, or even among warriors, is, they will be criticising that the youngsters are not working hard, that they spend their time in the clubs, *etc.*, that is the human tendency of retired people, to go on criticising that the youngsters are not up to their expectation. If the Ministers who are responsible for this go on criticising for what they have done, it is not in good spirit and taste.

Sir, the agreement that was entered into with the contractors is there. It is a legacy left by them. Whatever conditions were there in the agreement, it was binding on the present Government. Much can be said with regard to the arbitration clause. In all matters of global tenders-I know because I have information regarding some global tenders-no foreign firm undertakes a huge work without an arbitration clause. An arbitration clause has both advantage and disadvantage. The advantages are, there will be quick decisions and things will be settled amicably and very soon. This is an advantage of arbitration clause. Otherwise, things will be dragged on unpleasantly and it takes a long time, perhaps ten to twenty years. To eliminate these disadvantages perhaps this arbitration clause was introduced. I do not question the intention. This clause was there at the time the present Government took office, and whatever was done before-the policy of giving work to major contractors-was continued. If we further probe into the problem we will see that machineries of a very high capacity are required-earth-moving machineries, compressors, bull dozers-and crores of rupees of machineries are engaged. Government have advanced loans to purchase machineries and other equipment. Unless the Government went to the aid of the contractors, it would not have been possible for the contractors to complete the work in schedule time. With regard to the arbitration clause, I do not think that any criticism could be levelled. I am, however, happy that very recently, perhaps after the present Chief Minister took up office, this arbitration clause is not there. In subsequent contracts, they have discontinued this method of

(SRI GANJI VEERAPPA)

arbitration clause. Perhaps it may be out of past experience of arbitration clauses and perhaps with due deference to criticism levelled in this House-we were telling in this House that this arbitration clause is responsible for all this loss and trouble and criticism of the Government-in their wisdom, they have thought of abolishing this arbitration clause in the contracts subsequently entered into.

With regard to arbitration, I would only like my friend to read what exactly is found in clause 51 on page 28, where the arbitration clause is given in this booklet. I do not like to read it and take up the time of the Hon'ble House, because the White Paper is in the hands of all my friends. They have made a distinction regarding the matters to be referred to arbitration. One is technical matter and the other is non-technical matter. With regard to technical matter, it contemplates that the Chief Engineer is final to take a decision on technical matters. It cannot go in for arbitration. If it is a non-technical matter, then only, the operation of this clause comes into effect, namely, that either of the parties can refer the matter to arbitration. Here, there are three cases that went for arbitration, and in all these cases, it is non-technical matter that has been referred to arbitration. Sir, you, as an experienced lawyer, know that under the Indian Arbitration Act, the provision of the law is very stringent, namely, the award given by the arbitrators cannot be challenged. In fact, even here, it is mentioned in clause 51 that the award of the arbitrations shall be final and binding on both parties on all such non-technical matters. I want my freind to remember that even in the general provisions of the Indian Arbitration Act, it is specifically stated that in all such matters, matters are final when the award is given.

That the Government or the contractor, whoever is aggrieved, may challenge it, is a matter settled according to legal interpretation and it has been laid down that unless fraud is attributed the award of the arbitrator cannot be questioned. So, Sir, it was but right for the Government not to have rushed to court challenging the award passed by the arbitrator. My friend Sri G. V. Gowda was suggesting yesterday that in the case of Messrs. Boraiah Basavaiah in respect of which the District Judge decided the case against the Government and upheld the award passed by the arbitrator, the Government ought not to have gone in appeal and taken up the matter to the High Court.

SRI G. V. GOWDA (Palya).—I never said that.

SRI GANJI VEERAPPA.—That is how I understood. At any rate he was justifying the award on the ground that it was fair and should not have been questioned.

SRI G. V. GOWDA.—Even in respect of M. S. Ramaiah I justified the award to some extent.

SRI GANJI VEERAPPA.—It was very strange to hear the hon'ble member Sri G. V. Gowda. In this case he attacked the Government for going in appeal and in the other case where they have accepted the

award, he asks why the Government did not take it to a court of law and challenge it and he says that it is a mistake of the Government. I do not know whether he has said this after going through the award in detail. Government have a machinery of their own. They have got the Law Department consisting of officers of the status of District Judge and they have got the Advocate General in addition to that. When the Government after consulting the Law Department and the Advocate General come to a decision on matters of law and decide whether a particular course is just or not, it is not for us without knowing the details of all that to question the opinion of the law experts in all these matters which involve legal interpretation. So in all these matters of arbitration, there is no question of justifying the award in one case and criticising the award in the other because it is only people who have got experience who have sat over the arbitration and given their considered opinion and on the advice of the Law Department the Government have taken a decision to accept the award. Is it not wisdom on their part? We cannot expect the Government to have a litigant spirit as we see in others.

Sri S. SIVAPPA.—Why did they not take the same advice from the Law Department when they preferred negotiation ?

Sri C. J. MUCKANNAPPA.—When even in small matters they go to the Supreme Court and spend huge sums, why did they not take this to the court ?

Sri GANJI VEERAPPA.—Government had entrusted this to no less a person than the Advocate General of Mysore. As a man who knows a little of law, I have myself gone through these awards and the decisions of the arbitrator and I find that Government have taken proper decisions in all these matters When we go into the technicalities of law, perhaps opinions are different, but in all such matters we must analyse the whole thing with a dispassionate mind. Only then we will be in a position to know the truth. This is with regard to matters that were referred to arbitration because this is the only point on which our friends perhaps may think, honestly no doubt, that Government have not acted properly and that if Government had acted properly and correctly they would have saved all these sums for Government. The Government have settled all the awards except one. My friend was saying that the award in the case of Ramaiah was for Rs. 19 lakhs, but I find it is only for Rs. 13 lakhs and that was paid to him. I do not want to enter into details of all the matters referred to in the arbitration case as that is not within our scope, when we are discussing an important matter like the White Paper. I read this White Paper for the second time this morning and the more I read it, I find that the truth has been laid bare and the full facts have been placed before us so that Government have not hidden anything from us. All points which are advantageous to them and also those which are inconvenient to them are also here. So if we go through the White Paper in a dispassionate manner, we will have to give credit to the Government for having come out with the entire picture of all these things. This is a matter which has spread like wild fire in the country and wherever we

(SRI GANJI VEERAPPA)

go we find people discussing this thing without knowing the full facts of the case. The hon'ble member Sri Muckannappa may say that I am a member of the Congress Party and in that capacity I am arguing the case and trying to substantiate or justify what the Government have done. But I may say that I have an open mind. With an open mind if you analyse the whole thing, the Government have completed this work in schedule time, the quality of work is excellent. In fact, it has been certified by no less a person than Dr. Rao who is an expert authority in the field of irrigation projects in the country. When he has okayed the whole thing, that should be an end for the whole discussion of this matter. When the no-confidence motion was discussed here, I think Sharavathy was the trump card of the Opposition. But at that time all these full facts about the Sharavanthy were not before us. Now the whole thing is before us and now let there be a finality for the discussion about this matter and let us understand each other well. We only wish that the Government will go ahead with this project and let us tell to the Government that they have the full support of all the hon'ble members of this House. If this discussion would help them really to do something better with greater care. I am sure Government will take it in that light so that it will certainly improve matters. But if there is anything that we have to tell them that is to complete the work in record time.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೆ, ಮಾರ್ಚಿ ಎರಡನೆಯ ತಾರೀಖು ಈ ಸಭೆಯ ಮುಂದೆ ಸರ್ಕಾರದವರು ಮಂಡಿಸಿದ ಶರಾವತಿ ಯೋಜನೆಗೆ ಸಂಬಂಧಪಟ್ಟ ಶ್ವೇತಪತ್ರದ ಬಗ್ಗೆ 135 ದಿವಸಗಳ ನಂತರ ಈಗ ನಾವು ಚರ್ಚೆ ಮಾಡುತ್ತಿದ್ದೇವೆ. ಹಿಂದೆ ಈ ಸಭೆಯಲ್ಲಿ ಶರಾವತಿ ಪ್ರಕರಣದ ಪ್ರಸ್ತಾಪ ಬಂದಾಗ ಮಾನ್ಯ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲೇನು ಹೇಳಿದ್ದಾರೆಂದರೆ '' ನೀವು ಹೇಳತಕ್ಕದ್ದು ಇಲ್ಲಿ ಬಹಳ ದುರುಪಯೋಗ ಮಾಡಿದ್ದಾರೆ ಎಂದು. ಎಲ್ಲಾ ಲೆಕ್ಕ ಹಾಕಿದರೂ ಕೂಡ 40 ಲಕ್ಷ ಆದೀತು, ಪ್ರಾಯಶಃ 50 ಲಕ್ಷ ಎಂದು ಇಟ್ಟುಕೊಳ್ಳಬಹುದು, ಅದನ್ನು ನಾನು ನೋಡುತ್ತಿದ್ದೇನೆ... ಇತ್ಯಾದಿ ಹೇಳಿ ಈ ಸಭೆಯ ಮುಂದೆ ವಿವರಗಳನ್ನಿಡುತ್ತೇನೆ, ಇಲ್ಲದಿದ್ದರೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೇನೆ... ಎಂದು ಹೇಳಿದರು.

ಸ್ವಾಮಿ, ಈಗಾಗಲೇ ಮಾನ್ಯ ವಿ. ಎಸ್. ಪಾಟೀಲ್‌ರವರು ಹೇಳಿರುವ ಹಾಗೆ ಇದೊಂದು ಶ್ವೇತ ಪತ್ರವಲ್ಲ, ಇದು ಒಂದು ಕರಾಳಪತ್ರ. ಸಾಮಾನ್ಯವಾಗಿ ಕಳ್ಳತನ ಮಾಡತಕ್ಕವರನ್ನು ಕೋರ್ಟಿನಲ್ಲಿ ಶಿಕ್ಷೆಮಾಡಲಾಗುತ್ತದೆ. ಹಾಗೇ ದರೋಡೆಮಾಡತಕ್ಕವರನೂ ಶಿಕ್ಷೆಮಾಡುತ್ತೇವೆ. ಆದರೆ ನಾವು ಇತ್ತೀಚಿನ ಇತಿಹಾಸದಲ್ಲಿ ನಮ್ಮ ರಾಜ್ಯಒಂದರಲ್ಲೇ ಏಕೆ ಇಡೀ ಭಾರತದಲ್ಲೇ ಇಂಥಾ ಒಂದು ಸಂಘಟಿತ ಲೂಟಿ ಹಾಗೂ ದರೋಡೆಗಳು ಇಲ್ಲಿ ನಡೆಯುತ್ತಿವೆಯೆಂಬುದು ಈ ಶ್ವೇತಪತ್ರದಲ್ಲಿರತಕ್ಕ ಅಂಕಿ ಅಂಶಗಳಿಂದಲೇ ಯಾರಿಗಾದರೂ ನಿದರ್ಶನವಾಗದೆ ಇರದು ಎಂದು ನನಗನಿಸುತ್ತಿದೆ.

ಇಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಲು 1956 ರಲ್ಲಿ ಅಲ್ಲಿ ಮೊದಲು 2 ಡಿವಿಜನ್‌ಗಳನ್ನು ಪ್ರಾರಂಭ ಮಾಡಿದರು. ಅದಾದ ಬಳಿಕ ಅಲ್ಲಿ ಕ್ರಮೇಣ 16 ಪಿ. ಡಬ್ಲ್ಯು. ಡಿ. ಡಿವಿಜನ್‌ಗಳನ್ನು ಸ್ಥಾಪನೆ ಮಾಡಲಾಯಿತು. ಆಗ ಅಲ್ಲಿ ನಡೆಯಬೇಕಾಗಿದ್ದ ಕೆಲಸ ಕಾರ್ಯಗಳನ್ನು ಇಲಾಖೆಯವರೇ ಪೀಸ್‌ವರ್ಕ್ ಸಿಸ್ಟಂ ಮೇಲೆ ನಡೆಸುತ್ತಿದ್ದರು. ಆಗ ಈ ಶಾಖೆಗೆ ಶ್ರೀಮಾನ್ ಎಚ್. ಎಂ. ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದರು. ಅವರು ಇಂಥಾ ಒಂದು ದೊಡ್ಡ ಕೆಲಸವನ್ನು, ಯೋಜನೆಯನ್ನು ಪೀಸ್‌ವರ್ಕ್ ಮೇಲೆ ಮಾಡುವುದಕ್ಕಾಗುವುದಿಲ್ಲ. ಈ ಕಾರ್ಯವನ್ನು ಬೇಗ ಮುಗಿಸ ಬೇಕಾಗಿದೆ ಅದಕ್ಕಾಗಿ ದೇಶದಲ್ಲಿರತಕ್ಕ ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ಕರೆಸಲಾಯಿತು ಎಂಬುದಾಗಿ ಆ ವಿಚಾರವನ್ನ ಈ ಶ್ವೇತಪತ್ರದಲ್ಲೂ ತಿಳಿಸಲಾಗಿದೆ. 1959ರಲ್ಲಿ ಈ ಕೆಲಸವನ್ನು ಕೈಗೊಳ್ಳಲು ಕಂಟ್ರಾಕ್ಟರುಗಳನ್ನು ಕರೆಸಲಾಯಿತೆಂಬ ವಿಷಯ ಈ ಪತ್ರದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆಗ ಭಾರತದಲ್ಲಿದ್ದ ಎಲ್ಲಾ ದೊಡ್ಡ ದೊಡ್ಡ ಕಂಟ್ರಾಕ್ಟರುಗಳೂ ಇಲ್ಲಿಗೆ ಬಂದು ಕೆಲಸಗಳನ್ನು ಹಿಡಿದರು. ಆಗ ಅವರಿಗೆ ಈ ಕಾರ್ಯವನ್ನು ಷೆಡ್ಯೂಲ್ಡ್ ವೇಳೆಗಿಂತ ಮೊದಲೇ ಮುಗಿಸಬೇಕೆಂದು ಅವರಿಗೆ

ಒಪ್ಪಿಸಲಾಗಿದ್ದ ರೇಟಿನ ಮೇಲೆ 30 ಪರ್ಸೆಂಟನ್ನು ಜಾಸ್ತಿ ಮಾಡಲಾಯಿತು. ಇದರಿಂದ ರಾಜ್ಯ ಬೊಕ್ಕಸಕ್ಕೆ 6 ಕೋಟಿ ರೂಪಾಯಿಗಳ ನಷ್ಟವಾಯಿತು. ಹೀಗೆ 30 ಪರ್ಸೆಂಟ್ ಜಾಸ್ತಿ ಕೊಟ್ಟ ಅಂಶವನ್ನು ಆಗ ಮಂತ್ರಿಗಳಾಗಿದ್ದ ಶ್ರೀ ಚೆನ್ನಬಸಪ್ಪನವರು ಸಮರ್ಥನೆಮಾಡಿ ಕೊಳ್ಳಲು ಇದೇ ಸಭೆಯ ಮುಂದೆ ಅವರೇ ಹೊರಡಿಸಿದ್ದ ಒಂದು ಅವರ ಶ್ವೇತಪತ್ರದಲ್ಲಿ ಈ ಪವರನ್ನು ರಾಜ್ಯಕ್ಕೆ 1962ನೇ ಡಿಸಂಬರ್ ಮಧ್ಯ ರಾತ್ರಿ 12 ಘಂಟೆಯೊಳಗೆ ಕೊಡಬೇಕಾದ ಪ್ರಮೇಯ ಇರುವುದರಿಂದ, ಕೆಲಸಗಳು ಅತಿ ಜರೂರಾಗಿ ಆಗಬೇಕಾಗಿದ್ದವು. ಆದಕಾರಣ ಹೀಗೆ ಒಪ್ಪಿಗೆಯಾಗಿದ್ದ ರೇಟಿನ ಮೇಲೆ 30 ಪರ್ಸೆಂಟ್‌ನ್ನು ಜಾಸ್ತಿಯಾಗಿ ಕೊಡಬೇಕಾಯಿತೆಂದು ಇಲ್ಲೇ ತಿಳಿಸಿದ್ದರು. ಅದೇ ಅಂಶವನ್ನು ಈ ಶ್ವೇತಪತ್ರದಲ್ಲೂ ಉಲ್ಲೇಖಿಸಲಾಗಿದೆ.

As the events subsequent to the Minister's statement on 18th Decr. 1959 have invited further criticism or have given rise to misunderstandings, it is felt necessary to place one more statement on the Table of the House.''

ಇಲ್ಲಿ ಹೀಗೆ ಹೇಳಿರುವುದರಿಂದ, ಈ ಹಿಂದೇನು ನಮ್ಮ ಹರಿಹರ ಕ್ಷೇತ್ರದಿಂದ ಬಂದಿರತಕ್ಕ ಮಾನ್ಯ ಸದಸ್ಯರು ಹೇಳಿದರು, ಅದು ಸರಿಯಲ್ಲ. ಏಕೆಂದರೆ ಅವರು ಹೇಳಿದರು ಆ ಹಳೆಯ ಮಂತ್ರಿಮಂಡಲ ಇದ್ದಕಾಲಕ್ಕೆ ಆರ್ಬಿಟ್ರೇಷನ್ ಆದದ್ದು. ಆಗ್ಗೆ ಈ ಮಂತ್ರಿಮಂಡಲ ಇರಲಿಲ್ಲ. ಎಂದು ಅವರು ಹೇಳಿರತಕ್ಕದ್ದು ಸರಿಯಲ್ಲ. ಈ ಮಾತನ್ನು ಶ್ರೀ ಕಡಿದಾಳರೆತ್ತಿದ ವಾದಕ್ಕೆ ಉತ್ತರವಾಗಿ ಇವರು ಹೇಳಿದರು. ಆದರೆ ನಾನು ಈ ವಿಚಾರದಲ್ಲಿ ಹೀಗೆ ಅಭಿಪ್ರಾಯ ಪಡುತ್ತೇನೆ: 1956 ರಿಂದ ಈ ವಿಚಾರದಲ್ಲಿ ಯಾವ ಯಾವ ಅಧಿಕಾರಿಗಳಿದ್ದರು, ಯಾರು ಈ ಅಣೆಕಟ್ಟಿನ ಶಂಖುಸ್ಥಾಪನೆ ಮಾಡಿದರು, ಅಲ್ಲಿಂದಿಲ್ಲಿಯವರೆಗೂ ಎಷ್ಟೆಷ್ಟು ಜನ ಮಂತ್ರಿಯಾಗಿ ಹೋಗಿದ್ದಾರೋ ಅವರೂ, ಮತ್ತು ಆಡಳಿತ ವಿಭಾಗದಿಂದ ಯಾವ ಯಾವ ಅಧಿಕಾರಿಗಳಿದ್ದರೋ ಅವರೂ, ಅದರಲ್ಲೇನೋ ಈಗಾಗಲೇ ಇಬ್ಬರು ಮಾತ್ರ ಮೃತಪಟ್ಟಿರುತ್ತಾರಂತೆ, ಆದರೆ ಇನ್ನು ಕೆಲವರು ರಿಟೈರಾಗಿರಬಹುದು, ಕೆಲವರಿಗೆ ಕಂಪಲ್‌ಸರಿ ರಿಟೈರ್‌ಮೆಂಟಾಗಿರಬಹುದು, ಆದರೆ ಇವರೆಲ್ಲರೂ ಜವಾಬ್ದಾರರು, ಇಷ್ಟು ಜನರು ಸಾರ್ವಜನಿಕರ ಎದುರಿನಲ್ಲಿ ನಿಂತು, ಹೀಗೆ ಸಾರ್ವಜನಿಕರ ಹಣವನ್ನು ಪೋಲುಮಾಡಿರುವುದಕ್ಕೆ ಜವಾಬನ್ನು ಕೊಡತಕ್ಕ ಹೊಣೆ ಅವರೆಲ್ಲರಮೇಲೂ ಇದೆ ಎಂದು ಹೇಳುತ್ತೇನೆ. ಆದರೆ ಇದಕ್ಕೆಲ್ಲಾ ಶ್ರೀಮಾನ್ ನಿಜಲಿಂಗಪ್ಪನವರೊಬ್ಬರೇ ಎಂದು ನಾನು ಹೇಳತಕ್ಕವನಲ್ಲ. ಸಾರ್ವಜನಿಕರು ಈ ಕೆಲಸದ ವಿಚಾರದಲ್ಲಿ 1956 ರಿಂದಲೂ ಸರ್ಕಾರದವರು ಇದರ ಬಗ್ಗೆ ನಡೆಸಿರತಕ್ಕ ಕಾರ್ಯಕ್ರಮಗಳ ಬಗ್ಗೆ ಒಂದು ಶಂಕೆಯನ್ನು, ಒಂದು ಅನುಮಾನವನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಆದುದರಿಂದ ನಾವೀಗ ಕೆಲವು ವಿಷಯಗಳನ್ನು ಇಲ್ಲಿ ಪರಿಶೀಲನೆ ಮಾಡಬೇಕಾಗಿದೆ. ಈಗ ನಮ್ಮ ಕೈಲಿರತಕ್ಕ ಈ ಶ್ವೇತಪತ್ರವೇ ಇದರ ವಿಚಾರದಲ್ಲಿ ಒಂದು ಬಹಿರಂಗ ನ್ಯಾಯವಿಚಾರಣೆಯಾಗುವುದು ಅಗತ್ಯವೆಂಬುದನ್ನು ಸೂಚಿಸಲು ತಕ್ಕ ಅಂಕೀ ಅಂಶಗಳನ್ನು ಒದಗಿಸುತ್ತಿದೆ. ಇಲ್ಲಿ ಕಟ್ಟಿರತಕ್ಕ ಡ್ಯಾಮನ್ನು ಅವಸರ ಅವಸರವಾಗಿ ಕಟ್ಟಬೇಕಾಯಿತು, ನಿಧಾನವಾಗಿ ಆಲೋಚನೆಮಾಡುವುದಕ್ಕೆ ವ್ಯವಧಾನವಿರಲಿಲ್ಲ ಎಂಬುದನ್ನು ಹಾಗೂ ಸರ್ಕಾರ ಜನರಿಗೆ ಅತಿಶೀಘ್ರವಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕಾಗಿತ್ತು ಎಂಬುದನ್ನು ಅನೇಕ ಸಾರಿ ಇದರಲ್ಲಿ ಒತ್ತಿ ಒತ್ತಿ ಹೇಳಲಾಗಿದೆ. ನಾನು ಕುತೂಹಲಕ್ಕಾಗಿ ಈ ದಿವಸ ಬೆಳಗ್ಗೆ ಈ ಶ್ವೇತ ಪತ್ರದಲ್ಲಿ ಎಷ್ಟಾವರ್ತಿ ಈ ಪದಗಳನ್ನು ಬಳಸಿರುತ್ತಾರೆಂಬುದನ್ನು ನೋಡಿದೆ. ಇಲ್ಲಿ ಅನೇಕ ಪುಟಗಳಲ್ಲಿ ಈ ಪದಗಳನ್ನು ಪದೇ ಪದೇ ಬಳಸಿರುತ್ತಾರೆ.

Page	*Para*	
3	5	expeditious completion
6	12	within the limited available for commencing work
7	15	take full advantage of the season
9	17	take full advantage...
10	19	timely completion
21	48	utilise the working season-race against time there were just 150 days—no time for reinvitation of tender—time schedule—speedy execution—slowing down schedule time
	49	delay...

(ಶ್ರೀ ಎಸ್. ಗೋಪಾಲ ಗೌಡ)

ಇಷ್ಟೆಲ್ಲವನ್ನು ಕೇಳಿದ ಮೇಲೂ ಶ್ರೀ ಲಕ್ಷ್ಮೀಕಾಂತಪ್ಪನವರು, ಅವರು ಅಲ್ಲೇ ಸದಾ ಇರುವುದಾಗಿಯೂ ಮತ್ತು ಅಲ್ಲಿ ಎಲ್ಲಾ ಕೆಲಸಕಾರ್ಯಗಳೂ ಬಹಳ ತ್ವರಿತವಾಗಿ ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿ ಒಂದು ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. ಅವರು ಅಲ್ಲೇ ಸ್ಥಳದಲ್ಲೇ ಇರುತ್ತಾರೆಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ನಾನೂ ಕೂಡ ಅದೇ ಸ್ಥಳದಲ್ಲಿರತಕ್ಕವನು. ಅಲ್ಲಿ ಯಾರ್ಯಾರು ಹೇಗೇಗೆ ಎಷ್ಟೆಷ್ಟು ಹಣ ಗಳಿಸಿದ್ದಾರೆಂಬುದನ್ನು ನಾನೂ ನೋಡಿದ್ದೇನೆ. ಅಲ್ಲಿ ಯಾವ ಒಂದು ಕೆಲಸವೂ ಸಮರ್ಪಕವಾಗಿ ನಡೆದಿಲ್ಲ. ಅಲ್ಲಿ ಪೂರಾ ಹಣ ಪೋಲಾಗಿದೆ. ಸರ್ಕಾರ ಕೆಲಸವನ್ನು ನಡೆಸತಕ್ಕ ವಿಧಾನ ಅದಲ್ಲ ಎಂದು ನಾನು ಹೇಳುತ್ತೇನೆ. ಆದರೆ ನಾನು ಈಗ ಸಭೆಯಲ್ಲಿ ಒಂದು ಕುತೂಹಲಕರವಾದ ಸಂಗತಿಯನ್ನು ಹೊರಗೆಡವಬೇಕಾಗಿದೆ. ಅದೇನೆಂದರೆ. ರಾಜ್ಯಬೊಕ್ಕಸದ ಆಡಳಿತವನ್ನು ಹಿಡಿದಿರತಕ್ಕ ಶ್ರೀಮಾನ್ ಬಿ. ಡಿ. ಜತ್ತಿಯವರು ಇಲ್ಲಿಯವರೆಗಾದರೂ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿರುವುದಿಲ್ಲ, ಅವರು ಉದ್ದೇಶವಾಗಿ ಗೈರ್‌ಹಾಜರಾಗಿರುತ್ತಾರೆ. ಇದು ಅನೇಕರಲ್ಲಿ ಬಹಳ ಕುತೂಹಲವನ್ನುಂಟುಮಾಡಿದೆ. ಹೀಗೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗತಕ್ಕ ಸ್ಥಳಕ್ಕೆ ಒಂದು ಸಲವಾದರೂ ಹಣಕಾಸಿನ ಸಚಿವರು ಭೇಟಿಕೊಡದಿರುವುದನ್ನು ನೋಡಿದರೆ ಇದೊಂದು ದೊಡ್ಡ ವಿಸ್ಮಯಕರವಾದ ಸಂಗತಿಯಾಗಿದೆ. ಇದರಲ್ಲಿ ಎರಡು ಅರ್ಥವಿವೆ. ಒಂದು ಅಲ್ಲಿ ನಡೆಯತಕ್ಕ ದುರ್ವ್ಯವಹಾರಗಳನ್ನು ಇವರಿಗೆ ಕಣ್ಣಿನಿಂದ ನೋಡುವುದಕ್ಕಾಗದೆ ಇವರು ಅಲ್ಲಿಗೆ ಹೋಗಲಿಲ್ಲವೋ, ಅಥವಾ ಇಲ್ಲಿಗೆ ಹೋಗಿ ಇಂಥಾ ದುರ್ವ್ಯಹಾರದಲ್ಲಿ ನೇರವಾಗಿ ಸಿಕ್ಕುಹಾಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು ಹೀಗೇನಾದರೂ ಮಾಡಿದ್ದಾರೋ ..

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಮಂತ್ರಿಗಳು).—ನನಗೆ ಅಂಥಾ ಭಯ ಯಾವತ್ತೂ ಇಲ್ಲ. ನನ್ನ ಜೊತೆಯಲ್ಲಿ ಯಾರೇ ಬರಲಿ ಅವರನ್ನೂ ಜೊತೆಯಲ್ಲಿ ಕರೆದುಕೊಂಡುಹೋಗಲು ನಾನು ತಯಾರಾಗಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈಗ ಶ್ರೀಮಾನ್ ಶಿವಪ್ಪನವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ವಿಷಯಗಳು ನ್ಯಾಯಾಲಿಯಕ್ಕೆ ಒಪ್ಪಿಸಿ ವಿಚಾರವನ್ನು ಮಾಡುವುದಕ್ಕೆ ತಕ್ಕಂಥ ವಿಷಯಗಳು ಎಂದು. ಮಾನ್ಯ ನಿಜಲಿಂಗಪ್ಪನವರೂ ಒಪ್ಪಿದ್ದಾರೆ. ಸುಮಾರು 50 ಲಕ್ಷ ರೂಪಾಯಿ ಅಗಿರಬಹುದು ಅಂತ. ಇದು ಸಣ್ಣ ಹಣವಲ್ಲ, ಬಹಳ ದೊಡ್ಡ ಪ್ರಮಾಣದ ಹಣ; ಇದು ಹೇಗೆ ದುರುಪಯೋಗವಾಯಿತು, ಇವಕ್ಕೆ ಯಾರು ಹೊಣೆ ಎಂದು ರಾಜ್ಯದ ಪ್ರಜೆಗಳೂ ಮತ್ತು ಅವರ ಪ್ರತಿನಿಧಿಗಳೂ, ತಮ್ಮನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

9-30 A.M.

ಇನ್ನು ಇದರಲ್ಲಿ ಮುಖ್ಯವಾಗಿ ನಮಗೆ ಕೊಟ್ಟಂಥ ಅಂಕಿಅಂಶಗಳಲ್ಲಿ ಕೆಲವು ವಿಷಯಗಳನ್ನು ಮಾತ್ರ ಈ ಸಮಯದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೇಸನ್ರಿ ಡ್ಯಾಮನ್ನು ಕಟ್ಟಬೇಕು ಅಂತ ತೀರ್ಮಾನವಾಗಿತ್ತು ಎಂತ ಹೇಳುತ್ತಾರೆ. ಆದರೆ ಮೂಲಬದ್ಧವಾದ ದೋಷ ಇನ್‌ವೆಸ್ಟಿಗೇಶನ್ನಿನಲ್ಲಿಯೇ ಇದೆ; ಸಾಕಷ್ಟು ವಿಚಾರ ಮಾಡದೇನೆ ಕೆಲಸ ಆರಂಭ ಮಾಡಿದರು ಅಂತ ಹೇಳಿ ನಮಗೆ ಅವರ ಮಾತಿನಿಂದಲೇ ಗೊತ್ತಾಗುತ್ತದೆ. ಪ್ರಾರಂಭವಾದ ಮೇಲೆ ಈ ಕೆಲಸವನ್ನು ಹಂಚಿ ಹಾಕುತ್ತಾರೆ. ಅದರಲ್ಲಿ ತಾರಾಪೂರ್ ಎಂಬ ಒಬ್ಬ ಕಂಟ್ರಾಕ್ಟರಿಗೆ ವಿಭಾಗ (4), (5), ಮತ್ತು (7) ಕೊಡಲಾಗಿತ್ತು. ಕೆಲಸ ಆರಂಭವಾದ ಮೇಲೆ, ಸುಮಾರು 50 ಅಡಿ ಅಗೆದಮೇಲೆ ಮೇಸನ್ರಿ ಡ್ಯಾಮ ಅಗುವುದಿಲ್ಲ, ಕಲ್ಲು ಸಿಗುವುದಿಲ್ಲ, ಅದ್ದರಿಂದ ಇದನ್ನು ಅರ್ತನ್ ಡ್ಯಾಮ್ ಮಾಡಬೇಕು ಅಂತ ತೀರ್ಮಾನ ಮಾಡುತ್ತಾರೆ; ಬಹಳ ವಿಚಾರ ಮಾಡಿದನಂತರ ಅರ್ತನ್ ಡ್ಯಾಮ ಮಾಡಬೇಕು ಅಂತ ತೀರ್ಮಾನ ಮಾಡುತ್ತಾರೆ. ಕ್ಲಾಸು 24-25ರಲ್ಲಿ ಇವರೇ ಮೇಸನ್ರಿ ಡ್ಯಾಮ್ ಕೆಲಸಮಾಡಬೇಕೆಂದು ಇದೆಯೆಂದು ಹೇಳುತ್ತಾರೆ. ಇದರಲ್ಲಿ ರೇಟುಗಳನ್ನೂ ಕೂಡ ಕೊಟ್ಟಿದ್ದಾರೆ. ಶ್ವೇತಪತ್ರದಲ್ಲಿ ಹೀಗೆ ಹೇಳುತ್ತಾರೆ.

After full examination of the full implications involved, the Board recommended and the Government accepted the recommendation that in accordance with Clauses 27 and 28 of the Agreement entered into with the contractors, the substituted work had to be entrusted to the same contactors, the rates to be paid to them being derived in the manner indicated therein.

ಮೇಸನ್ರಿ ಡ್ಯಾಮು ಬಿಡಬೇಕು ಅಂತ ಆಯಿತು. ಈ ಕೆಲಸಕ್ಕೆ ದರ ರೂಪಾಯಿ 270.82 ಒಂದು ಘನ ಅಡಿಗೆ ಕೊಡಬೇಕು ಅಂತ ಅವರು ಹೇಳುತ್ತಾರೆ. ಚಿ,ಚಿ, ಇದು ಬಹಳ ದುಬಾರಿ, ರೇಟನ್ನು ಕಡಿಮೆ ಮಾಡಬೇಕು ಅಂತ ಹೇಳಿ, ಎಲ್ಲಾ ಕಡೆ ಹೋಗಿ ನೋಡುತ್ತಾರೆ; ಅದರಲ್ಲಿ ಒಂದಿಷ್ಟು ಕಾಲವನ್ನು ತೆಗೆದುಕೊಳ್ಳುತ್ತಾರೆ. ಆಮೇಲೆ 200 ರೂಪಾಯಿ ಸರಿಯಾದ ದರ ಅಂತ ಸಿವಿಲ್ ಇಂಜನಿಯರಿಂಗ್ ಸಬ್-ಕಮಿಟಿಯವರು ತೀರ್ಮಾನಮಾಡುತ್ತಾರೆ. ಅರ್ದನ್ ಕೆಲಸ ಪ್ರಾರಂಭ ಮಾಡುತ್ತಾರೆ. ಆಮೇಲೆ ಒಂದು ನೋಟೀಸು ಕೊಟ್ಟು ದರವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹೀಗೆ ವೈಟ್‌ಪೇಪರಿನಲ್ಲಿ ಹೇಳಿದ್ದಾರೆ. The contractors in a subsequent letter dated 20th February 1960, intimated that though they agreed to a rate of Rs. 216·62 per 1000 cubic feet during negotiations, they would be entitled to claim extra for any enhancement of rates as a result of Government action, either State or Central ನಂತರ ಆರ್ಬಿಟ್ರೇಶನ್ನಿನಲ್ಲಿ 245 ರೂಪಾಯಿ ಕೊಡಿಸಿದ್ದಾರೆ. ಕಾಂಪ್ಯಾಕ್ಷನ್ ನಿಲ್ಲಿಸಲಿಕ್ಕಾಗಲಿಲ್ಲ; ಕಾಂಪ್ಯಾಕ್ಷನ್ ಮೆಶಿನರಿ ತಂದು ಹಾಕಿದ ಮೇಲೇ, ಕಾಂಪ್ಯಾಕ್ಷನ್ ಮಾಡಬೇಕು, ಇಲ್ಲದೆ ಹೋದರೆ ಗಟ್ಟಿಯಾಗುವುದಿಲ್ಲ. ಮೆಶಿನರಿ ಬರಲಿಲ್ಲವೆಂತ ತಾರಾಪುರ್‌ರವರಿಗೆ 35 ರೂಪಾಯಿ ಜೊತೆಗೆ 30 ರೂಪಾಯಿ ಕೊಟ್ಟು ಬಿಟ್ಟಿದ್ದಾರೆ. ಇಂಜನಿಯರ್ ಇಲಾಖೆಯವರಿಗೆ ಸಾಕಷ್ಟು ಸಿಬ್ಬಂದಿ ಸೌಕರ್ಯ ಸಿಕ್ಕದ್ದರಿಂದ ಈ ಕಾಂಪ್ಯಾಕ್ಷನ್ ವರ್ಕನ್ನೂ ಅವರಿಗೇ ಕೊಡಬೇಕಾಯಿತು ಎಂದು ಹೇಳಿದ್ದಾರೆ. ಯಾರೋ ಸಂಬಂಧಪಟ್ಟ ಇಂಜನಿಯರುಗಳನ್ನು ಇಲ್ಲಿ ಕೂರಿಸುವುದು ಬಹಳ ಅಪಾಯ. ಏಕೆಂದರೆ, ಇಬ್ಬರು ಇಲ್ಲಿಯವರೆಗೆ ಹಾರ್ಟ್‌ಫೈಲ್ಯೂರ್ ಆಗಿ ಹೋಗಿಬಿಟ್ಟರು.

Mr. SPEAKER.—Let there be no personal remarks about individuals.

ಶ್ರೀ ಎಸ್. ಗೋಪಾಲಗೌಡ.—ವಾಸ್ತವಾಂಶ ಹೇಳಿದ್ದು. ಅದಕ್ಕೂ ಇದಕ್ಕೂ ಸಂಬಂಧವಿಲ್ಲದೆ ಇರಬಹುದು. The contractors had quoted on 14th September 1961 a rate of Rs. 35 per 1000 cft. for watering and compaction. The Civil Engineering Sub-Committee recommended a rate of Rs. 30 per 1000 cft

ಶ್ರೀ ನಿಜಲಿಂಗಪ್ಪನವರಿಗೆ ನಾನು ಹೇಳುತ್ತಾ ಇರುತ್ತೇನೆ. ಈ ಲೆಕ್ಕದಲ್ಲಿ ಬಹಳ ಮೋಸ ಗಳಿವೆ. ಕಂಟ್ರಾಕ್ಟರು ಲೀಡು, ಲಿಫ್ಟು, ಒಂದು ಮೈಲಿ, ಒಂದುವರೆ ಮೈಲಿ ಎಂದು ಆಡ್ ಮಾಡು ವುದರಲ್ಲಿ ಜಾಸ್ತಿ ಕೊಡಬೇಕಾಗುತ್ತದೆ. ನಾವೂ ನಿಜಲಿಂಗಪ್ಪನವರು ಇಬ್ಬರು ಕೂತುಕೊಂಡಿದ್ದರೂ, ನಮ್ಮ ಎದುರಿಗೇ ಸಿಮೆಂಟು ಹೊಡೆದು ಬಿಡುತ್ತಾರೆ. ಯುದ್ಧಕ್ಕೂ ಅಂಥದ್ದು ನಡೆದಿದೆ. ತಾರಾಪುರ್ ರವರಿಗೆ 27 ರೂಪಾಯಿಗಿಂತ ಹೆಚ್ಚಿಗೆ ಕೊಡುವುದಿಲ್ಲ ಅನ್ನುವ ಪ್ರಶ್ನೆ ಬರಬಹುದು. ಇದರಲ್ಲಿ ಬಹಳ ಮೋಗಪ್ಪಾಗಿ ನಡೆದಿದೆ. ಸಬ್ಸ್ಟಿಟ್ಯೂಟ್‌ಡ್ ವರ್ಕ್ ಅದೇ ಕಂಟ್ರಾಕ್ಟರಿಗೆ ಕೊಡಬೇಕು ಎಂಬ ಒಂದು ಸನ್ನಿವೇಶ ಕ್ರಿಯೇಟ್ ಮಾಡಿಕೊಂಡಿದ್ದಾರೆ. ಅರ್ದನ್‌ವರ್ಕಿಗೆ ಎಷ್ಟು ಖರ್ಚಾಗುತ್ತದೆ ಏನು ದರ ಅನ್ನುವುದು ಎಲ್ಲಿಯೂ ಕರಾರುವಾಕ್ಕಾಗಿ ಎಲ್ಲಿಯೂ ನಮಗೆ ಸಿಗುವುದಿಲ್ಲ. ಆದರೆ ಕೆಲಸ ಮಾಡು ವಾಗ 200 ರೂಪಾಯಿ ಸಾಕಾಗುತ್ತದೆಂದು ಹೇಳಿದ್ದರು. ಅದನ್ನು ಕೊಡಲಿಲ್ಲ. ಒಂದು ಸಾವಿರ ಘನ ಅಡಿಗೆ 75 ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ಇದು ವಿಚಾರಮಾಡುವುದಕ್ಕೆ ಬಹಳ ಅರ್ಹ ವಾಗಿರುತ್ತದೆ. ಇದು ಒಂದು ವಿಚಾರ ಸ್ವಾಮಿ.

ಈ ರೇಟು ಬಗ್ಗೆ ಏನೇನೋ ವಿಚಾರಗಳು ನಡೆದಿವೆ. ಪ್ಯಾರ 13,14,15,16,17,18,19 ರಲ್ಲಿರುವ ರೀಸನಬಲ್ ರೇಟು ಸಾಲದು ಅಂತ, ಇದೆಲ್ಲಾ ಆದಮೇಲೆ ತಾರಾಪುರ್‌ರವರು ಕೊನೆಗೆ ಆರ್ಬಿಟ್ರೇಶನ್ನಿಗೆ ಹೋಗುತ್ತಾರೆ. ಸುಮಾರು 42 ಲಕ್ಷ ರೂಪಾಯಿ ಸರಕಾರದವರು ಆರ್ಬಿಟ್ರೇಷನ್ ಮೂಲಕ ಕೊಟ್ಟಿದ್ದಾರೆ.

ಇದರ ಜೊತೆಯಲ್ಲಿ ಇನ್ನೊಂದು ಅಂಶವಿದೆ. ಮೇಸನ್ರಿ ಡ್ಯಾಮು, ಇತ್ಯಾದಿ, ಮಾಡುವಾಗ ತಾರಾಪುರ್‌ರವರು ರಾಕಟೊ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಕೊನೆಗೆ 60 ರೂಪಾಯಿ ರೇಟಿಗೆ ಕೆಲಸಮಾಡುತ್ತೇವೆ ಅಂತ ಒಪ್ಪಿಕೊಂಡಿರುವುದನ್ನು ತಾವು ನೋಡಬಹುದು. ಸಬ್‌ಸಿಕ್ವೆಂಟಾಗಿ ರೇಟು ರಿವೈಸ್ ಮಾಡಿದ್ದಾರೆ. ಈ ಹಕ್ಕುಯಾವುದು, ಈ ಹಕ್ಕು ಎಲ್ಲಿದೆ ಅನ್ನುವುದು ಪ್ರಶ್ನೆ. ಆ ಹಕ್ಕು ಇಲ್ಲದೆ ಅವರಿಗೆ ಹೆಚ್ಚು ದರ ಕೊಡುತ್ತೀರ?

ಪ್ಯಾರ 26ರಲ್ಲಿ ಅರ್ದನ್ ಡ್ಯಾಮು ಬಗ್ಗೆ ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಶನ್ನಿನವರು ಹೇಳಿದ್ದಾರೆ. ಇಷ್ಟು ರಾಕ್ ಫಿಲ್ ಮಾಡುವುದಕ್ಕಾಗುವುದಿಲ್ಲ, ಕ್ವಾಂಟಿಟಿ ಬಹಳವಾಯಿತು, ವಿಮರ್ಶೆಮಾಡಿ ಅಂತ 23 ಸಲ ನಮ್ಮವರು ಅವರನ್ನು ಕೇಳಿದರೂ, ಕೊನೆಗೂ ಅವರು ಇವರ ಪ್ರಪೋಸಲ್ಲಿಗೆ ಒಪ್ಪಲಿಲ್ಲವೆಂದು ಹೇಳುತ್ತಾರೆ. ಅಂದರೆ ರಾಕ್‌ಫಿಲ್ಲಿಂಗನ್ನು ಕಡಿಮೆ ಪ್ರಮಾಣದಲ್ಲಿ

(ಶ್ರೀ ಎಸ್. ಗೋಪಾಲ ಗೌಡ)

ಮಾಡಬೇಕು ಅಂತ. ಅದು ಹಾಗೆಯೇ ಕೆಲಸ ಪ್ರಾರಂಭವಾಗುತ್ತದೆ. ಸ್ಪ್ಯಾಮಿ, ರಾಕ್‌ಫಿಲ್ಲಿಂಗಿನಲ್ಲಿ ತಾರಾಪುರ್‌ರವರಿಗೆ ಬೇರೆ, ಮೆಸರ್ಸ್ ರಾಮಯ್ಯನವರಿಗೆ ಬೇರೆ, ಹೀಗೆ ಇಬ್ಬರು ಕಂಟ್ರಾಕ್ಟರುಗಳಿಗ ಕೂಡ ಕೊನೆಗೆ ದರವನ್ನು ಕೊಡುತ್ತಾರೆ.

ಮೊದಲು ತಾರಾಪುರ್ ಅಂಡ ಕಂಪೆನಿಯವರು ಅದನ್ನು ಒಪ್ಪಲಿಲ್ಲ ಎಂದು ಹೇಳುತ್ತಾರೆ. ಇದರ ಬಗ್ಗೆ ವಿಚಾರಮಾಡಬೇಕು. ಅವರಿಗೆ ಮೊದಲು ಒಂದು ಲಕ್ಷ 32 ಸಾವಿರ ಅಡಿ ಕಲ್ಲು ತುಂಬತಕ್ಕ ಕೆಲಸ ಇತ್ತು. ಅವರು ಅದನ್ನು ರಿಲಿಂಕ್ವಿಷ್ ಮಾಡುವಾಗ ಒಂದು ರೇಟನ್ನು ಕೊಡುತ್ತಾರೆ ಅವರು ಅದನ್ನೂ ಬಿಟ್ಟುಕೊಟ್ಟರು ಆಮೇಲೆ ಅವರಿಗೆ ಒಂದು ಲಕ್ಷ 88 ಸಾವಿರದ 300 ಯೂನಿಟ್ಟನ್ನು ರಾಕ್‌ಫಿಲಿಂಗ್ ಕೆಲಸ ಎಂದು ಕೊಟ್ಟರು. ಆಮೇಲೆ 2;61,83,072 ರೂಪಾಯಿಗಳ ಕಾಮಗಾರಿ ಕೆಲಸವನ್ನು 3ಜನ ಕಂಟ್ರಾಕ್ಟರುಗಳಿಗೆ ಕೊಟ್ಟರು. ಈ ಒಂದು ದುರಂತವನ್ನು ಬಹಿರಂಗವಾಗಿ ವಿಚಾರಮಾಡಬೇಕಾಗುತ್ತದೆ. ಆ ಮೇಲೆ ಈ ವರದಿಯಲ್ಲಿ But this meeting happend to be postpend ಎಂದು ಇದೆ. ಆ ಮೀಟಿಂಗ್ ಏತಕ್ಕೆ ಪೋಸ್ಟ್‌ಪೋನ್ ಆಯಿತು. ಈ ಮೂರು ಜನ ಕಂಟ್ರಾಕ್ಟರುಗಳೊಡನೆ ಯಾವಾಗ ಒಪ್ಪಂದವನ್ನು ಮಾಡಿಕೊಂಡರೋ ಆಗ ಆ ಟೆಂಡರುಗಳನ್ನು ಏತಕ್ಕೆ ಎಚ್. ಇ. ಸಿ. ಪಿ. ಬೋರ್ಡ್ ಮುಂದೆ ಇಡಲಿಲ್ಲ. ಇದು ಒಂದು ದೊಡ್ಡಪ್ರಮಾಣದ ಪ್ರಮಾದ. ಇದರಲ್ಲಿ ಕೊಟ್ಟಿರತಕ್ಕವರಿಗೂ ಮತ್ತು ತೆಗೆದುಕೊಂಡಿರತಕ್ಕವರಿಗೂ ನಿಕಟವಾದ ಸಂಬಂಧ ಮತ್ತು ಹಣವಲಾಭ ಆಗಿರಲೇಬೇಕು. ಇಲ್ಲಿ ಕೇವಲ ಅವಸರದ ಪ್ರಶ್ನೆ ಅಲ್ಲ. ಕೆಲಸ ಆಗಬೇಕು ಎನ್ನುವ ಪ್ರಶ್ನೆಯೂ ಅಲ್ಲ. ಇದರಲ್ಲಿ ಒಳ್ಳೆಯ ಒಂದು ಗುರಿಕಾಣುತ್ತದೆ. ಶ್ರೀಮಾನ್ ಗಾಂಜಿವೀರಪ್ಪನವರು ಈ ವಿಚಾರವಲ್ಲಿ ವಾದವನ್ನು ಮಾಡಿದರು. ಆದರೆ ಅವರಿಂದ ಏನೂ ಪ್ರಯೋಜನ ವಾಗಲಿಲ್ಲ. ಇಂಥಾ ವಾದಗಳಿಂದ ಈ ಕೆಲಸವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅಪ್‌ಸ್ಟ್ರೀಮಿನ ರಾಕ್‌ಫಿಲ್ ಕೆಲಸಕ್ಕೆ 40 ರೂಪಾಯಿಗಳ ರೇಟನ್ನು ಕಳುಹಿಸಿದ ವಿಷಯ ಬಂದೆ ಇದನ್ನು ಆಗಾಗ್ಯೆ ಪ್ರಸ್ತಾಪಮಾಡಿದೆ, ಇದರಲ್ಲಿ ಫಸ್ಟ್‌ಸ್ಟೇಜ್, ಮತ್ತು ಸೆಕೆಂಡ್‌ಸ್ಟೇಜ್ ಇದೆ. ಶ್ರೀಮಾನ್. ಎಂ. ಎಸ್. ರಾಮಯ್ಯನವರು ಒಪ್ಪಿಕೊಂಡ ದರಕ್ಕೆ ಈಗ ಅಲ್ಲಿ ಅವರು ಕೆಲಸವನ್ನು ಮಾಡುತ್ತಿದ್ದಾರೆ. ಶರಾವತಿ ಕನ್‌ಸ್ಟ್ರಕ್ಷನ್‌ನವರಿಗೆ ಏನು ಕೆಲಸವನ್ನು ಕೊಟ್ಟಿದ್ದಾರೆಯೋ ಅದು 33.36 ಪರ್ಸೆಂಟ್ ಎಸ್ಟಿಮೇಟಿಗಿಂತ ಕಡಿಮೆ ಕೊಟ್ಟಿದ್ದಾರೆ. ಈ ದರದಲ್ಲಿ ಅವರು ಅಲ್ಲಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಾವು ಯೋಚನೆಮಾಡಬೇಕು. ಇದಕ್ಕೆ ಏನು ಕಾರಣವನ್ನು ಕೊಟ್ಟಿದ್ದಾರೆಂದರೆ 1962ನೇ ಇಸವಿಯನಂತರ ಈ ಕೆಲಸವನ್ನು ಮಾಡಿಸು ವುದಕ್ಕೆ ಬಹಳಜನ ಕಂಟ್ರಾಕ್ಟರುಗಳು ಮುಂದೆ ಬರುತ್ತಿದ್ದಾರೆಂದು ಹೇಳಿದ್ದಾರೆ. ಆದ್ದರಿಂದ ಅಲ್ಲಿ ಸಣ್ಣ ಕಂಟ್ರಾಕ್ಟರುಗಳು ಯಾವ ದರದಲ್ಲಿ ಕೆಲಸವನ್ನು ಮಾಡಿಸುತ್ತೇವೆಂದು ಮುಂದೆ ಬಂದಿದ್ದರೋ ಅದನ್ನು ಒಪ್ಪಿಕೊಳ್ಳಲಿಲ್ಲ. ಅವರಿಗೆ ಅಲ್ಲಿ ಕೆಲಸಮಾಡಿಸುವುದಕ್ಕೆ ಅವಕಾಶವನ್ನು ಕೊಡಲಿಲ್ಲ. ಆದರೆ ದೊಡ್ಡಕಂಟ್ರಾಕ್ಟರುಗಳಿಗೆ ಒದಗಿಸಿರತಕ್ಕ ದರಗಳೇನಿವೆ ಅವು ಬಹಳ ಹೆಚ್ಚಿನ ದರಗಳು. ಆ ರೀತಿ ಹೆಚ್ಚಿನ ದರಗಳಿಗೆ ಅವರಿಗೆ ಅಲ್ಲಿ ಕಂಟ್ರಾಕ್ಟ್ ಕೊಡುವುದಕ್ಕೆ ಅಂಥಾ ಬಲವತ್ತರವಾದ ಕಾರಣಗಳೇನು? ಟೆಂಡರುಗಳನ್ನು ಮನಸೋ ಇಚ್ಛೆ ಆಯ್ಕೆಮಾಡಿಕೊಂಡು ಕಡಿಮೆ ಬಂದ ಟೆಂಡರುಗಳನ್ನು ಕೈಬಿಟ್ಟು ನಂತರ ಸಂಧಾನದಮೂಲಕ ಪಂಚಾಯಿತಿಯ ಮೂಲಕ ಇಷ್ಟುದೊಡ್ಡ ಕೆಲಸಗಳನ್ನು ಹಂಚಿಹಾಕಿಕೊಂಡರು. ಇದು ಕಾನೂನು ದೃಷ್ಟಿಯಿಂದಲೂ ಸರಿಯಲ, ನ್ಯಾಯ ದೃಷ್ಟಿಯಿಂದಲೂ ಸರಿಯಲ್ಲ, ಮತ್ತೆ ಯಾವ ದೃಷ್ಟಿಯಿಂದಲೂ ಇದು ಸರಿಯಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಮೇಲೆ ರೈಟ್‌ಬ್ಯಾಂಕ್ ಚಾನಲ್ R. C. C. Duet ಎದ್ದು ಬಂತು ಎಂದು ಹೇಳಿದ್ದಾರೆ. ಅದು ಆ ರೀತಿ ಆಗುವುದಕ್ಕೆ ನೆಲದ ಕೆಳಭಾಗದಿಂದ ಮೇಲ್ಗಡೆ ಹೊರಟಿರತಕ್ಕ ಅನಿರೀಕ್ಷಿತ ಒತ್ತಡವು ಪ್ರಾಯಶಃ ಕಾರಣವಾಯಿತು ಎಂದು ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಹೇಳಿದ್ದಾರೆ. ಪ್ರೈರೆಟ್ ಫೌಂಡೇಷನ್ ಹಾಕುವಾಗ ಅದಕ್ಕೆ ಡಿಸೈನ್ಸ್ ತಯಾರು ಮಾಡತಕ್ಕ ಇಲಾಖೆಯವರು ಅದನ್ನು ಸರಿಯಾಗಿ ಪರಿಶೀಲನೆ ಮಾಡಿದ್ದಾರೆಯೇ? ಈ ಚಾನಲ್ ವಿಷಯದಲ್ಲಿ ಅನೇಕ ರಾದ್ಧಾಂತಗಳು ನಡೆದಿವೆ. ಇದು ಹಿಂದೆಯೇ ಒಂದುಸಾರಿ ಕುಸಿದು ಬಂದಾಗ ಆದಕ್ಕೆ ಡಿಸೈನ್ ಬದಲಾವಣೆ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಇದನ್ನು ಕಟ್ಟಿದ್ದಾರೆ. ಇದೇನು ಶಾಶ್ವತವಾಗಿ ಉಳಿಯುತ್ತದೆಯೇ ಎಂಬುದನ್ನು ನಾವು ವಿಚಾರಮಾಡ ಬೇಕಾಗುತ್ತದೆ. ಆಮೇಲೆ ನೀರು ಹೋಗುವ ಗೇಟಿಗೆ ಹಗ್ಗ ಸರಪಣಿಯನ್ನು ಹಾಕಲಾಗಿದೆ. ಅದರಲ್ಲಿ ತುಂಬಾ ನೀರು ಬಂದು ಆದರಲ್ಲಿ ಸೀಪೇಜ್ ನೀರು ಹೋಗುವುದಕ್ಕೆ ಏನು ಕಂಡಿಗಳನ್ನು ಮಾಡಿದ್ದಾರೆಯೋ ಅದಕ್ಕೆ ಮರಳು ಮತ್ತು ಸಿಮೆಂಟನ್ನು ತುಂಬುತ್ತಿದ್ದಾರೆಂದು ನಾನು ಕೇಳಿ ದ್ದೇನೆ. ಆಮೇಲೆ ಪವರ್ ಚಾನಲ್ ದಿಕ್ಕನ್ನು ಡೈವರ್ಟ್ ಮಾಡುತ್ತಿದ್ದಾರೆ. ಮಹಾತ್ಮಗಾಂಧಿ

ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಭಕ್ರಾನಂಗಲ್, ದಾಮೋದರ ವ್ಯಾಲಿ, ಖಡಕವಾಸಲ ಇವುಗಳು ಆದ ಹಾಗೆ ಈ ಪ್ರಾಜೆಕ್ಟ್ ಆಗದೆ ಇರಲಿ ಎಂದು ನಮ್ಮ ಆಶಯ. ಆ ರೀತಿ ಆಗದಂತೆ ಕಾಪಾಡಲಿ ಎಂದು ನಾನು ದೇವರನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಯಾವ ಕಾರಣದಿಂದಲೂ ಅದು ಒಡೆದು ಹೋಗಬಾರದು, ದೇಶಕ್ಕೆ ನಷ್ಟ ಆಗಬಾರದು ಈ ದೃಷ್ಟಿಯಿಂದಲೂ ಶ್ರೀಮಾನ್ ನಿಜಲಿಂಗಪ್ಪ ನವರ ಮಂತ್ರಿಮಂಡಲದವರು, ಯಾವ ವ್ಯಾಮೋಹವೂ ಇಲ್ಲದೇ ಈ ಶರಾವತಿ ಪ್ರಾಜೆಕ್ಟಿನ ವಿಚಾರ ದಲ್ಲಿ ವಿಚಾರಣೆಯನ್ನು ನಡೆಸಬೇಕು. ಈ ಶರಾವತಿ ಯೋಜನೆಯ ಅಣೆಕಟ್ಟು ಭದ್ರವಾಗಿದೆಯೇ, ಇದು ಶಾಶ್ವತವಾಗಿ ಉಳಿಯುತ್ತದೆಯೇ, ಇದಕ್ಕೆ ತಕ್ಷಣ ರಿಪೇರಿ ಮಾಡಬೇಕಾದ ಅಗತ್ಯ ಇದೆಯೇ ಎಂಬುದನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು. ಶ್ರೀಮಾನ್ ಕೆ. ಎಲ್. ರಾವ್ ಅವರ ಸರ್ಟಿಫಿಕೇಟಿನಲ್ಲಿ ಸತ್ಯಾಂಶವಿದೆಯೋ ಅಥವಾ ಬರಿಯ ಹೇಳಿಕೆಯೋ ಎಂಬುದುದನ್ನು ಪರಿಶೀಲಿಸಬೇಕು. ಸರ್ಕಾರದವರು ಬೇರೆ ಕಂಟ್ರಾಕ್ಟ್‌ದಾರರಿಗೆ ಒಂದೂವರೆಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದನ್ನು ವಿಚಾರಣೆಮಾಡಬೇಕು. ಆಮೇಲೆ 30 ಲಕ್ಷ ರೂಪಾಯಿಗಳನ್ನು 3 ಜನ ಕಂಟ್ರಾಕ್ಟರುಗಳಿಗೆ ಅಡ್ವಾನ್ಸ್ ಕೊಟ್ಟಿದ್ದಾರೆ. ಅದಲ್ಲದೆ ಬೇರೆ ಕಂಟ್ರಾಕ್ಟರುಗಳಿಗೂ ಅಡ್ವಾನ್ಸ್ ಕೊಟ್ಟಿದ್ದಾರೆ. ಆ ಹಣದಲ್ಲಿ ಎಷ್ಟು ರಿಕವರ್ ಆಗಿದೆ ಎಂಬುದನ್ನು ನೋಡಬೇಕು. ಇಷ್ಟೆಲ್ಲಾ ಆದಮೇಲೆ ಆಖೈರಾಗಿ ವಿಚಾರಣೆಮಾಡಬೇಕು. ''ಗತಜಲಸೇತು ಬಂಧನಮ್', ಸಂಶಯಾತ್ಮಾ ವಿನಶ್ಯತಿ'' ಎನ್ನುವಹಾಗೆ ಇದರಲ್ಲಿ ಏನು ತಪ್ಪುಗಳು ನಡೆದಿವೆ ಅವುಗಳಿಗೆ ನೇರವಾಗಿ ಹೊಣೆ ಯಾರು, ಅದಕ್ಕೆ ಯಾರು ಯಾರು ಜವಾಬ್ದಾರರು ಎಂಬುದನ್ನೆಲ್ಲಾ ವಿಚಾರಣೆ ನಡೆಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ 50 ಲಕ್ಷ ರೂಪಾಯಿಗಳು ಹೋಗಿರಬಹುದೆಂದು ಹೇಳಿದ ಮೇಲೆ 135 ದಿನಗಳು ಕಳೆದಿವೆ. ಈ ಕೆಲಸಗಳಿಗೆ ಟೆಂಡರ್ ಕರೆಯುವ ವಿಷಯಹೇಗಿದೆ ಎಂದರೆ ಸಂಧಾನದಮೂಲಕ ರೇಟನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದರು. ಈ ವ್ಯವಹಾರದಲ್ಲಿ ದೇಶದ ಎಷ್ಟುಕೋಟಿ ಹಣ ಸರ್ಕಾರದ ಬೊಕ್ಕಸದಿಂದ ಸೂರೆ ಹೋಗಿದೆ ಎಂಬುದನ್ನು ನೋಡಲು ವಿಚಾರಣೆ ನಡೆಸಬೇಕು. ಹಿಂದೆ ಮುಖ್ಯ ಇಂಜಿನಿಯರ್ ಆಗಿದ್ದ ಶ್ರೀ ರಾಯಚೂರ್ ಅವರು ಷಾಸಂಸ್ಥೆಯ ಪಾಲುಗಾರರಾಗಿದ್ದು ಅಸ್ಸಾಮಿನಲ್ಲಿ 20ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೊಂಡಿರುವರೆಂದು ನಾನು ಕೇಳಿದ್ದೇನೆ. ಅವರ ಆಸ್ತಿಪಾಸ್ತಿಗಳು ಎಷ್ಟಿವೆ ಎಂಬುದನ್ನು ನೋಡಬೇಕು, ಮತ್ತು ಇನ್ನಿಬ್ಬರು ಚೀಫ್ ಇಂಜಿನಿಯರುಗಳಾಗಿದ್ದ ಕೆ. ಎಸ್. ಗಂಗಾಧರ್ ಮತ್ತು ಮಾಣಿಕ್ಯಂ ಇವರುಗಳು ಸತ್ತುಹೋದರು ಅವರನ್ನು ಬಿಟ್ಟುಬಿಡೋಣ. ಇನ್ನು ಉಳಿದವರ ಆಸ್ತಿಪಾಸ್ತಿಗಳನ್ನು ಲೆಕ್ಕಹಾಕಬೇಕು. 1956ನೇ ಇಸವಿಯಿಂದ ಇಲ್ಲಿಯವರೆಗೆ ಶರಾವತಿ ಯೋಜನೆ ಯಲ್ಲಿ ಕಂಟ್ರಾಕ್ಟ್ ಕೆಲಸ ಮಾಡಿದವರಿಗೆ 1956 ನೇ ಇಸವಿಯಲ್ಲಿ ಅವರಿಗೆ ಏನು ಆಸ್ತಿ ಇತ್ತು, ಈಗ ಅವರಿಗೆ ಏನು ಆಸ್ತಿಪಾಸ್ತಿ ಇದೆ ಎಂಬುದರ ಬಗ್ಗೆ ವಿಮರ್ಶೆ ನಡೆಯಲಿ. ಶರಾವತಿಗೆ ಸಂಬಂಧಿಸಿದ ಯಾರನ್ನೂ ಬಿಡಬಾರದು. ಶ್ರೀಮಾನ್ ಚನ್ನಬಸಪ್ಪನವರನ್ನೂ ತನಿಖೆಮಾಡಿ, ಬೇಕಾದರೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರನ್ನೂ ಸೇರಿಸಿಕೊಳ್ಳಿ.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಆಗಬಹುದು.

ಶ್ರೀ ಎಸ್. ಗೋಪಾಲಗೌಡ.—ಇದಕ್ಕೆ ಸಂಬಂಧಿಸಿದ ಎಲ್ಲಾ ಜನರಿಂದಲೂ ಜನತೆಯ ಮುಂದೆ ನಾವು ತಪ್ಪಿತಸ್ಥರಲ್ಲ ಎಂದು ಹೇಳಿ ಜನತೆಯಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಲಿ.
ಅದಕ್ಕೆ ನ್ಯಾಯ ವಿಚಾರಣೆಯಾಗಲಿ. ಅದರಲ್ಲಿ ಏನೂ ಲೋಪದೋಷವಿಲ್ಲ, ಕಟ್ಟೆ ಶಾಶ್ವತವಾಗಿ ನಿಲ್ಲುತ್ತದೆ, ಈ ಕಾರ್ಯದಿಂದ ನಿರೀಕ್ಷಿತ ವಿದ್ಯುಚ್ಛಕ್ತಿ ನಮಗೆ ಉತ್ಪಾದನೆಯಾಗುತ್ತದೆ, ರಾಜ್ಯಕ್ಕೆ ಶರಾವತಿ ಕನ್ನಡ ನಾಡಿನ ಭಾಗೀರಥಿ ಎಂದು ಏನು ಹಾಡಿದರು ಆ ಪ್ರಾಜೆಕ್ಟಿನಿಂದ ನಮಗೆ ಅನುಕೂಲ ವಾಗುತ್ತದೆ ಎನ್ನುವ ಭರವಸೆಯನ್ನು ಕೊಡಬೇಕಾಗಿದೆ. ಅಂಥ ಒಂದು ವಿಚಾರಣೆಯಾಗಬೇಕು. ಇದರಲ್ಲಿ ಕಾಲ ವಿಳಂಬ ಮಾಡದೆ ನೀವು ಫೈಲುಗಳನ್ನು ನೋಡಿ, ಶರಾವತಿ ಶ್ವೇತ ಪತ್ರ ಎಂದು ಏನು ತಮ್ಮ ಸಹೋದ್ಯೋಗಿಗಳೂ ಮತ್ತು ಅಧಿಕಾರಿಗಳೂ ತಮ್ಮ ಮುಂದೆ ಇಟ್ಟಿದ್ದಾರೆ ಅದನ್ನು ತಾವು ನೋಡಿ. ತಜ್ಞರನ್ನು, ಈ ಊರಿನವರನ್ನು ಬಿಟ್ಟು ಹೊರಗಡೆಯಿಂದ ಕರೆಸಿಕೊಳ್ಳಿ. ಐದು ಜನ ತಜ್ಞರು ಹೊರಗಿನವರು ಬಂದು ಈ ಕೆಲಸ ಶಾಶ್ವತವಾಗಿರುತ್ತದೆ ಇದರಲ್ಲಿ ಲೋಪದೋಷವಿಲ್ಲ ಎಂದು ಒಂದು ಸರ್ಟಿಫಿಕೇಟ್ ಕೊಡಲಿ. ಹಣಕಾಸಿನ ವ್ಯವಹಾರ ಯಾವುದಿದೆ ಅದರಲ್ಲಿ ಕಾನೂನು ಬಾಹಿರವಾಗಿ ಯಾರಿಗೂ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಕೊಟ್ಟಿಲ್ಲ, ಇದರಲ್ಲಿ ದುರ್ವ್ಯಾಪಾರ ನಡೆದಿಲ್ಲ ಎಂದು ಅವರು ತಿಳಿಸಲಿ. ಇಂಥ ವಿಚಾರಣೆ ನಡೆದರೆ ಸತ್ಯಾಂಶಗಳು ಹೊರಗೆ ಬರುತ್ತವೆ. ಅಗ್ರಿಮೆಂಟುಗಳನ್ನು ನಮಗೆ ಕೊಡುವುದಕ್ಕೆ ಹಿಂಜರಿದಿದ್ದಾರೆ. ಅನೇಕ ವಿಷಯಗಳು ಶರಾವತಿ ಶ್ವೇತ ಪತ್ರದ ಹಿನ್ನೆಲೆಯಲ್ಲಿ ಅಡಗಿವೆ. ಇವೆಲ್ಲವನ್ನೂ ಸಾರ್ವಜನಿಕರ ಮುಂದೆ ಇಡುವಂಥ ಸಾಹಸವನ್ನು, ಧೈರ್ಯವನ್ನು ಮಾಡಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಅಳುಕದೆ ಈ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯವಾಗಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair.]

† ಶ್ರೀ ಎಸ್. ಆವಲರೆಡ್ಡಿ (ಶಿಡ್ಲಘಟ್ಟ).—ಸ್ವಾಮಿ, ಅಧ್ಯಕ್ಷರೇ, ಶರಾವತಿ ವ್ಯಾಲಿ ಪ್ರಾಜೆಕ್ಟ್ ವಿಷಯದಲ್ಲಿ 2–3 ವರ್ಷಗಳಿಂದೀಚೆಗೆ ಸಾರ್ವಜನಿಕರಲ್ಲೂ ಮತ್ತು ಈ ಸಭೆಯ ಸದಸ್ಯರಲ್ಲೂ ದೊಡ್ಡ ಅನುಮಾನವುಂಟಾಗಿದೆ. ಶರಾವತಿ ಪ್ರಾಜೆಕ್ಟ್ ನಮ್ಮ ರಾಜ್ಯಕ್ಕೆ ಅತ್ಯಗತ್ಯವಾದುದು. ಅದನ್ನು ಅತಿ ಜಾಗ್ರತೆಯಾಗಿ ಕಟ್ಟಬೇಕು ಎಂದು ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ಬಹಳ ಆತುರದಿಂದ ಕಾತರದಿಂದ ಇದನ್ನು ಏರ್ಪಾಡು ಮಾಡಿದೆ. ಈ ಪ್ರಾಜೆಕ್ಟನ್ನು ಪ್ರಾರಂಭ ಮಾಡುವಾಗ ಇದು ಬಹಳ ದೊಡ್ಡ ಪ್ರಾಜೆಕ್ಟ್, ನೂರಾರು ಕೋಟಿ ರೂಪಾಯಿಗಳನ್ನು ಈ ದಿಸೆಯಲ್ಲಿ ನಾವು ಖರ್ಚು ಮಾಡ ಬೇಕಾಗುತ್ತದೆ, ಇದು ಬಹಳ ಟೆಕ್ನಿಕಲ್ ವಿಷಯ ಎಂದು ನಮ್ಮ ಸರ್ಕಾರ ಶರಾವತಿ ವ್ಯಾಲಿ ಪ್ರಾಜೆಕ್ಟ್ ಬೋರ್ಡ್ ಎಂದು ಒಂದು ಮಂಡಳಿಯನ್ನು ಸ್ಥಾಪನೆ ಮಾಡಿದರು. ಅದನ್ನು ಸ್ಥಾಪನೆ ಮಾಡುವಾಗ ಅದು ಸ್ಟ್ಯಾಟ್ಯೂಟರಿ ಬಾಡಿ, ಎಂದು ಅದಕ್ಕೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದಾರೆ. ಅದರ ಅಧಿಕಾರ ಏನು ಎಂದರೆ ಶರಾವತಿ ಪ್ರಾಜೆಕ್ಟ್‌ನಲ್ಲಿ ನಡೆಯತಕ್ಕ ಇಂಥ ಕೆಟ್ಟ ಸಮಸ್ಯೆಗಳ ಪರಿ ಹಾರವಾಗಿ ಅದರ ವಿಷಯದಲ್ಲಿ ಬರತಕ್ಕ ಕಂಟ್ರಾಕ್ಟದಾರರ ರೇಟುಗಳು, ಟೆಂಡರುಗಳು ಮತ್ತು ಇತರ ವಿಷಯಗಳನ್ನು ತೀರ್ಮಾನ ಮಾಡತಕ್ಕದ್ದು ಇದಕ್ಕಾಗಿಯೇ ಈ ಮಂಡಳಿಯನ್ನು ನಿರ್ಮಿಸಿರ ತಕ್ಕದ್ದು. ಇದರಲ್ಲಿ ತಜ್ಞ ಇಂಜಿನಿಯರುಗಳು, ರಾಜ್ಯದ ಮತ್ತು ಕೇಂದ್ರದ ಅಧಿಕಾರಿಗಳು ಇದ್ದಾರೆ. ಯಾವ ವಿಷಯದಲ್ಲಿಯೂ ಕೂಡ ಅಲ್ಲಿ ತಪ್ಪು ನಡೆಯುವುದಕ್ಕೆ ಅವಕಾಶವಿಲ್ಲ.

"It is something like a steel frame which cannot be pierced through." ಇಂಥ ಬಂದೋಬಸ್ತಾದ ಒಂದು ಮಂಡಳಿಯನ್ನು ಸರ್ಕಾರ ಸದುದ್ದೇಶ ದಿಂದ ಸ್ಥಾಪನೆ ಮಾಡಿ ಅದಕ್ಕೆ ಈ ಅಧಿಕಾರವನ್ನು ಕೊಟ್ಟಿರುವಾಗ ಇತ್ತೀಚೆಗೆ ನಡೆದ ಕೆಲವು ಘಟ ನಾವಳಿಗಳಲ್ಲಿ, ನಾನು ನೋಡಿದ ಹಾಗೆ ಶರಾವತಿ ಪ್ರಾಜೆಕ್ಟ್ ಬಗ್ಗೆ ಯಾವ ಉದ್ದೇಶಕ್ಕಾಗಿ ಈ ಮಂಡಳಿಯನ್ನು ಸ್ಥಾಪನೆ ಮಾಡಿದರೋ ಅದನ್ನು ನಮ್ಮ ಸರ್ಕಾರ ಮುರಿದಿದೆ. ಅದೂ ಅಲ್ಲದೆ ಈ ಪ್ರಾಜೆಕ್ಟಿಗೆ ಒಬ್ಬ ಸ್ಪೆಷಲ್ ಚೀಫ್ ಇಂಜಿನಿಯರನ್ನು ಕೂಡ ನೇಮಕ ಮಾಡಿದ್ದಾರೆ. He is also an expert Engineer. ಅವರಿಗೂ ಅಧಿಕಾರವನ್ನು ಕೊಟ್ಟಿದ್ದಾರೆ. ಮತ್ತು ಖಚಿತವಾಗಿ ರೂಲ್ಸ್ ಮತ್ತು ರೆಗ್ಯುಲೇಷನಗಳನ್ನು ಮಾಡಿ ಸರ್ಕಾರ ಅಲ್ಲಿ ಕೈ ಹಾಕುವುದಕ್ಕೆ ಅವಕಾಶವಿಲ್ಲದಂತೆ ಮಾಡಿ ದ್ದಾರೆ, ನನಗೆ ಗೊತ್ತಿರುವ ಮಟ್ಟಿಗೆ, ನಾನು ಓದಿರುವ ಮಟ್ಟಿಗೆ. ಹೀಗಿರುವಾಗ ಈ ಕೆಲಸ ಪ್ರಾರಂಭ ವಾಗಿ ಕೆಲವು ಮಾರ್ಪಾಡುಗಳಾದುವು. ಸಾಮಾನ್ಯವಾಗಿ ಹೀಗೆ ಆಗುತ್ತದೆ. ಅದರ ಬಗ್ಗೆ ಸ್ಥಳದಲ್ಲಿರುವ ತಜ್ಞರು ಆಗಿಂದಾಗ್ಗೆ ತೀರ್ಮಾನ ತೆಗೆದು ಕೊಳ್ಳುತ್ತಾರೆ. ಡಿಸ್ಸೈನ್ ಆಫ್ ದಿ ಡ್ಯಾಂ ಹೇಗಿರಬೇಕು, ಕಲ್ಲು ಕಟ್ಟಡವಿರಬೇಕೇ ಅಥವಾ ಕಲ್ಲು ತುಂಬುವ ಕೇಸವೇ ಇಂಥ ವಿಷಯಗಳನ್ನು ಪರಿಶೀಲನೆ ಮಾಡು ವುದಕ್ಕಾಗಿ ಅಲ್ಲಿನ ಬೋರ್ಡ್ ಮತ್ತು ಚೀಫ್ ಇಂಜಿನಿಯರ್ ಒಟ್ಟಿಗೆ ವಿಮರ್ಶೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತಾರೆ. ಒಂದು ವೇಳೆ ಅದರಲ್ಲಿ ಅಚಾತುರ್ಯ ಜರುಗಿದರೆ ಈ ಬೋರ್ಡ್ ಮತ್ತು ಚೀಫ್ ಇಂಜಿನಿಯರ್ ಆದವರು ಅದಕ್ಕೆ ಜವಾಬ್ದಾರರು. ಸರ್ಕಾರವಲ್ಲ. ಸರ್ಕಾರದ ಕೆಲಸ ಹಣವನ್ನು ಒದಗಿಸುವುದು, ಇಷ್ಟು ಕಾಲದಲ್ಲಿ ಆಗಬೇಕು ಎಂದು ಅವರಿಗೆ ಸೂಚನೆಯನ್ನು ಕೊಡುವುದು. ಆದರೆ ಈ ಮಧ್ಯೆ ಏನಾಯಿತು ಎಂದರೆ ದರಗಳಲ್ಲಿ ವ್ಯತ್ಯಾಸವಾಯಿತು. ಕಂಟ್ರಾಕ್ಟರುಗಳು ಒಂದು ದರದ ಪ್ರಕಾರ ಕೆಲಸ ಮಾಡುವುದಕ್ಕೆ ಒಪ್ಪಿಕೊಂಡರೆ ಅದಕ್ಕೆ ಅಗ್ರಿಮೆಂಟನ್ನು ಬರೆದು ಕೊಟ್ಟ ನಂತರ ಕೆಲಸ ವನ್ನು ಪ್ರಾರಂಭ ಮಾಡಬೇಕು. ಅದರೊಳಗೆ ಕೆಲವು ಸಮಸ್ಯೆಗಳು ಉದ್ಭವವಾಗಿ ಕಂಟ್ರಾಕ್ಟದಾ ರನು ಆರ್ಬಿಟ್ರೇಷನ್ನಿಗೆ ಹೋದ. ಆರ್ಬಿಟ್ರೇಷನ್ನಿಗೆ ಹೋಗುವುದಕ್ಕೆ ಅವಕಾಶವಿಲ್ಲದೇ ಇದ್ದರೂ ಹೋದ. ಇದು ಸರಿಯಲ್ಲ ಎಂದು ಲಾ ಇಲಾಖೆಯವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದು ಸಂಬಂಧಪಟ್ಟ ಫೈಲಿನಲ್ಲಿದೆ. ನಾನು ಸ್ವಂತ ಜವಾಬ್ದಾರಿ ತೆಗೆದುಕೊಂಡು ಹೇಳುತ್ತಿದ್ದೇನೆ. ಲಾ ಡಿಪಾರ್ಟ್‌ಮೆಂಟಿನವರ ಅಭಿಪ್ರಾಯ ಅನುಕೂಲವಾಗಿದ್ದಾಗ್ಗೂ ಕೂಡ ಏನೋ ಒಂದು ಕಾರಣ ದಿಂದ ಅದನ್ನು ವಾಪಸು ತೆಗೆದುಕೊಂಡು ಹೊಸದಾಗಿ ಟೆಂಡರುಗಳನ್ನು ಕರೆದರು. ಅದರಲ್ಲಿ ಆರೇಳು ಜನ ರೇಟನ್ನು ಕೊಟ್ಟರು. ಇದು ಬಹಳ ವಿಚಿತ್ರವಾಗಿದೆ ಸ್ವಾಮಿ. ಯಾವುದಾದರೂ ಒಂದು ಲೋಕೋಪಯೋಗಿ ಇಲಾಖೆಯಲ್ಲಿ ತೆಗೆದುಕೊಳ್ಳಬೇಕಾದರೆ ಅದು 25 ಸಾವಿರದ ಕೆಲಸವಾಗಿರಲಿ, 40 ಸಾವಿರದ ಕೆಲಸವಾಗಿರಲಿ ಟೆಂಡರುಗಳು ಬಂದರೆ ಒಂದೇ ಟೆಂಡರ್ ಇದ್ದರೆ ಸಿಂಗಲ್ ಟೆಂಡರ್ ಎಂದು ಅದನ್ನು ರದ್ದು ಮಾಡುತ್ತಾರೆ. ಎರಡು ಮೂರು ಟೆಂಡರುಗಳು ಬಂದರೆ ಅದರಲ್ಲಿ ಕಡಮೆ ಇರುವು ದನ್ನು ತೆಗೆದುಕೊಂಡು ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಕಳಿಸುತ್ತಾರೆ. ಅವರ ಒಪ್ಪಿಗೆಯನ್ನು ಪಡೆದ ನಂತರ ಕಂಟ್ರಾಕ್ಟದಾರರಿಂದ ಮುಚ್ಚಳಿಕೆಯನ್ನು ಬರೆಸಿಕೊಳ್ಳುತ್ತಾರೆ. ಹೀಗೆ ಬಹು ಕಾಲ ದಿಂದಲೂ ಈ ಇಲಾಖೆಯಲ್ಲಿ ನಡೆದು ಬಂದಿದೆ. ಟೆಂಡರ್ ಬಂದರೆ ಅದರಂತೆ ಕೆಲಸ ಮಾಡಲು ಸಾಧ್ಯವೇ

ಅಸಾಧ್ಯವೇ, ಹೆಚ್ಚಿನ ದರಗಳು ಕೊಟ್ಟಿರುವುದು ಹೆಚ್ಚೋ, ಕಡಮೆಯೋ ಎಂದು ನೋಡಿ ಪುನಃ ಟೆಂಡರುಗಳನ್ನು ಕರೆಯುತ್ತಾರೆ. ಹಾಗೆಯೇ ಇಲ್ಲಿಯೂ ಪುನಃ ಟೆಂಡರ್ ಕರೆಯುವುದಕ್ಕೆ ಏನು ತೊಂದರೆಯಾಗುತ್ತಿತ್ತು? ಸರ್ಕಾರ ಟೀಕೆಗೆ ಏಕೆ ಗುರಿಯಾಗಬೇಕಾಗಿತ್ತು? ಆದರೆ ಇದರಲ್ಲಿ ಪುನಃ ಟೆಂಡರುಗಳನ್ನು ಕರೆಯಲಿಲ್ಲ, ಚೀಫ್ ಇಂಜನಿಯರು ಟೆಂಡರುಗಳನ್ನೆಲ್ಲ ಸ್ಕ್ರೂಟಿನಿ ಮಾಡಿ ಬಹು ಮುಖ್ಯವಾದ ಅಧಿಕಾರಗಳನ್ನು ಕೊಟ್ಟಿರತಕ್ಕ ಬೋರ್ಡಿನ ಮುಂದೆ ಅದನ್ನು ಇಟ್ಟು ಅಲ್ಲಿ ಚರ್ಚೆ ಮಾಡಿ ಟೆಂಡರುಗಳ ಬಗ್ಗೆ ಒಂದು ತೀರ್ಮಾನಕ್ಕೆ ಬಂದು ಆ ಪ್ರಕಾರ ಮಾಡಿದ್ದರೆ ಈ ದಿನ ನಮ್ಮ ಸರ್ಕಾರ ಈಗ ಬಂದಿರುವ ಟೀಕೆಗಳಿಗೆ ಒಳಗಾಗುತ್ತ ಇರಲಿಲ್ಲ. ಅದನ್ನು ಬಿಟ್ಟರು. ಬೋರ್ಡಿನ ಗಮನಕ್ಕೆ ತರದೆ ಹೇಗೋ ಅದು ಸರ್ಕಾರರಕ್ಕೆ ಹೋಯಿತು. ಅದರ ಮೇಲೆ ಸರ್ಕಾರದವರು ಆತುರವಾಗಿ ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಪ್ರಾಜೆಕ್ಟನ್ನು ಜಾಗ್ರತೆ ಮಾಡಬೇಕು ವಿದ್ಯುಚ್ಛಕ್ತಿಯ ಅಭಾವ ನಮ್ಮ ದೇಶದಲ್ಲಿ ಬಹಳ ಇದೆ, ಆದುದರಿಂದ ಈ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಶ್ವೇತ ಪತ್ರದಲ್ಲಿ ಹೇಳಿದ್ದಾರೆ. ಒಂದು ವೇಳೆ ಆ ರೀತಿ ತೆಗೆದುಕೊಂಡರೂ ಕೂಡ ಮುಖ್ಯವಾದ ಲೋಪ ಆ ಟೆಂಡರಿನಲ್ಲಿ ಒಂದು ಇತ್ತು. ಎಲ್ಲರೂ ಟೆಂಡರನ್ನು ಕೊಟ್ಟ ಮೇಲೆ ಎಲ್ಲರ ಮುಂದೆಯೂ ಆ ಲಕೋಟೆಗಳನ್ನು ಒಡೆಯುತ್ತಾರೆ. ಈ ರೀತಿಯಾಗಿ ಮಾಡುವುದು ಲೋಕೋಪಯೋಗಿ ಇಲಾಖೆಯಲ್ಲಿಯ ಪದ್ಧತಿ. ಹೀಗೆ ಟೆಂಡರುಗಳನ್ನು ತೆಗೆದ ಮೇಲೆ ಒಬ್ಬ ಕಂಟ್ರಾಕ್ಟರು ತಾನು ಕೊಟ್ಟಿರುವುದರಲ್ಲಿ ತಪ್ಪಾಗಿದೆ ಎಂದು 40 ರೂಪಾಯಿಗಳಿಗೆ ಬದಲಾಯಿಸಿ ಒಂದು ಟೆಲಿಗ್ರಾಂ ಕೊಟ್ಟರೆ ಅದಕ್ಕೆ ಬೆಲೆ ಕೊಡಬಹುದೇ? ಸರ್ಕಾರದವರು ಅದನ್ನೇ ಉದಾರವಾಗಿ ಪರಿಶೀಲನೆ ಮಾಡಿದ್ದಾರೆಂದು ತೆಗೆದುಕೊಂಡರೆ ಅರ್ಧಭಾಗದ ಕೆಲಸಕ್ಕೆ 40 ರೂಪಾಯಿ ಪ್ರಕಾರ ಕೊಟ್ಟಿದ್ದಾರೆ. ಇನ್ನುಳಿದ ಅರ್ಧ ಭಾಗ ಕೆಲಸಕ್ಕೆ 108 ರೂಪಾಯಿ ಕೊಟ್ಟಿದ್ದಾರೆ. ಇದರ ಸರಾಸರಿ ತೆಗೆದುಕೊಂಡರೆ 71 ರೂಪಾಯಿ ದರ ಆಗುತ್ತದೆ. ಅಲ್ಲಿಗೂ ಕಂಟ್ರಾಕ್ಟದಾರನಿಗೆ ಲಾಭ ಬರುತ್ತದೆ. ಒಂದು ವೇಳೆ ಆ ರೇಟಿನಂತೆ ಆತನಿಗೇ ಕೊಟ್ಟಿದ್ದರೆ ಸರ್ಕಾರಕ್ಕೆ ಇಷ್ಟು ಲುಕ್ಸಾನಾಗುತ್ತಿರಲಿಲ್ಲ. ಸೇಕಡ 20-25 ರಂತೆ ಲಾಭ ಬರುತ್ತಿತ್ತು ಎಂದು ನನಗನ್ನಿಸುತ್ತದೆ. ಅದನ್ನೂ ಬಿಟ್ಟರು.

ಒಂದೊಂದು ಪ್ರದೇಶದಲ್ಲಿಯೂ ಸಾಮಾನ್ಯವಾಗಿ ಷೆಡ್ಯೂಲ್ ಆಫ್ ರೇಟ್ಸ್ ಗೊತ್ತುಮಾಡಬೇಕಾದರೆ. ರಾ ಮೆಟೀರಿಯಲ್ಸ್ ಎಲ್ಲಿಂದ ಬರುತ್ತದೆ, ಅದರ ಬೆಲೆಯೇನಿದೆ, ಅದನ್ನು ಸಾಗಿಸುವ ಖರ್ಚೆಷ್ಟು ಇತ್ಯಾದಿ ವಿಷಯಗಳನ್ನು ಗಮನಿಸಿ ಗೊತ್ತು ಮಾಡುತ್ತಾರೆ. ಆಗ ಆ ಪ್ರದೇಶದಲ್ಲಿದ್ದ ರೇಟು 60 ರೂಪಾಯಿ, ಅದರಂತೆ ಕೊಟ್ಟಿದ್ದರೆ ಸರಕಾರಕ್ಕೆ ಎಷ್ಟೋ ಹಣ ಉಳಿತಾಯವಾಗುತ್ತಿತ್ತು. ಕಂಟ್ರಾಕ್ಟರು ಮೊದಲು ಕೊಟ್ಟಿದ್ದ ರೇಟ್ ಸರಾಸರಿ ಒಂದು ಯೂನಿಟ್‌ಗೆ 74 ರೂಪಾಯಿ ಆಗಿ ಷೆಡ್ಯೂಲ್ಡ್ ರೇಟ್ 60 ರೂಪಾಯಿ ಇದ್ದುದರಿಂದ 14 ರೂಪಾಯಿ ಹೆಚ್ಚಾಗಿ ಕಂಟ್ರಾಕ್ಟರಿಗೆ ಲಾಭ ಬರುತ್ತಿತ್ತು. ಸರಕಾರದವರು ಹಗೂ ಮಾಡಲಿಲ್ಲ. ಹೆಚ್ಚಿನ ರೇಟನ್ನು ಕೊಟ್ಟಿದ್ದರಿಂದ ಸುಮಾರು 72 ಲಕ್ಷ ರೂಪಾಯಿ ಇದರಿಂದ ಸಾರ್ವಜನಿಕ ಹಣ ನಷ್ಟವಾಗಿದೆ. ಇನ್ನೊಂದು ವಿಷಯವನ್ನು ಶ್ರೀಮಾನ್ ಗೋಪಾಲಗೌಡರು ಹೇಳಿದ್ದಾರೆ. ಹೇಗೆ ಟೆಂಡರು ಆ ಬೋರ್ಡನ್ನು ಮೀರಿ ಸರಕಾರಕ್ಕೆ ಬಂತು ಎನ್ನುವ ವಿಷಯದಲ್ಲಿ ನಾನು ದಿವಂಗತ ಪ್ರಧಾನಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಾಗ ಅವರು ನನಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ, ದೇಶದ ನಾಯಕರು ಈ ರೀತಿ ಉತ್ತರ ಕೊಟ್ಟಿದ್ದಾರೆ.

10-00 A.M.

"It is most unfortunate that the tenders are somehow by-passed."

So there is something fishy.

Sri C. J. MUCKANNAPPA.—Is the correspondence between the Prime Minister and the Honourable Member relevant and if it is relevant, may I request the Honourable Member through the Chair to place the correspondence on the table of the House for the benefit of the House?

Mr. DEPUTY SPEAKER.—When he has referred to that letter, he must be prepared to place it on the Table of the House. When he has referred to it he should be ready to place it on the table of the House and it is his duty to do so.

Sri S. AVAL REDDY.—Yes, but not now.

Sri S. NIJALINGAPPA.— He has said that he has written a letter to the Prime Minister and he has received a reply. Both the letters may be placed on the Table of the House.

Sri S. AVAL REDDY.—I have no objection.

ಈ ಒಂದು ಐಟೆಮಿನಲ್ಲಿ ಸರಕಾರಕ್ಕೆ 72 ಲಕ್ಷ ರೂಪಾಯಿ ನಷ್ಟವಾಗಿದೆ. ಶ್ರೀ ಗಾಂಜಿ ವೀರಪ್ಪನವರು ಒಂದು ಹೊಸ ಸಿದ್ಧಾಂತವನ್ನು ಹೇಳಿದರು, ಸರಕಾರಕ್ಕೆ ಇದರಿಂದ 35 ಲಕ್ಷ ರೂಪಾಯಿ ಲಾಭವಾಗಿದೆ ಎಂದು ಹೇಳಿದರು. ಇದನ್ನು ಯಾವ ಆಧಾರದ ಮೇಲೆ ಹೇಳಿದರೋ ಗೊತ್ತಿಲ್ಲ. ನಮ್ಮ ಮುಂದೆ ಎಲ್ಲ ಅಂಕಿ ಅಂಶಗಳಿವೆ, ರೇಟುಗಳಿವೆ; ಹೀಗಿರುವಾಗ ಯಾವ ವಿಷಯದ ಆಧಾರದ ಮೇಲೆ ಪುಷ್ಟೀಕರಿಸಿ 35 ಲಕ್ಷ ರೂಪಾಯಿ ಲಾಭ ಬಂದಿದೆ ಎಂದು ಹೇಳಿದರೆಂಬುದು ನನಗೆ ಅರ್ಥವಾಗಲಿಲ್ಲ.

ಆರ್ಬಿಟ್ರೇಷನ್ ವಿಷಯದಲ್ಲಿಯೂ ಅನೇಕ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ. ನ್ಯಾಯ ವಿಚಾರಣೆ ಮತ್ತು ತೀರ್ಪು ಕೊಡುವ ವಿಚಾರದಲ್ಲಿ ನಮ್ಮ ದೇಶದಲ್ಲಿ ಉನ್ನತವಾದ ಅಧಿಕಾರ ಸ್ಥಾನವೆಂದರೆ ಅದು ಹೈಕೋರ್ಟು. ಯಾವಾಗ ಸರಕಾರಕ್ಕೂ ಕಂಟ್ರಾಕ್ಟರಿಗೂ ಹೀಗೆ ಭಿನ್ನಾಭಿಪ್ರಾಯ ಬಂತು ಆಗ ನಮ್ಮ ಅಡ್ವೋಕೇಟ್ ಜನರಲ್ ಅವರೊಂದಿಗೆ ಆಲೋಚನೆ ಮಾಡಿ ಹೈಕೋರ್ಟಿಗೆ ಅಪೀಲು ಮಾಡಿದ್ದಿದ್ದರೆ, ಅವರ ತೀರ್ಮಾನಕ್ಕೆ ಬಿಟ್ಟಿದ್ದಿದ್ದರೆ ಚೆನ್ನಾಗಿತ್ತು. ಹಾಗೆ ಮಾಡಿದ್ದರೆ ಸರಿಯಾಗಿ ತೀರ್ಮಾನವಾಗಿ ಸರಕಾರಕ್ಕೆ ಲಾಭವಾಗುತ್ತಿತ್ತು ಎಂಬ ನಂಬಿಕೆ ನನಗಿದೆ. ಈ ಎಲ್ಲ ಕಾರಣಗಳಿಂದ ಮತ್ತು ಸರಕಾರದ ಹಣವನ್ನು ಕಂಟ್ರಾಕ್ಟರುಗಳಿಗೆ ಲಕ್ಷಾಂತರ ರೂಪಾಯಿ ಹೆಚ್ಚಾಗಿ ಕೊಟ್ಟಿರುವುದರಿಂದ ಜನರಲ್ಲಿ ಮತ್ತು ಶಾಸನ ಸಭಾ ಸದಸ್ಯರಲ್ಲಿ ಕಳವಳವುಂಟಾಗಿದೆ. ಇದನ್ನು ಪರಿಹಾರ ಮಾಡಬೇಕಾದರೆ ನ್ಯಾಯಾಂಗ ವಿಚಾರಣೆಗೊಪ್ಪಿಸುವುದೊಂದೇ ಮಾರ್ಗ. ನಾನು ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ. ಅವರ ಕೈಗೇನೂ ಈ ಹಣ ಹೋಗಿಲ್ಲ. ಆದರೂ ದೇಶದಲ್ಲಿ ಒಂದು ರೀತಿಯ ಕಳವಳವುಂಟಾಗಿದೆ. ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಏರ್ಪಾಡು ಮಾಡಿದರೆ, ಅವರಿಂದ ಪರಿಶೀಲನೆ ಮಾಡಿಸಿದರೆ ನಮ್ಮ ಸರಕಾರದ ಕೀರ್ತಿ ಮತ್ತು ಮುಖ್ಯ ಮಂತ್ರಿಗಳ ಕೀರ್ತಿ ಎರಡೂ ಹೆಚ್ಚಾಗುತ್ತದೆ. ಅಲ್ಲದೆ ನಾವು ದೇಶದಲ್ಲಿ ತಲೆ ಎತ್ತಿಕೊಂಡು ತಿರುಗಾಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಿ ನೋಡಲಿ, ಬಸ್ಸುಗಳಲ್ಲಿ, ರೈಲುಗಳಲ್ಲಿ ಎಲ್ಲಿಯಾದರೂ ತಿರುಗುವಾಗ ಯಾರ ಬಾಯಲ್ಲಿಯೂ ಇದೇ ಮಾತಾಗಿದೆ. ಅವರು ಕೇಳುವ ಪ್ರಶ್ನೆಗಳಿಗೆ ನಾವು ಜವಾಬು ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಜ್ಯುಡಿಷಿಯಲ್ ಎನ್‌ಕ್ವೈರಿ ನಡೆಸಿ ತೀರ್ಪು ಕೊಟ್ಟರೆ ಆಮೇಲೆ ಸಾರ್ವಜನಿಕರಾಗಲೀ ಸದಸ್ಯರಾಗಲೀ ಯಾರೂ ಈ ವಿಷಯದಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಶರಾವತಿಯ ವಿಷಯ ಮುಂದೆ ಎಂದಿಗೂ ಈ ಸಭೆಯಲ್ಲಿ ಮತ್ತೆ ಪ್ರಸ್ತಾಪಕ್ಕೆ ಬರುವುದಿಲ್ಲ. ಆದುದರಿಂದ ಸರಕಾರದಲ್ಲಿ ನಾನು ಈ ರೀತಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

Sri GANJI VEERAPPA.—Unless there are complaints of fraud, complaints of defalcations and some grave allegations are made, I think a judicial enquiry will not be in order legally. In this case without saying that there are any such complaints, is it a case for a judicial enquiry ?

ಶ್ರೀ ಎಸ್. ಆವಲರೆಡ್ಡಿ.—ಏನಾದರೂ ದೂರು ಇದೆಯೆ ಎಂದು ಅವರು ಕೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ಜನರು ಹೇಳಿಕೊಳ್ಳುವುದು ದೂರಲ್ಲವೆ? ಪ್ರಜಾ ಪ್ರಭುತ್ವದಲ್ಲಿ ಜನರಲ್ಲಿ ಎಲ್ಲಿ ಏನು ಒಂದು ವಾಕ್ಯ ಕೇಳಿಬರಲಿ ಅದಕ್ಕೆ ಸರಕಾರ ಜವಾಬು ಕೊಡಬೇಕು; ಇಲ್ಲದಿದ್ದರ ಕೋರ್ಟಿನಲ್ಲಿ ಇತ್ಯರ್ಥವಾಗಬೇಕು. ಹೀಗೆ ಮಾಡಿದರೆ ಬಹಳ ಕ್ಷೇಮ ಮತ್ತು ಪ್ರಜಾಪ್ರಭುತ್ವಕ್ಕೆ ಯಶಸ್ಸು, ಕೀರ್ತಿ ಬರುತ್ತದೆ. ಇನ್ನೊಂದು ವಿಷಯವೇನೆಂದರೆ, ಈ ಟೆಂಡರ್ ವಿಷಯ ಸಭೆಯ ಮುಂದೆ ಬಂದಾಗ 19—9—1962 ರಲ್ಲಿ ಶ್ರೀಮಾನ್ ಜತ್ತಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಟೆಂಡರುಗಳಲ್ಲಿ ಲೋಪದೋಷಗಳಿದ್ದವು ಎಂದು ಹೇಳಿದ್ದಾರೆ. ಇದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಸರಕಾರ ಕ್ರಮ ಕೈಗೊಂಡಿರುವುದು ಬಹಳ ಗಮನಾರ್ಹವಾದುದು. ಇನ್ನೊಂದು ಸಲ ಈ ಸಭೆಯ ಮುಂದೆ ಈ ಸಂಬಂಧವಾಗಿ ಒಂದು ಪ್ರಸ್ತಾಪ ಬಂದಾಗ ಮುಖ್ಯ ಮಂತ್ರಿಗಳು ನಾನು ಇದಕ್ಕೆ ಸಂಬಂಧಪಟ್ಟ ಫೈಲುಗಳನ್ನು ತರಿಸುತ್ತೇನೆ, ಒಂದು ಈಗಾಗಲೇ ಬಂದಿದೆ, ಇನ್ನೂ ಮೂವತ್ತು ನಲವತ್ತು ಫೈಲುಗಳಿವೆ ಅವನ್ನೆಲ್ಲಾ ಕೂಲಂಕಷವಾಗಿ ನೋಡಿ ವಿಚಾರಮಾಡಿ ಈ ಸಭೆಗೆ ಸಮಜಾಯಿಷಿ ಕೊಡುತ್ತೇನೆ ಎಂದು ಹೇಳಿದರು. ಅವರು ಫೈಲುಗಳನ್ನು ನೋಡಿರುತ್ತಾರೆ, ಅರ್ಥವಾಗಿರುತ್ತದೆ; ಆದರೆ ಅವರ ತೀರ್ಮಾನವನ್ನು ಸಭೆಯ ಮುಂದಿಡಲಿಲ್ಲ. ಒಂದು ವೇಳೆ ಇಟ್ಟಿದ್ದರೆ

ಜನರ ಸಂದೇಹ ಪರಿಹಾರವಾಗುತ್ತಿತ್ತು. ಈ ಸಭೆಯಲ್ಲಿ ಎಲ್ಲ ವಿಷಯಗಳೂ ಚರ್ಚೆಯಾಗಿವೆ. ಅಲ್ಲಿ ಮಾಡಿರುವ ಕೆಲಸ ಸರಿಯಾಗಿದೆಯೋ ಕೆಟ್ಟು ಹೋಗಿದೆಯೋ ಗೊತ್ತಿಲ್ಲ. ಇತ್ತೀಚೆಗೆ ಅಲ್ಲಿ ನಾಲೆಗೆ ಹಾಕಿರುವ ಕಾಂಕ್ರೀಟ್ ಬಿರುಕು ಬಿಟ್ಟಿದೆ ಎಂದು ಹೇಳುತ್ತಾರೆ. ಅಲ್ಲಿ ಏನಾದರೂ ಅನಾಹುತವಾದರೆ ನಮ್ಮ ಮೈಸೂರು ದೇಶದ ಗತಿಯೇನಾಗುತ್ತದೆಯೋ ಗೊತ್ತಿಲ್ಲ. ದೇವರು ನಮ್ಮನ್ನು ಕಾಪಾಡಬೇಕು. ಈ ಕಟ್ಟೆಯನ್ನು ಸುಭದ್ರವಾಗಿ ಇಡಬೇಕು ಎಂದು ನಮ್ಮ ಅನೇಕ ಮಿತ್ರರು ಹಾರೈಸಿದ್ದಾರೆ. ನಾನೂ ಕೂಡ ಅದೇ ರೀತಿ ಹಾರೈಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೆ ಒಂದು ಮಾತನ್ನು ಒತ್ತಾಯ ಪೂರ್ವಕವಾಗಿ ಹೇಳಲು ಬಯಸುತ್ತೇನೆ. ಈ ಅಪಾದನೆಗಳಿಗಾಗಿ ಒಂದು ಜ್ಯುಡೀಶಿಯಲ್ ಇನ್‌ಕ್ವಾಯಿರಿ ಮಾಡಬೇಕು. ಜ್ಯುಡೀಶಿಯಲ್ ಇನ್‌ಕ್ವಾಯಿರಿ ಮಾಡುವುದರಿಂದ ಸರಕಾರದ ಕೀರ್ತಿ ಜಾಸ್ತಿಯಾಗುತ್ತದೆ ಮುಖ್ಯ ಮಂತ್ರಿಗಳ ಕೀರ್ತಿ ಸಹ ಜಾಸ್ತಿಯಾಗುತ್ತದೆ. ಹಿಂದಕ್ಕೆ ವಿಧಾನ ಸೌಧ ಕಟ್ಟಡ ಕಟ್ಟುವದರ ಸಂಬಂಧದಲ್ಲಿ ಶ್ರೀ ಹನುಮಂತಯ್ಯನವರ ಮೇಲೆ ಅನೇಕ ಅಪಾದನೆಗಳನ್ನು ಮಾಡಲಾಯಿತು. ಆಗ್ಗೆ ಶ್ರೀ ಹನುಮಂತಯ್ಯನವರು ಧೈರ್ಯದಿಂದ ಜ್ಯುಡೀಶಿಯಲ್ ಇನ್‌ಕ್ವಾಯಿರಿ ಮಾಡಿಸಿದರು. ಎಲ್ಲಾ ವಿಷಯ ಪರಿಶೀಲನೆ ಮಾಡಿದ ಮೇಲೆ ಯಾವ ಆಕ್ಷೇಪಣೆಯೂ ಬರಲಿಲ್ಲ. ಅವರ ಹೆಸರು ಅಚ್ಚಳಿಯದೆ ಉಳಿದಿದೆ. ಇದರಿಂದ ಒಳ್ಳೆ ಪರಿಣಾಮ ಉಂಟಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಒಳ್ಳೆ ಪರಿಣಾಮ ಉಂಟು ಮಾಡುವುದಕ್ಕಾಗಿ ಸರಕಾರದವರು ಒಂದು ಜ್ಯುಡೀಶಿಯಲ್ ಇನ್‌ಕ್ವಾಯಿರಿ ನೇಮಕ ಮಾಡಬೇಕೆಂದು ಬೇಡಿಕೊಳ್ಳುತ್ತಾ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸ್ವಾಮಿ ಅಧ್ಯಕ್ಷರೇ, ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಈ ವೈಟ್ ಪೇಪರ್ ನೋಡುವಾಗ್ಗೆ ಸಿನೇಮಾ ಫಿಲ್ಮಿನಲ್ಲಿ ಕಾಣುವ ದೃಶ್ಯದಂತೆ ಗೋಚರವಾಗುತ್ತದೆ. ಸಾರ್ವಜನಿಕರ ಹಣ ಎಲ್ಲೆಲ್ಲಿ, ಎಷ್ಟೆಷ್ಟು ಯಾವ ಯಾವ ವಿಧದಲ್ಲಿ ದುಂದು ವ್ಯಯವಾಗಿದೆ, ಯಾವ ಯಾವ ಸಣ್ಣ ದೊಡ್ಡ ಶಕ್ತಿಗಳು ಇದರಲ್ಲಿ ಸೇರಿಕೊಂಡಿವೆ ಎಂಬುದು ಈ ಸಿನೇಮಾದಲ್ಲಿ ಕಾಣುವ ದೃಶ್ಯವಾಗಿದೆ. ಇದು ರಾಜ್ಯದ ಜನತೆಯಲ್ಲಿ ಬಹು ಮಟ್ಟಿನ ಅಲ್ಲೋಲ ಕಲ್ಲೋಲ ಮನೋಭಾವನೆ ಉಂಟುಮಾಡಿದೆ. ಇನ್ನೊಂದು ದೃಶ್ಯ ಈ ವೈಟ್ ಪೇಪರಿನಲ್ಲಿ ಕಾಣುವುದೆಂದರೆ ಈ ಶರಾವತಿ ಯೋಜನೆ ಕಾರ್ಯಗತಗೊಳಿಸುವಾಗ್ಗೆ ಅನುಸರಿಸಬೇಕಾಗಿದ್ದಂಥ ರೀತಿ ನೀತಿಗಳನ್ನು ಉಲ್ಲಂಘನೆ ಮಾಡಲಾಗಿದೆಯೆ ಎಂಬುದು ಕೂಡ ಕಂಡು ಬರುತ್ತದೆ. ಇದರಲ್ಲಿ ಸಣ್ಣ ಮತ್ತು ದೊಡ್ಡ ಅಧಿಕಾರಿಗಳು ರಾಜಕಾರಣಿಗಳ ಕೆಳ ದರ್ಜೆ ರಾಜಕಾರಣಿ (ಲೋವರ್ ಪೊಲಿಟೀಶಿಯನ್ಸ್) ಗಳು ಅದರಲ್ಲೂ ಅನೇಕ ಕಂಟ್ರೀ ಪೊಲಿಟೀಶಿಯನ್ಸ್ ಇವರು ಈ ಚಿತ್ರದಲ್ಲಿ ಬಹಿರಂಗವಾಗಿ ಕಾಣುತ್ತಾರೆ. ಕೋಟ್ಯಾಂತರ ರೂಪಾಯಿ ದುಂದು ವ್ಯಯ ಆಗುವುದರಲ್ಲಿ ಇವರು ಎಲ್ಲರೂ ಪಾಲುಗಾರರು ಆಗಿದ್ದಾರೆ ಎಂಬ ದೃಶ್ಯ ನಮ್ಮ ಕಣ್ಣು ಮುಂದೆ ಬರುತ್ತದೆ. ಇದರಲ್ಲಿ ಯಾವ ಅಪಾದನೆ ಇಲ್ಲಾ, ದೌರ್ಜನ್ಯವಿಲ್ಲ ಯಾರಿಂದಲೂ ಕಂಪ್ಲೇಂಟ್ ಇಲ್ಲಾ ಎಂದು ಕೆಲವು ಸದಸ್ಯರು ಸರಕಾರದ ವಕೀಲರಂತೆ ವಾದಿಸಿದರು. ಈ ಸಭೆಯಲ್ಲಿ ಈಗಾಗಲೇ ಇಷ್ಟು ಜನ ಸದಸ್ಯರು ಮಾತ್ರವಲ್ಲದೆ ಹೊರಗಡೆ ರಾಜ್ಯದಲ್ಲೆಲ್ಲಾ ಕೂಡ ಮಾತದಾಡುವಂಥ ಬಹು ಸಂಖ್ಯಾತ ಪ್ರಜೆಗಳು ಈ ವ್ಯವಹಾರದ ವಿರುದ್ಧ ದೂರು ಇದೆ ಎಂದು ಹೇಳಿದ್ದಾರೆ. ಈಗಲಾದರೂ ಇದರಲ್ಲಿ ಏನಾದರೂ ದೂರು ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ನಡೆಸುವುದು ಅಗತ್ಯವಾಗಿದೆ. ಕೆಲವು ಪ್ರಭಾವಿ ವ್ಯಕ್ತಿಗಳ ರಾಜಕೀಯ ಕಾರಣಗಳಿಗೋಸ್ಕರವೇ ಹಿಂದಕ್ಕೆ ನಿರಪರಾಧಿಗಳಾದ ಈ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಆರುಮುಗಂ ಇವರ ಮೇಲೆ ಮೊಕದ್ದಮೆ ಹಾಕಿದ್ದೀರಿ. ಅವರು ಸಣ್ಣ ಮಟ್ಟದ ರಾಜಕಾರಣಿಯಾಗಿ ವಿರೋಧ ಪಕ್ಷದವರಾಗಿದ್ದ ಕೋಲಾರಿನ ದಲಿತ ಮುಂದಾಳುಗಳಾಗಿರಬೇಕು. ಅವರು ಕೋರ್ಟಿನಲ್ಲಿ ಹೇಗಾದರೂ ಕಷ್ಟಪಟ್ಟು ನಷ್ಟ ಹೊಂದಿ ನಿರಪರಾಧಿಗಳೆಂದು ತೀರ್ಮಾನವಾಗಿದೆ. ಈಗ ಅದೇ ಈ ಶರಾವತಿ ಯೋಜನೆಯ ಪ್ರಕರಣದಲ್ಲಿ ಇರತಕ್ಕಂಥ ವೀರಾಧಿ ವೀರರೆಂದು ಹೊಗಳಿಸಿಕೊಳ್ಳುವ ರಾಜಕಾರಣಿಗಳು ಅಡಕವಾಗಿರತಕ್ಕಂಥವರ ಮೇಲೆ ಆಗಿರುವ ಅಪಾದನೆಗಳ ವಿರುದ್ಧ ಯಾವ ಮೊಕದ್ದಮೆ ಹೂಡಲು ಈ ಸರಕಾರಕ್ಕೆ ಎದೆಗಾರಿಕೆ ಮತ್ತು ನೈತಿಕ ಶಕ್ತಿ ಇಲ್ಲ ಎಂಬ ಮಾತ್ರಕ್ಕೆ ಬಿಟ್ಟಿರಬಹುದು ವಿನಃ ಬೇರೆ ಯಾವ ಕಾರಣವೂ ಇಲ್ಲ ಎಂದು ಅನಿಸುತ್ತದೆ. ಈ ರಾಜ್ಯದ ರಾಜಕಾರಣಿಗಳು ತಮ್ಮ ತಮ್ಮ ಲಾಭದಾಯಕ ಸ್ಥಾನ ಭದ್ರತೆ ದೃಷ್ಟಿಯಿಂದ ಈ ರೀತಿ ಅಪಾದನೆಗಳನ್ನು ಮುಚ್ಚಲು ಹೀಗೆ ಹೆದಗುತ್ತಾ ಇರಬಹುದು ಎಂದು ಅನಿಸುತ್ತದೆ. ಒಂದು ಕಂಟ್ರಾಕ್ಟ್ ಕಂಪನಿಗೆ ಐವತ್ತು ಸಾವಿರ ರೂಪಾಯಿ ಸೆಕ್ಯೂರಿಟಿ ಡಿಪಾಜಿಟ್ ತೆಗೆದುಕೊಂಡು ಇದರಲ್ಲಿ ಕೆಲಸ ಕೊಟ್ಟಿದೆ. ಇದರಲ್ಲಿ ಲಾಭ ಪಡೆಯಲು ಸರ್ಟಿಫಿಕೇಟು ಕೊಟ್ಟಿರುವ ಅನೇಕ ದಳ್ಳಾಳಿಗಳು ಸೇರಿರಬಹುದು. ಆದರೆ ಈಗ ಆ ಕಂಪನಿ ದಿವಾಳಿ ಆಗಿರಬಹುದು. ಅಂಥಾ ವರದಿಯಂತೆ ಭದ್ರತೆ ಚೆನ್ನಾಗಿಲ್ಲದ ಕಂಪೆನಿಯನ್ನು ಕಂಟ್ರಾಕ್ಟಿಗೆ ನೇಮಿಸಿದ್ದಾದರೂ ಹೇಗೆ? ಕೆಲವು ಕಂಪೆನಿ ಕಂಟ್ರಾಕ್ಟರುಗಳಿಗೆ 30 ಲಕ್ಷ ಮೇಲ್ಪಟ್ಟು ಮುಂಗಡ ಹಣ ಕೊಟ್ಟಿದ್ದೀರಿ. ಹಾಗೆ ಕಂಟ್ರಾಕ್ಟುದಾರರಿಗೆ ಮುಂಗಡ ಹಣ ಏಕೆ ಕೊಟ್ಟಿದ್ದೀರಿ?

(ಶ್ರೀ ಗೋಪಾಲ ಸಾಲೆನ್ನ)

ಟೆಂಡರ್ ಅಂಗೀಕರಿಸಿದ ಮೇಲೆ ಅವರಾಗಿಯೇ ಕೆಲಸ ಮುಂದುವರಿಸಬಹುದಾಗಿತ್ತು. ಕಂಟ್ರಾಕ್ಟ್ ಪ್ರಕಾರ ಕೆಲಸ ಪೂರೈಸದೆ ಇರುತ್ತಿದ್ದರೆ ಕೆಲಸ ರದ್ದಾಗಬೇಕಿತ್ತು. ಸರಕಾರ ಇದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲವೇಕೆ? ಸಣ್ಣ ಪುಟ್ಟ ಕಂಟ್ರಾಕ್ಟಿನಲ್ಲಿ ಸಹ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯುವಾಗ ಡಿಪಾಜಿಟ್ ಪಡೆಯುವ ಪದ್ಧತಿ ಇದೆ. ಆದರೆ ಅಲ್ಲಿ ಹಾಗಿರುವಾಗ ಇಲ್ಲಿ ಅಡ್ವಾನ್ಸ್ ಹಣ ಕೊಡುವ ಪದ್ಧತಿ ಏಕೆ ಮತ್ತು ಎಲ್ಲಿಯದು? ಕಂಟ್ರಾಕ್ಟುದಾರರಿಗೆ ಮುಂಗಡ ಹಣ ಕೊಡುವ ಪದ್ಧತಿ ದುರುದ್ದೇಶಪೂರಿತವಾಗಿತ್ತಲ್ಲದೆ ಎಲ್ಲಿಯಾದರೂ ಇದು ಇದೆಯೇ ಎಂದು ತಮ್ಮನ್ನು ಕೇಳುತ್ತೇನೆ. ಯಾವುವೇ ಇಲಾಖೆಯಲ್ಲಿ ಸಣ್ಣ ಕಂಟ್ರಾಕ್ಟಿನಲ್ಲಿ ಕೆಲಸದ ಅಗತ್ಯಕ್ಕಾಗಿ ಅಡ್ವಾನ್ಸ್ ಕೊಡುವ ಪದ್ಧತಿಯೇ ಇಲ್ಲ. ಕೆಲಸ ಆರಂಭಿಸಿ ಮುಂದುವರಿದ ಹಾಗೆ ಆದ ಕೆಲಸದ ಮೌಲ್ಯ ಕೊಡಬೇಕು. ಈ ರೀತಿ 30 ಲಕ್ಷ ರೂಪಾಯಿ ಮುಂಗಡ ಹಣ ಬಡ್ಡೀ ರಹಿತವಾಗಿ ಪ್ರತಿ ಒಬ್ಬರಿಗೆ ಕೊಡುವುದಕ್ಕೆ ಕಾರಣವೇನು? ಏತಕ್ಕೆ ಈ ರೀತಿ ಹೊಸ ಪದ್ಧತಿ ಬಂತು? ಮತ್ತು ಇದು ಸ್ವಜನ ಹಿತ ಸಾಧನೆಯಲ್ಲದೆ ಮತ್ತೇನು? ಇದಕ್ಕೆ ಹೊಣೆಗಾರರು ಯಾರು? ಎಲ್ಲೆಡೆಗಳಲ್ಲೂ ಕಂಟ್ರಾಕ್ಟರರಿಂದ ಜಾಮೀನು ಅಥವಾ ನಗದಿ ಸೆಕ್ಯೂರಿಟಿ ಸರಕಾರದ ಕಾಂಟ್ರಾಕ್ಟ ನಿಯಮದಂತೆ ಏತಕ್ಕೆ ಕೇಳುತ್ತೀರಿ? ಇದರಲ್ಲಿ ಕೊಟ್ಟಿರುವ ಸವಲತ್ತುಗಳನ್ನೆಲ್ಲ ಕೊಡುವ ನಿರೀಕ್ಷಣೆ ಇದ್ದರೆ ದೊಡ್ಡ ಯೋಜನೆಯ ಕೆಲಸ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲವೇ? ಎಂದು ಸರಕಾರವನ್ನು ಕೇಳುತ್ತೇನೆ. ಈಗಾಗಲೇ ಮಾತನಾಡಿದ ಶ್ರೀ ಗಾಂಜೀ ವೀರಪ್ಪನವರು ಕೆಲವು ವಿವರಣೆಗಳನ್ನು ಕೊಟ್ಟು ಪ್ರಬಲ ವಕೀಲರಂತೆ ವಾದಿಸಿದರು. ಆ ವಾದದ ಒಳಗುಟ್ಟಾದರೂ ನಮ್ಮಂಥ ಸಾಮಾನ್ಯ ಜನರಿಗೆ ಗೊತ್ತಾಗಲಿಕ್ಕಿಲ್ಲ. ಅದು ಎಂಜಿನಿಯರುಗಳಿಗೆ ಈಗಾಗಲೇ ಅರ್ಥವಾಗಬಹುದು. ಈ ರೀತಿಯ ವಾದದಿಂದ ಕೇವಲ ಅಲ್ಲಿ ನಡೆದಿರುವಂಥ ಆಪಾದನೆಗಳ ತಕಸೀರುಗಳಿಂದ ತಪ್ಪಿಸುವ ಗುರಿಯಲ್ಲದೆ ತಕ್ಸೀರುಮಾಡದೆ ಜನರನ್ನು ಮೆಚ್ಚಿಸುವುದಕ್ಕೋಸ್ಕರ ಆಗಿರಬೇಕು. ಈ ವಾದಗಳನ್ನು ಒಪ್ಪಿದರೆ ಜನತೆ ಮೋಸಕ್ಕೆ ಬಲಿ ಬೀಳುವಂತಾಗುತ್ತದೆ.
ಸರ್ವೇಸಾಧಾರಣವಾಗಿ ಕೋರ್ಟು ಕಚೇರಿಗಳಲ್ಲಿ ವಕೀಲರು ವಾದಿಸುವ ರೀತಿಯಲ್ಲಿ ವಾದಿಸಿದ್ದಾರೆ. ಆದರೆ ನಾನಾದರೋ ಹೇಳುತ್ತೇನೆ. ಮಾಜಿ ಮಂತ್ರಿಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹಾಗೂ ಶ್ರೀಮಾನ್ ಚನ್ನಬಸಪ್ಪನವರು ಹಿಂದಿನ ಸಚಿವ ಸಂಪುಟದಲ್ಲಿದ್ದವರೂ ಕಾರಣರಾಗಿರತಕ್ಕವರು. ಅವರೂ ಸಹ ಇದಕ್ಕೆ ಪಾಲುಗಾರರು. ಅವರು ಆ ತಪ್ಪುದೋಷಗಳನ್ನು ಈಗ ಈ ಸಭೆಯಲ್ಲಿ ತಿಳಿಸಿ ಅವನ್ನು ತಮ್ಮ ಮೇಲೆ ಬಂದಿರತಕ್ಕ ಆಪಾದನೆಗಳಿಂದ ತಪ್ಪಿಸಿಕೊಳ್ಳುವುದಕ್ಕೆ ನೋಡುತ್ತಿದ್ದಾರೆ. ಎಂದು ಹಲವರು ವಾದಿಸಿದ್ದಾರಷ್ಟೆ?

Sri KADIDAL MANJAPPA.—I was not in the Ministry in 1962 and I cannot be held responsible for events that happened subsequent to 1962.

ಶ್ರೀ ಗೋಪಾಲಸಾಲೆನ್ನ.—ಶ್ರೀ ಕಡಿದಾಳ್ ಮಂಜಪ್ಪನವರು ಆವಾಗ ಇದ್ದರು ಮತ್ತು ಈ ವ್ಯವಹಾರಗಳಿಗೆ ಜವಾಬ್ದಾರರೆಂದು ನಾನು ಇಲ್ಲಿ ಹೇಳಿಲ್ಲ. ಅದು ನ್ಯಾಯಾಂಗ ತನಿಖೆಯಲ್ಲೇ ತಿಳಿಯಬೇಕಾಗಿದೆ. ಆ ರೀತಿಯಾಗಿ ಆಪಾದನೆಗಳಲ್ಲಿ ತಪ್ಪಿಸಿಕೊಳ್ಳುವುದಕ್ಕೆ ನೋಡುತ್ತಿದ್ದಾರೆ ಎಂದರೂ ಅದರಲ್ಲಿ ಈಗಾಗಲೇ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಜವಾಬ್ದಾರರಲ್ಲವೆಂದು, ಆಪಾದನೆಗಳಲ್ಲಿದ್ದರೂ ತಾನು ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ತಯಾರಿದ್ದೇನೆ ಎಂದು ಹೇಳುತ್ತಾರೆ. ಇದು ಸಂತೋಷ. ತನ್ನ ದಕ್ಷತೆಯ ಜವಾಬ್ದಾರಿ ನೀಡುವ ಹೊಣೆಯನ್ನು ಜನತೆಗೆ ತೋರಬೇಕು ಎಂಬ ಅವರ ಅಭಿಪ್ರಾಯವನ್ನು ಎಷ್ಟೋ ಸಾರಿ ಈ ಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ನಾನು ಅದನ್ನೇ ಈಗಲೂ ಕೂಡ ಸ್ಪಷ್ಟಪಡಿಸಿದ್ದೇನೆ. ಹಾಗಿರುವಾಗ ನಾವಾದರೂ ಈಗಿನ ಸಚಿವ ಸಂಪುಟದ ಮೇಲೆಯೇ ಮಾತ್ರವಲ್ಲ, ಇದರಲ್ಲಿ ಶರಾವತಿ ವ್ಯವಹಾರದಲ್ಲಿ ಅಡಗಿರುವ ಯಾವ್ಯಾವ ವ್ಯಕ್ತಿಗಳು ಇದ್ದಾರೆ, ಯಾವ್ಯಾವ ಶಕ್ತಿಗಳಿವೆ, ಯಾವ್ಯಾವ ಅಧಿಕಾರವರ್ಗದವರಿದ್ದಾರೆ, ಅವರನ್ನೆಲ್ಲಾ ಪತ್ತೆಹಚ್ಚಿ ಬಯಲಿಗೆ ತರಬೇಕು ಎಂಬುದಾಗಿ ನಾನು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ಅದಕ್ಕಾಗಿ ಈ ಸರ್ಕಾರ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಏರ್ಪಡಿಸಲೇಬೇಕೆಂದು ಒತ್ತಾಯಪಡಿಸುತ್ತೇನೆ. ಈ ಶ್ವೇತಪತ್ರದಲ್ಲಿ ಕೆಲವು ಕಡೆಗಳಲ್ಲಿ ನಮ್ಮ (Law) ನ್ಯಾಯ ಡಿಪಾರ್ಟ್‌ಮೆಂಟಿಗೆ ಅಭಿಪ್ರಾಯಕ್ಕೋಸ್ಕರ ಕಳುಹಿಸಿರುವ ನಿದರ್ಶನಗಳಿವೆ. ಲಾ ಡಿಪಾರ್ಟ್‌ಮೆಂಟಿನವರೂ ಅವರ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಆ ರೀತಿ ಅವರ ಸಲಹೆಗಳನ್ನು ಕೊಡುವಾಗ ಏನೇನು ಕರಾರುಗಳನ್ನು ಹಾಕಿರುತ್ತಾರೋ ಅಲ್ಲಿ ಅದಕ್ಕನುಗುಣವಾಗಿದೆಯೇ ಅಥವಾ ಎಲ್ಲಿಯಾದರೂ ಉಲ್ಲಂಘನೆ ಆಗಿದೆಯೆಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆನ್ನುವುದು ಕೂಡಾ ನಮ್ಮ ಅನುಮಾನಕ್ಕೆ

ಕಾರಣವಾಗಿದೆ. ನ್ಯಾಯ ಇಲಾಖೆಯವರು ನಮಗೆ ಎಲ್ಲಾ ಚಿತ್ರವನ್ನು ಕೊಟ್ಟಿರುವರು. ಆ ತರಹ ಅದೇ ರೀತಿ ಬೇಜವಾಬ್ದಾರಿಕೆಯ ವ್ಯಕ್ತಿಗಳೂ ಸಹ ಇಲ್ಲಿ ಇದ್ದಾರೆಂದು ಹೇಳಿದರು. ಇಲ್ಲಿ ನಾನು ಒಂದು ಮಾತನ್ನು ಕೇಳುತ್ತೇನೆ. ಈಗ ಸರ್ಕಾರ ನ್ಯಾಯವಾಗಿ ಹಣ ಕೊಡುವುದು ಇಲ್ಲದೆ ಇರುತ್ತಿದ್ದರೆ ಎಷ್ಟೋ ಕೇಸುಗಳಲ್ಲಿ ಅಥವಾ ಮೊಕದ್ದಮೆಗಳಲ್ಲಿ ನಾವಾದರೂ (ಸರಕಾರವಾದರು) ಹೈಕೋರ್ಟುಗಳಲ್ಲಿ ಯಾಕೆ ಸೋಲುತ್ತಿದ್ದೇವೆ ಸುಪ್ರೀಂ ಕೋರ್ಟ್‌ನಲ್ಲಿಯೂ ಸೋತಿದ್ದೇವೆ. ಆದ್ದರಿಂದ ಯಾವ ವ್ಯಕ್ತಿಗಳಿಗೆ ಎಷ್ಟು ಹಣವನ್ನು ಕೊಡಬೇಕಾಯಿತು, ಇದು ಏಕೆ ಈ ರೀತಿ ನ್ಯಾಯಾಲಯಗಳಲ್ಲಿ ಸೋಲು ಆಯಿತೆಂಬುದನ್ನು ಪರಿಶೀಲನೆಮಾಡಬೇಕು. ಅಲ್ಲೇನಾದರೂ ನ್ಯಾಯ ಸಲಹೆಗಳಲ್ಲಿ ನ್ಯೂನತೆಗಳು ಇದ್ದಲ್ಲಿ ಈ ಇಲಾಖೆ ಇದಕ್ಕೆ ಭಾಗಿಯಾಗಿದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ಹೀಗೆ ಕಾನೂನುಗಳನ್ನು ಕೂಡಾ ತಮ್ಮ ತಮ್ಮ ಅನುಕೂಲಕ್ಕಾಗಿ ಅಳವಡಿಸುತ್ತಾರೆ. ಇದನ್ನು ಭದ್ರವಾಗಿ ತಡೆಗಟ್ಟಬೇಕಾಗಿದೆ. ಎಲ್ಲಿ ನೋಡಿದರೂ ಕೂಡ ಈ ಯೋಜನಾಕಾರ್ಯದಲ್ಲಿ ಬಹಳವಾಗಿ ದುಂದುವ್ಯಯ ನಡೆದಿದೆ ಎಂಬ ಚಿತ್ರವು ನಮ್ಮ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತದೆ. ಅನೇಕರು ಹೋಗಿ ಯೋಜನಾ ಸ್ಥಳಕ್ಕೆ ಸಂದರ್ಶಿಸಿ ಸರ್ಟಿಫಿಕೇಟುಗಳನ್ನು ಕೊಡುತ್ತಿದ್ದಾರೆ. ನಮ್ಮವರು ಈ ಸಭೆಯ ಸದಸ್ಯರೂ ಕೆಲವರು ಹೋಗಿರಬಹುದು ಅಲ್ಲಿ ಚೆನ್ನಾಗಿ ಊಟ ಉಪಚಾರ ಹೊಂದಿ ಮಾತನಾಡಿ ಸರ್ಟಿಫಿಕೇಟ್ ಕೊಟ್ಟಿರಲೂ ಬಹುದು. ಈ ಸರ್ಟಿಫಿಕೇಟುಗಳನ್ನು ಯಾವ ಒಂದು ಆಧಾರದ ಮೇಲೆ ಕೊಟ್ಟಿರುತ್ತಾರೆಂಬುದು ವಿಮರ್ಶೆಮಾಡುವ ವಿಚಾರವಾಗಿದೆ. ಅಲ್ಲಿಯ ಲೆಕ್ಕಪತ್ರ ಪರಿಶೀಲಿಸಿದ್ದಾರೆಯ ? ದೊಡ್ಡ ರಾಜ್ಯ ಸರಕಾರದ ಮಂತ್ರಿ ವ್ಯಕ್ತಿಗಳು ರಾಜಕೀಯ ಮುಖಂಡರುಗಳು ಸಾರ್ವಜನಿಕ ಗಣ್ಯ ವ್ಯಕ್ತಿಗಳು, ಕೇಂದ್ರದ ಮಂತ್ರಿಗಳು ಒಂದು ದಿವಸದಲ್ಲಿ ಹೋಗಿ ಸ್ಥಳ ನೋಡಿದ ಮಾತ್ರಕ್ಕೆ ಜನರಿಗೆ ಏನೂ ಅನ್ಯಾಯವಾಗಿಲ್ಲ ರಾಜ್ಯದ ಸರಕಾರಿ ಹಣ ಏನೂ ಹಾಳಾಗಲಲ್ಲ. ಒಂದು ವೇಳೆ ಏನಾದರೂ ಅಲ್ಪ ಸ್ವಲ್ಪ ಆಗಿದ್ದರೆ ಅಂದಾಜನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲವೆಂದು ಆಗಾಗ್ಯೆ ಹೇಳಿದ್ದಾರೆ. ಒಂದು ವೇಳೆ ಅದರಿಂದ ಸ್ಥಳೀಯ ಅಧಿಕಾರಿಗಳೂ ತಂತ್ರಕಾರರೂ, ಮತ್ತಿತರ ಸಂಬಂಧಪಟ್ಟವರು (Shelter) ಆಶ್ರಯ ಪಡೆಯುವುದು ಇದ್ದರೆ ಅದು ರಾಷ್ಟ್ರಕ್ಕೂ, ರಾಜ್ಯಕ್ಕೂ ದ್ರೋಹವಾಗುತ್ತದೆ. ಲೆಜಿಸ್ಲೇಟರ್ಸ್ ಹಲವು ಮಂದಿ ಒಂದು ಸಾರಿ ಸಂದರ್ಶಿಸಿದ್ದರು. ನಾನು ಅದಕ್ಕೆ ಹೋಗಲಿಲ್ಲ. ಅಲ್ಲಿಯೂ ಕೂಡ ನಮ್ಮ ಪೈಕಿ ಹೋದವರು ಕೆಲವರು ಮೇಲಿನಂತೆ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ಕೇಳಿರುವೆನು.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಶ್ರೀಮಾನ್ ಸಿದ್ದಯ್ಯನವರೂ ಸಹ ಕೊಟ್ಟಿದ್ದಾರೆ. ಏಕೆಂದರೆ ಅವರು ಲೀಡರ್.

ಶ್ರೀ ಗೋಪಾಲಸ್ವಾಮಿಶೆಣ್ಣೈ.—ಹೌದು ಅವರೂ ಹೋಗಿದ್ದಾರೆಂದು ತಿಳಿದೇ ಹೇಳುತ್ತಿದ್ದೇನೆ. ಆಡಳಿತ ಪಕ್ಷದವರು ಸಾಮಾನ್ಯವಾಗಿ ಎಲ್ಲಾದರೂ ಹೋದರೆ ಅವರ ಅಭ್ಯರ್ಥಿಯಾಗಿ ಮಂತ್ರಿಗಳನ್ನೇ ಭೇಟಿಮಾಡಿದಾಗ ಮಂತ್ರಿಗಳು ಔಪಚಾರಿಕವಾಗಿ ತಮ್ಮನ್ನು ಆದರಾತಿಥ್ಯಗಳನ್ನಿತ್ತು ಸನ್ಮಾನಿಸಿದ ಕಾರಣದಿಂದ ಅವರನ್ನು ಒಳ್ಳೇ ಮಾತಿನಿಂದ ಸ್ತುತ್ಯೈಸುವುದುಂಟು ಮತ್ತು ಅಂಥಾ ಸ್ಥಳಗಳನ್ನು ಸಂದರ್ಶಿಸುತ್ತಾರೆಂಬುದು ವಾಡಿಕೆ ಮತ್ತು ಹಾಗೆಯೇ ಸಮಾಧಾನಕ್ಕಾಗಿ ಹೇಳುವ ಮಾತು. ಹೋದ ಕಡೆಗಳಲ್ಲೆಲ್ಲ ಆಡಳಿತ, ದಕ್ಷ ಸಂಸ್ಥೆ ಅಥವಾ ಉತ್ತಮ ಕಮಿಟಿಯೆಂದು ಹೊಗಳಿ ಉದ್ದುದ ಭಾಷಣಮಾಡಿದ ಮರುದಿವಸವೇ ಅಥವಾ ಕೆಲವು ದಿನಗಳ ಮೇಲೆ ಅಂತಹ ಸಂಸ್ಥೆಗಳ ಮೇಲೆ ಹಣ ದುರುಪಯೋಗದ ಆಪಾದನೆಯಲ್ಲಿ ಪೋಲೀಸಿನವರು ಧಾಳಿಮಾಡಿದಂತಹ ಅಥವಾ ಅಧಿಕಾರಿಗಳು ಆಪಾದನೆ ಹೊರಿಸಿದುವುಗಳೂ ಇವೆ. ಅಲ್ಲದೆ ಮೊಕದ್ದಮೆಗಳು ಕೋರ್ಟಿನಲ್ಲಿ ಕೂಡಾ ಎಷ್ಟೋ ಇವೆ. ಇಂತಹ ಬೇಜವಾಬ್ದಾರಿ ಹೇಳಿಕೆಗಳಿಂದ ಈ ರೀತಿಯ ಹೊಗಳಿಕೆಯ ಮಾತುಗಳ ಒಂದು ಆಧಾರದ ಮೇಲೆ (Shelter) ರಕ್ಷಣೆ ತೆಗೆದುಕೊಂಡು ರಾಜ್ಯದ ಹಣ ಪೋಲಾಗುವುದನ್ನು ಹಲವೆಡೆಗಳಲ್ಲಿ ಕಾಣುತ್ತಿದ್ದೇವೆ. ಇಂತಹ ದೊಡ್ಡ ಯೋಜನೆ ರಾಜಕೀಯ ನಾಯಕರ ಅನೇಕರ ಬೇಜವಾಬ್ದಾರಿಕೆಯ ಹೇಳಿಕೆಗಳಿಂದಾಗಿ ಹಾಳಾಗದಂತೆ ನಾವು ಮುಂಜಾಗರೂಕತೆ ವಹಿಸುವುದು ಮುಖ್ಯ ಕರ್ತವ್ಯ. ಇದನ್ನು ರಾಜ್ಯದ ಆಡಳಿತವನ್ನು ವಹಿಸಿರುವಂಥ ನಮ್ಮ ಮುಖ್ಯ ಮಂತ್ರಿಗಳು ಹಾಗೂ ಸಚಿವ ಸಂಪುಟದವರು ತಿಳಿದುಕೊಂಡು ಈ ಒಂದು ಮಹಾ ದೊಡ್ಡ ಆಪಾದನೆಗಳಿರುವ ವ್ಯವಹಾರದಲ್ಲಾದರೂ ಜುಡಿಷಿಯಲ್ ಎಂಕ್ವೈರಿಗೆ ಕಾನೂನು ಬದ್ಧವಾದ ತನಿಖೆಗೆ ಅವಶ್ಯಕವಾಗಿ ಏರ್ಪಾಡು ಮಾಡಬೇಕಾಗಿದೆ. ಹೀಗೆ ಮಾಡಿದಲ್ಲಿ ಇವರು ಈ ವ್ಯವಹಾರ ವಿಚಾರದಲ್ಲಿ ತಪ್ಪಿತಸ್ಥರಲ್ಲ. ಇದರಲ್ಲಿ ನಡೆದ ಯಾವ ತಪ್ಪಿಗೂ ಹೊಣೆಗಾರಿಕೆಯಿಲ್ಲ ಎಂದು ಜುಡಿಷಿಯಲ್ ಎಂಕ್ವೈರಿ ಏರ್ಪಡಿಸಿ ಆ ತನಿಖೆಯ ಮೂಲಕ ಈ ವ್ಯವಹಾರದಲ್ಲಿ ಇವರ ಎಲ್ಲರ ನಿಜಸ್ಥಿತಿಯನ್ನು ಸರ್ಕಾರ ರಾಜ್ಯದ ಜನತೆಗೆ ತೋರಿಸಿದರೆ ನಿಜವಾಗಿ ಇವರ ಈಗಿರುವ ಸರಕಾರದ ಮತ್ತು ರಾಜಕಾರಣಿಗಳ ಘನತೆ ಕಡಿಮೆ ಯಾಗುವುದಿಲ್ಲ. ಇದರಿಂದಾಗಿ ಇವತ್ತಿನ ದಿವಸ ನಿಮಗೆ ಇರುವ ಘನತೆ ಯಾವ ರೀತಿಯಲ್ಲೂ ಕಮ್ಮಿ ಯಾಗುವುದಿಲ್ಲವೆಂಬುದನ್ನು ತಿಳಿದುಕೊಳ್ಳಬೇಕು. ಈಗ ನಮಗೆ ಇರುವ ನೆದರಿಕೆಯೆಂದರೆ ಈ

(ಶ್ರೀ ಗೋಪಾಲ ಸಾಲೆನ್ನ)

ಮೈಸೂರು ರಾಜ್ಯದಲ್ಲಿ ಇನ್ನೊಂದು ಕೈರಾನ್ ಪ್ರಕರಣ ಆಗಬಾರದು ಎಂಬುದೊಂದೇ ಆಗಿದೆ. ರಾಜ್ಯದ ಜನತೆ ಅಷ್ಟು ಸ್ಪಷ್ಟವಾದ ಉನ್ನತ ಘನತೆಯಿಂದ ಉತ್ತಮವಾದ ರಾಜ್ಯಾಡಳಿತವನ್ನು ರಾಷ್ಟ್ರದಲ್ಲಿ ಸ್ಥಾಪಿಸಿದ್ದಾರೆಂಬ ಒಂದು ಹೆಮ್ಮೆ ಗೌರವ ಘನತೆ ಉಳಿಸಿಕೊಳ್ಳಬೇಕೆಂಬುವೇ ಈ ನ್ಯಾಯಾಂಗ ತನಿಖೆ ಒತ್ತಾಯದ ನಮ್ಮ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ಆಡಳಿತಪಕ್ಷ ಸಂಪೂರ್ಣ ಸಲಹೆಗಳಿಗೆ ಒಪ್ಪಿ ಜಾರಿಗೆ ತಂದು ಬೆಂಬಲವನ್ನು ಕೊಟ್ಟು ನಿಜವಾಗಿ ಒಂದು ನಿರ್ಧಾರಕ್ಕೆ ಬರಬೇಕಾಗಿದೆ. ನಾನು ಆಡಳಿತಪಕ್ಷದಲ್ಲಿರುವವರೆಲ್ಲರನ್ನೂ ಆರೋಪಿಸುವುದಿಲ್ಲ. ಅನೇಕ ಜನರು ಉತ್ತಮವಾದ ಸಲಹೆಗಳನ್ನು ಅವರಲ್ಲಿಯೂ ಕೊಟ್ಟಿದ್ದಾರೆ. ಆ ಸಲಹೆಗಳು ಬಹಳ ತೀಕ್ಷ್ಣವಾದುವು ಮತ್ತು ಗಮನಾರ್ಹವಾದುವು. ಶ್ರೀಮಾನ್ ಆವಲರೆಡ್ಡಿಯವರು ಕೊಟ್ಟ ಅನೇಕ ವಿಚಾರಪೂರಿತ ಸಲಹೆ ಬಹಳ ಗಮನಾರ್ಹವಾದುದು ಮತ್ತು ಸ್ವಾಗತಾರ್ಹವಾದುದು. ಇದನ್ನು ಸರ್ಕಾರದವರು ಹಾಗೂ ಆಡಳಿತಪಕ್ಷ ಕಡ್ಡಾಯವಾಗಿ ಸ್ವೀಕರಿಸಬೇಕು ಮತ್ತು ಇದರಲ್ಲಿ ಒಂದು ತೀರ್ಮಾನಕ್ಕೆ ಬರಬೇಕು ಒಂದು ವೇಳೆ ಇದಕ್ಕೆ ಈ ಸಲಹೆಗಳನ್ನೆಲ್ಲಾ ಹಾರಿಸಿ ತಮ್ಮಿಷ್ಟದಂತೆ ವರ್ತಿಸುವರೇ ಬಹು ಮತವಿದೆಯೆಂದರೆ ಏನಾದರೂ ಮಾಡಿ ಮುಂದುವರಿಸಿಕೊಂಡು ಹೋಗಬಹುದು ಎಂಬ ದುರಾಭಿಪ್ರಾಯದ ಮೇಲೆ ಅವನ್ನೆಲ್ಲಾ ವ್ಯತಿರಿಕ್ತವಾದ ರೀತಿಯ ತೀರ್ಮಾನಕ್ಕೆ ಬಂದರೆ ಆ ವಿಚಾರದಲ್ಲಿ ರಾಜ್ಯದ ಜನತೆ ಸುಮ್ಮನಿರಲಾರರು ಮತ್ತು ಅದರಿಂದಾಗಬಹುದಾದ ಗೊಂದಲ, ಚಳವಳಿ ಅಥವಾ ಇನ್ನಾವುದೇ ಕೋಲಾಹಲಕ್ಕೆ ಆಡಳಿತಪಕ್ಷವಾದ ಕಾಂಗ್ರೆಸ್ಸೇ ಕಾರಣರಾಗಬೇಕಾದೀತೆಂದು ಎಚ್ಚರಿಸುತ್ತೇನೆ.

ಹೀಗೆ ಮೋಸ ಹೋದಲ್ಲಿ ರಾಜ್ಯದಲ್ಲೆಲ್ಲಾ ಈಗಾಗಲೇ ದೊಡ್ಡ ಕೋಲಾಹಲವಾಗುತ್ತಿದೆ. ಇದರಿಂದಾಗಿ ದೊಡ್ಡದಾದ ಚಳುವಳಿಯೂ ಆರಂಭವಾಗಬಹುದು. ಚಳುವಳಿಗಳು ಈಗಾಗಲೇ ದೇಶದ ಎಲ್ಲಾ ಮೂಲೆ ಮೂಲೆಗಳಲ್ಲೆಲ್ಲಾ ನಡೆಯುತ್ತಿವೆ. ಬಹಳ ತೀಕ್ಷ್ಣವಾಗಿ ಜನತೆಯ ಕಷ್ಟ ನಿವಾರಣೆಗಾಗಿ ಅದರಿಂದಾಗಿ ಆದಷ್ಟು ಶೀಘ್ರವಾಗಿ ಕೇಂದ್ರ ಸರ್ಕಾರವೂ ಸಹ ಇದರಲ್ಲಿ ಪ್ರವೇಶಿಸುವ ಸಂಭವ ಬರಬಹುದು. ಹಾಗೆ ಕೇಂದ್ರವು ಕೈಹಾಕುವಂತೆ ಒತ್ತಾಯಿಸುವುದೂ ಅಗತ್ಯವಾಗಿದೆ. ಆದ್ದರಿಂದ ನಾನಾದರೂ ಸರ್ಕಾರದವರನ್ನು ಒತ್ತಾಯ ಮಾಡುವುದೇನೆಂದರೆ ಕೂಡ್ಲೆ ವ್ಯವಹಾರಗಳ ತನಿಖೆಗೆ ಒಂದು ನ್ಯಾಯ ಮಂಡಲವನ್ನು ರಚಿಸಿ ಯೋಗ್ಯ ತನಿಖೆ (ಜ್ಯುಡಿಷಿಯಲ್ ಎನ್‌ಕ್ವೈರಿ) ಯನ್ನು ಸ್ಥಾಪನೆ ಮಾಡಿ ಇದರ ನಿಜ ಸ್ವರೂಪವನ್ನು ಜನತೆಯ ಮುಂದೆ ಇಟ್ಟು ನಮ್ಮ ರಾಜ್ಯದ ಆಡಳಿತಪಕ್ಷ ಸರ್ಕಾರದ ಗೌರವ, ಘನತೆ ಮತ್ತು ಹೆಮ್ಮೆಯನ್ನು ಕಾಪಾಡುವುದಕ್ಕೆ ಮುಂದೆ ಬರಬೇಕು ಮತ್ತು ಶ್ರೀಮಾನ್ ನಿಜಲಿಂಗಪ್ಪನವರ ಸಾರ್ವಜನಿಕ ವ್ಯವಹಾರಗಳ, ಸಂಪುಟದ ಕೀರ್ತಿ ಬೆಳೆಯಬೇಕು ಎಂದು ಹೇಳುತ್ತೇನೆ. ಹೀಗೆ ಇದು ಆಗಬೇಕಾದರೆ, ಅಪಾದನೆಗಳಿಂದ ತಪ್ಪಿಸಿಕೊಳ್ಳಬೇಕಾದರೆ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಏರ್ಪಾಡು ಆಗಲೇಬೇಕು ಮತ್ತು ಅದಕ್ಕೆ ಬೇಕಾದಂತಹ ನ್ಯಾಯವಾದ ರುಜುವಾತು ಸಾಕ್ಷ್ಯ ಮತ್ತು ಸಲಹೆಗಳನ್ನು ರಾಜ್ಯದ ಎಲ್ಲಾ ಭಾಗದ ಜನತೆ ಆಸಕ್ತಿಯಿದ್ದವರು ಕೊಡುವಂತಹ ಸೌಕರ್ಯ ಉಂಟಾಗಬೇಕು ಎಂದು ಹೇಳುತ್ತೇನೆ. ಈಗಾಗಲೇ ರಾಷ್ಟ್ರದಲ್ಲಿ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಗಂಡಾಂತರ ಪರಿಸ್ಥಿತಿ ಉಂಟಾಗಿ ಬರಗಾಲ ಬಂದು ಬಹು ಭಾಗ ಬಡಜನ ಒಂದು ಹೊತ್ತಿನ ಊಟವೂ ಸಿಗದೆ ನರಳುತ್ತಾ ಇರುವಂತಹ ಜನತೆಯನ್ನು ಇನ್ನಷ್ಟು ದುಸ್ಥಿತಿಗೆ ಬಲಿಯಾಗಿ, ಭಯ ಭೀತಿಗೆ ಬರುವಂತೆ ಮಾಡಬಾರದು, ಆ ರೀತಿ ಮಾಡಿದ್ದೇ ಆದರೆ ಜನತೆಯ ಕಷ್ಟ ಕಾರ್ಪಣ್ಯಗಳಿಗೆ ಶ್ರೀ ನಿಜಲಿಂಗಪ್ಪನವರ ಸರ್ಕಾರದವರೇ ಹೊಣೆಯಾಗಬೇಕಾದೀತು. ಅದನ್ನು ತಪ್ಪಿಸಲಿಕ್ಕೆ ಸರಕಾರವು ಮುಂಜಾಗರೂಕತೆಯನ್ನು ವಹಿಸಬೇಕೆಂದು ಹೇಳಿ ಇನ್ನೊಮ್ಮೆ ಎಚ್ಚರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

10-30 A.M.

Sri L. B. BIRJE (Khanapur).—

(Spoke in Marathi)

†ಶ್ರೀ ಅಣ್ಣಾರಾವ್ ಗಣಮುಖಿ (ಅಫ್‌ಜಲ್‌ಪುರ).—ಅಧ್ಯಕ್ಷರೇ, ಈ ದಿವಸ ಶ್ವೇತಪತ್ರದಮೇಲೆ ಈಗಾಗಲೇ ಸಾಕಷ್ಟು ಬೆಳಕು ಬಿದ್ದಿದೆ. ನಾನು ಕೆಲವು ವಿಷಯಗಳ ಮೇಲೆ ಮಾತನಾಡಬೇಕೆಂದು ಇಚ್ಛೆಪಟ್ಟಿದ್ದೇನೆ. ಸಾಧಾರಣವಾಗಿ ಶ್ವೇತಪತ್ರದಲ್ಲಿ ಕಂಡಂಥ ವಿಷಯಗಳನ್ನು ನಾವು ಪರಿಶೀಲಿಸಿದರೆ 32ನೆಯ ಕ್ಲಾಜಿನಿಂದ ಕೆಳಗೇನು ವಿಷಯಗಳು ಸೂಚಿಸಲ್ಪಟ್ಟಿವೆಯೋ ಅವನ್ನು ನೋಡಿದರೆ ಬಹಳ

ವಿಷಾದವಾಗುತ್ತದೆ ಎಂದು ಹೇಳಬಯಸುತ್ತೇನೆ. ಸರ್ಕಾರದ ಬಾಯಿಂದ ಬರಬೇಕಾದ ಶಬ್ದಗಳು ಕಂಟ್ರಾಕ್ಟರಬಾಯಿಂದ ಬಂದಿರುವಂತೆ ಕಂಡುಬರುತ್ತದೆ. ಏಕೆಂದರೆ ಕೆಲವು ಕಡೆ obviously the contractors could not agree to carry out the work. ಎಲ್ಲಿ ಒಪ್ಪಂದ ಮಾಡಿಕೊಂಡಿದ್ದಾರೆ ಅಲ್ಲೇನೂ ಮಾಡಲು ಸಾಧ್ಯವಾಗಲಿಲ್ಲ, ಇಂಥ ಪ್ರಸಂಗಗಳು ಇವೆ. ಕಂಟ್ರಾಕ್ಟರ ಮುಖದಿಂದ ಬರುವಂಥ ಶಬ್ದಗಳು ಇಲ್ಲಿ ಹೊರಟಿವೆ. ಇದರಲ್ಲಿ ಒಪ್ಪಂದವೇನಾಗಿದೆ ಎಂದು ನೋಡಿದರೆ ಎರಡು ರೀತಿ ಇದೆ, ಒಂದು ಹಕ್ಕಿಗೆ ಸಂಬಂಧಪಟ್ಟಿದೆ ಮತ್ತೊಂದು ಲಯಬಿಲಿಟಿಗೆ ಸಂಬಂಧಪಟ್ಟಿದೆ. ಆದರೆ ಸರ್ಕಾರ ಮಾತ್ರ ತನ್ನ ಹಕ್ಕಿರುವುದನ್ನೆಲ್ಲಾ ಬಿಟ್ಟು ಎಲ್ಲಾ ಲಯಬಿಲಿಟೀಸ್‌ಗೆ ಬದಲಾವಣೆ ಮಾಡಿಕೊಂಡಿದೆ. ಇದನ್ನು ನೋಡಿದರೆ ಕಂಟ್ರಾಕ್ಟರಿಗೆ ಯಾವ ರೀತಿಯಿಂದಲಾದರೂ ಲಾಭ ಎಂಬ ಅಂಶ ಕಂಡುಬರುತ್ತದೆ. ಮೊನ್ನೆ ಡ್ಯಾಂ ಕಟ್ಟುವಾಗ ತಾರಾಪುರ್ ಅಂಡ್ ಕಂಪನಿಯವರು ಆರ್ಬಿಟ್ರೇಷನ್ನಿಗೆ ಹೋಗುವುದಕ್ಕೆ ಮುಂಚೆ 28ನೆಯ ಕಲಮಿನ ಪ್ರಕಾರ ಆ ಕಂಪನಿಯವರಿಗೆ ಸರ್ಕಾರದವರು ಅಥವಾ ಚೀಫ್ ಇಂಜಿನಿಯರು ಆರ್ಡರು ಕೊಟ್ಟಿದ್ದಾರೆ. ಅದು ಈ ಶ್ವೇತಪತ್ರದ 51 ನೆಯ ಪುಟದಲ್ಲಿ ಕಂಡು ಬರುತ್ತದೆ. ಅಲ್ಲಿ ಅಪೆಂಡಿಕ್ಸನಲ್ಲಿ ಈ ರೀತಿ ಹೇಳಿದ್ದಾರೆ :

> "The contractors were called upon to execute the work under the provisions of clauses 27 and 28 of the contractors Conditions of the Contract......The Special Chief Engineer, *vide* his letter......dated 13th July 1960, ordered the contractors to carry out the earth work at the rates specified in his letter...."

ಚೀಫ್ ಇಂಜನಿಯರು ದರ ನಿಗದಿಮಾಡಿ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದರಿಂದಾಗಿ ಭಿನ್ನಾಭಿಪ್ರಾಯವಿರಬಹುದು, ಆರ್ಬಿಟ್ರೇಷನ್ ಕ್ಲಾಜು ಇರಬೇಕು ಅಥವಾ ಬೇಡ ಎಂಬ ಅಭಿಪ್ರಾಯವಿದೆ. ಆದರೆ ಭಾರಿ ಕೆಲಸವಾಗುವ ಕಡೆ, ಕೃಷ್ಣಾ ಪ್ರಾಜೆಕ್ಟ್ ಮುಂತಾದ್ದು ಇರುವ ಕಡೆ ಇಂಥ ಆರ್ಬಿಟ್ರೇಷನ್ ಕ್ಲಾಜಿದೆ. ಇದೇನೂ ಹೊಸದಲ್ಲ, ಆರ್ಬಿಟ್ರೇಷನ್ ಕ್ಲಾಜು ಎಲ್ಲಾ ಕಡೆಯೂ ಇರುತ್ತದೆ ಎಂದು ನಿನ್ನೆ ಅಧ್ಯಕ್ಷರು ಹೇಳಿದರು.

ಅಧ್ಯಕ್ಷರು.—ಮಾನ್ಯ ಸದಸ್ಯರ ಅನುಭವವೇನು ?

ಶ್ರೀ ಅಣ್ಣಾರಾವ್ ಗಣಮುಖಿ.—ಅದನ್ನೇ ಹೇಳುತ್ತಿದ್ದೇನೆ. ಹಾಗೆ ಹೇಳುವಾಗ ನೀವು ಹೇಳಿದ್ದನ್ನು ರೆಫರ್ ಮಾಡಿದೆ. ಈ ಆರ್ಬಿಟ್ರೇಷನ್ ಕ್ಲಾಜು ಹೊಸದಲ್ಲ. ಕಂಟಿನ್ಯೂಯಿಟಿ ಆಫ್ ವರ್ಕ್ ಹೋಗಬಾರದೆಂಬ ಮುಖ್ಯ ಉದ್ದೇಶದಿಂದ ಇದನ್ನು ಮಾಡಿರುವುದು. ನಡುವೆ ಯಾರಾದರೂ ಬಿಟ್ಟರೆ ಅಥವಾ ಸ್ವರೂಪ ಬದಲಾಯಿಸಿದರೆ ಮೊದಲಿದ್ದ ಕಂಟ್ರಾಕ್ಟ್‌ದಾರನಿಗೇ ಕೆಲಸ ಕೊಡಲು ಅವಕಾಶವಿದೆ. ಮತ್ತು ದರದ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದರೆ ಆರ್ಬಿಟ್ರೇಷನ್ನಿಗೆ ಒಯ್ಯಬಹುದು ಎಂದಿದೆ. ಹಾಗಿದ್ದರೂ ಇಂಥ ದುರ್ಘಟನೆ ಒದಗಿತು ಅಥವ ಕಷ್ಟ ಬಂತು ಎಂದು ಹೇಳುವುದು ತಪ್ಪು. ಏಕೆಂದರೆ ಸಾಮರ್ಥ್ಯವಿಲ್ಲದಿರುವ ಸಣ್ಣ ಕಂಟ್ರಾಕ್ಟರು ಇಂಥ ದೊಡ್ಡ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಸಣ್ಣ ಸಣ್ಣ ಕಂಟ್ರಾಕ್ಟರುಗಳಿಗೆ ಕೆಲಸ ಕೊಟ್ಟರೆ ಸರ್ಕಾರ ಒಬ್ಬೊಬ್ಬರಿಗೆ 30 ಲಕ್ಷ ರೂಪಾಯಿ ಸಾಲ ಕೊಡಬೇಕಾದ ಪ್ರಸಂಗ ಬರುತ್ತದೆ. ಇದನ್ನು ಯಾರೂ ವಿಚಾರಮಾಡಿಲ್ಲ. ಸಣ್ಣವರಿಗೆ ಕೊಟ್ಟಿರುವುದರಿಂದ ಈ ಪ್ರಶ್ನೆ ಬಂದಿದೆ. ಎಚ್. ಇ. ಸಿ. ಪಿ. ಬೋರ್ಡ್ ಮಣ್ಣಿನ ಕೆಲಸಕ್ಕೆ ಆರ್ಡರು ಕೊಟ್ಟನಂತರ ಕೆಲಸ ಶುರು ಮಾಡಿ ಅವಾದ ನಂತರ ಮಣ್ಣಿನ ಕೆಲಸದ ದರದ ವಿಚಾರದಲ್ಲಿ ಆರ್ಬಿಟ್ರೇಷನ್ನಿಗೆ ಹೋದರು. ಮುಂಚೆ ನೆಗೋಷಿಯೇಷನ್ ಆಗಾಗ ಮೂರು ಸಲ ಎಚ್. ಇ. ಸಿ. ಪಿ. ಬೋರ್ಡ್ ಮೀಟಿಂಗ್ ಕರೆದರು. ಸಿವಿಲ್ ಇಂಜನಿಯರಿಂಗ್ ಕಮಿಟಿ ಕೂಡ ದರ ನಿರ್ಣಯಿಸಲು 3 ಸಲ ಕೂಡಿ ತಜ್ಞರ ಸಲಹೆ ಪ್ರಕಾರ 200 ರೂಪಾಯಿಗಳ ದರವನ್ನು ಪ್ರಪೋಸ್ ಮಾಡಿತು. ಅದನ್ನು ಒಪ್ಪದೆ ಆರ್ಬಿಟ್ರೇಷನ್ನಿಗೆ ಹೋದರು. ಈ ಸಂಬಂಧವಾಗಿ ಗಾಂಜಿ ವೀರಪ್ಪನವರು ಒಂದು ಮಾತು ಹೀಗೆ ಹೇಳಿದ್ದಾರೆ.

"Government had burnt their fingers and therefore they could not do it."

ನನಗೆ ಅದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಅವರು ತಮಗೆ ಬೇಕಾಗಿರುವ ಭಾಗವನ್ನು ಮಾತ್ರ ಓದಿ ಬೇಡದಿರುವುದನ್ನು ಬಿಟ್ಟಿದ್ದಾರೆಂದು ಕಾಣುತ್ತದೆ. ಏಕೆಂದರೆ ಇದರಲ್ಲಿರುವ ಪ್ರಕಾರ ಕಂಟ್ರಾಕ್ಟ್ ಕೊಟ್ಟಮೇಲೆ ಸೇಕಡ 30ರಷ್ಟು ದರ ಹೆಚ್ಚಾಯಿತು. ಸೆಂಟ್ರಲ್ ಎಕ್ಸೈಜು ಟ್ಯಾಕ್ಸ್ ಸೇಕಡ ಹನ್ನೆರಡೂವರೆಯಷ್ಟು ಹೆಚ್ಚಾಯಿತು, ಮಷನರಿ ಟ್ಯಾಕ್ಸ್ ಹೆಚ್ಚಾಯಿತು. ಕಂಟ್ರಾಕ್ಟ್

(ಶ್ರೀ ಅಣ್ಣಾರಾವ್ ಗಣಮುಖಿ)

ಪಡೆದನಂತರ ತೆರಿಗೆ ಹೆಚ್ಚಾದ್ದರಿಂದ ಅಷ್ಟು ದರದಲ್ಲಿ ಹೆಚ್ಚುಮಾಡಿದ್ದೇವೆಂದು ಹೇಳಿದಾರೆ. ಆದುದರಿಂದ ಇದರಲ್ಲಿ ದೊಡ್ಡ ಪ್ರಮಾಣವೇನೂ ಕಾಣುವುದಿಲ್ಲ. ಸರ್ಕಾರ ನಿಗದಿ ಮಾಡಿದ ದರಕ್ಕೆ ಒಪ್ಪದಿದ್ದರೆ ಆರ್ಬಿಟ್ರೇಷನ್ನಿಗೆ ಹೋಗಬೇಕು. ಈ ಪ್ರಕಾರವಾಗಿ ತಾರಾಪುರ್ ಕಂಪನಿಯವರು ತಾವು ಕೆಲಸಮಾಡಿ ಮುಂದೆ ಆರ್ಬಿಟ್ರೇಷನ್ನಿಗೆ ಹೋಗಿ ಹಣ ಪಡೆದರು. ಅಲ್ಲಿಂದ ಮುಂದೆ ಮಣ್ಣಿನ ಕೆಲಸದಲ್ಲಿ ಕಲ್ಲು ಕೆಲಸ, ಹಾರ್ಟ್ ಆಫ್ ದಿ ಡ್ಯಾಂನಲ್ಲಿ ರಾಕ್ ಫಿಲಿಂಗ್ ಕೆಲಸ ಇದೆಲ್ಲ ಮೊದಲಿನ ಕಂಟ್ರಾಕ್ಟಿನಲ್ಲೇ ಕೂಡಿದೆ. ಮುಂದೆ 60-70 ರೂಪಾಯಿಗಳ ಪ್ರಕಾರ ಇಷ್ಟು ಸಿಕ್ಕುತ್ತದೆ ಎಂದು ಗೊತ್ತಿರುವಾಗ ಒಪ್ಪಂದದ 27-28 ನೇ ಕ್ಲಾಜುಗಳ ಪ್ರಕಾರ ಭಾರಿ ಪ್ರಮಾಣದ ಕೆಲಸವಿದ್ದುದನ್ನು ನೀನು ಮಾಡು ಎಂದು ಆರ್ಡರು ಮಾಡಿದರೆ ರೆಲಿಂಕ್ವಿಷ್ ಮಾಡಿದ ಎಂದು ಆಗಲೇ ತೋರಿಸಿದ್ದಾರೆ. ಹಕ್ಕಿನ ವಿಚಾರ ಇರಲಿ, ಲಯಬಿಲಿಟಿ ಇದ್ದರೇ ಅವನು ಕೆಲಸ ಮಾಡುವುದು. ದರ ನಿಗದಿ ಮಾಡಿದ್ದು ಸರ್ಕಾರ, ಅದನ್ನು ತೆಗೆದುಕೊಳ್ಳುವುದು ಮಾತ್ರ ಇತ್ತು.

ಹೀಗೆ ಯಾವ ಒಂದು ರೇಟನ್ನು ಇವರಿಲ್ಲಿ ಫಿಕ್ಸ್ ಮಾಡಿದರೋ ಆಗ ಇಲ್ಲೇ ಸರ್ಕಾರದವರು ತಪ್ಪು ಹೆಜ್ಜೆಯನ್ನಿಟ್ಟಿದ್ದು. ಆಗ ಸರ್ಕಾರದವರು ಆ ಕಂಟ್ರಾಕ್ಟರನಿಗೆ ಆ ಅರ್ತ್‌ವರ್ಕನ್ನೂ ಮತ್ತು ರಾಕ್ ಫಿಲಿಂಗ್ ವರ್ಕನ್ನೂ ಹಿಂದೆ ಆತ ಅಗ್ರಿಮೆಂಟ್ ಮಾಡಿಕೊಂಡ ರೇಟಿಗೆ ಕೆಲಸ ಮಾಡಬೇಕೆಂದು ಒತ್ತಾಯ ಮಾಡಬೇಕಾಗಿತ್ತು. ಇಲ್ಲೇ ಸರ್ಕಾರದವರು ಒಂದು ಬದಲಾವಣೆಯಾದ ರೇಟನ್ನು ಕೊಟ್ಟು ತಪ್ಪು ಮಾಡಿದ್ದಾರೆ. ಇದನ್ನು ಒತ್ತಾಯಪಡಿಸುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಅಗ್ರಿಮೆಂಟಿನಲ್ಲಿ ಅವಕಾಶವಿತ್ತು. ಈ ಅಂಶವನ್ನು ಅಗ್ರಿಮೆಂಟಿನಲ್ಲಿ ಸ್ಪಷ್ಟವಾಗಿ ಹೇಳಿದೆ ಆದರೆ ಹೀಗೆ ಅಲ್ಲಿ ಒಂದು ತಪ್ಪಾದ್ದರಿಂದ ಅದರಿಂದ ಮೂರು ಪರಿಣಾಮಗಳುಂಟಾದವು. ಈ ಒಂದು ಬದಲಾವಣೆಯಿಂದ ಮೊದಲಿದ್ದ ಅಗ್ರಿಮೆಂಟ್‌ಗಳೆಲ್ಲಾ ಪೂರಾ ನಲ್ಲಿಫೈ ಆದವು. ಇದರಿಂದಾಗಿ ಆ ಕಂಟ್ರಾಕ್ಟರನಿಗೆ ಸರ್ಕಾರದವರು ಮೊದಲೇನು ಆತನಿಗೆ ಆ ಅಪ್‌ಸ್ಟ್ರೀಮು ವರ್ಕಿಗೂ ಮತ್ತು ರಾಕ್‌ಫಿಲಿಂಗ್ ವರ್ಕಿಗೂ ಏನೊಂದು ರೇಟನ್ನು ಕೊಡಲಾಗಿತ್ತೋ ಅದನ್ನೇ ಡೌನ್ ಸ್ಟ್ರೀಂ ವರ್ಕಿಗೂ ಕೊಡಬೇಕೆಂದು ಒತ್ತಾಯ ಮಾಡಲು ಅವನಿಗೆ ದಾರಿ ಸಿಕ್ಕಿತು. ಇದರಿಂದ ಸರ್ಕಾರದವರಿಗೆ ಕೊಡಬೇಕಾಗಿದ್ದ ಹಣಕ್ಕಿಂತ ಹೆಚ್ಚು ಹಣವನ್ನು ಕೊಡತಕ್ಕ ದಾರಿ ಸಿಕ್ಕಿತು.

ಇಷ್ಟು ಹೆಚ್ಚಿನ ಹಣವನ್ನು ಕೇಳುವುದಕ್ಕೆ ಅವನಿಗೆ ಹಿಂದಿನ ಅಗ್ರಿಮೆಂಟ್ ಪ್ರಕಾರ ಅವನು ಬೈಂಡಿಂಗ್ ಆಗಿದ್ದುದರಿಂದ ಕೇಳುವುದಕ್ಕೆ ಅವನಿಗೆ ದಾರಿಯಿರಲಿಲ್ಲ. ಹಾಗಿದ್ದಾಗ ಸರ್ಕಾರದವರೇಕೆ ಆ ಅಗ್ರಿಮೆಂಟನ್ನು ರದ್ದುಪಡಿಸಿದರು ? ಯಾರ ಜೇಬನ್ನು ತುಂಬಿಸಲು ಸರ್ಕಾರದವರು ಹೀಗೆ ಮಾಡಿದರು ? ಕೆಲವಕ್ಕೆ ಹೊಸದಾಗಿ ಟೆಂಡರನ್ನೇಕೆ ಕರೆದದ್ದು ? ಇನ್ನು ಕೆಲವಕ್ಕೆ ಕರೆಯದಿರಲು ಕಾರಣವೇನು ? ಹೀಗೆ ಮಾಡಿರತಕ್ಕದ್ದು ಯಾರನ್ನೂ ಸ್ಯಾಟಿಸ್‌ಫೈ ಮಾಡುವುದಿಲ್ಲ. ದೇಶದಲ್ಲಿದ್ದ ಭಾರಿ ಭಾರಿ ಕಂಟ್ರಾಕ್ಟರುಗಳನ್ನೆಲ್ಲಾ ಕರೆಸಿ ಹಿಂದಿನಂತೆ ಅವರೊಂದಿಗೇಕೆ ನೆಗೋಷಿಯೇಟ್ ಮಾಡಲಿಲ್ಲ ? ಇದನ್ನೆಲ್ಲಾ ನೋಡಿದರೆ ಇವರ ವ್ಯವಹಾರ ಕುದುರೆಯ ಮುಂದೆ ಗಾಡಿಯನ್ನಿಟ್ಟ ಹಾಗೆ ಆಗಿದೆ. ಒಂದಾವರ್ತಿ ಟೆಂಡರನ್ನು ಕರೆದ ಮೇಲೆ ಅವರೊಂದಿಗೆ ಮತ್ತೆ ನೆಗೋಷಿಯೇಷನ್ ಏಕೆ ಮಾಡಬೇಕು ? ಇವರು ಮೊದಲು ಲೋಯೆಸ್ಟ್ ಟೆಂಡರನ್ನು ಒಪ್ಪಿಕೊಳ್ಳಲಿಲ್ಲ. ಇದನ್ನೆಲ್ಲಾ ನೋಡಿದರೆ ಈ ವೈಟ್‌ಪೇಪರನ್ನು ಆ ಕಂಟ್ರಾಕ್ಟರೇ ಬರೆಸಿ ಕೊಟ್ಟಿದ್ದಾರೆನೋ ಎಂದು ಊಹಿಸುವುದಕ್ಕೂ ಇಲ್ಲಿ ಸಾಕಷ್ಟು ಅವಕಾಶವಿದೆ. ಕಂಟ್ರಾಕ್ಟರು ತಾನು 40 ರೂಪಾಯಿನ ರೇಟಿನಲ್ಲಿ ಕೆಲಸ ಮಾಡುತ್ತೇನೆ ಎಂದು ಹೇಳಿದ್ದಕ್ಕೆ ಸರ್ಕಾರದವರು ಬೇಡ ಅದಕ್ಕೆ 108 ರೂಪಾಯಿಗಳನ್ನು ಕೇಳು ಎಂದು ಹೇಳಿ ಕೊಟ್ಟ ಹಾಗೆ ಇಲ್ಲಿ ಕಾಣುತ್ತಿದೆ. ಇಲ್ಲಿ ಎಂ. ಎಸ್. ರಾಮಯ್ಯನವರು 40 ರೂಪಾಯಿಗಳಿಗೆ ಕೊಟ್ಟ ಟೆಂಡರನ್ನು ಸರ್ಕಾರದವರು ಅಂಗೀಕರಿಸಲಿಲ್ಲ ಎಂದು ಇಲ್ಲಿ ಹೇಳಿದೆ. ಹಾಗಾಗಿದ್ದರೆ ಅವರಿಗೆ 2 ಸ್ಟೇಜಿನಲ್ಲಿ ಕೆಲಸವನ್ನು ಕೊಡಲಾಗಿದೆ. ಮೊದಲನೇ ಸ್ಟೇಜಿನ ಕೆಲಸವನ್ನು ಅಂದರೆ ರಾಕ್‌ಫಿಲ್ಲಿಂಗ್ ವರ್ಕನ್ನು 108 ರೂಪಾಯಿಗಳ ದರದಲ್ಲಿ ಕೊಟ್ಟು, ಹೀಗೆ 19 ಸಾವಿರ ಯೂನಿಟ್ಟುಗಳ ಕೆಲಸವನ್ನು ಮೊದಲನೇ ಸ್ಟೇಜಿನಲ್ಲಿ ಒಪ್ಪಿಸಿ, ಅನಂತರ ಎರಡನೇ ಸ್ಟೇಜಿನಲ್ಲಿ ಅವರು 40 ರೂಪಾಯಿ ರೇಟನ್ನು ತಪ್ಪಾಗಿ ಕೋಟ್ ಮಾಡಿದ್ದಾರೆಂದು ಹೇಳಿದ್ದಾರೆ. ಹಾಗೆ ಬಂದರೂ ಒಂದಾವರ್ತಿ 108 ರೂಪಾಯಿಗಳನ್ನು ಕೋಟ್ ಮಾಡಿ, ಎರಡನೇ ಸಾರ್ತಿಗೆ 40 ರೂಪಾಯಿಗಳನ್ನು ಕೋಟ್ ಮಾಡಿದ್ದಾರೆ. ಹಾಗೊಂದು ವೇಳೆ ಅವರು ತಪ್ಪು ಮಾಡಿದ್ದಾಗ್ಯೂ 108 ಮತ್ತು 40 ಒಟ್ಟು 148 ರೂಪಾಯಿಗಳಾಯಿತು. ಇದರ ಸರಾಸರಿ 74 ರೂಪಾಯಿಗಳಾಗುತ್ತದೆ. ಇಲ್ಲಿ ಅಪೆಂಡಿಕ್ಸ್‌ನಲ್ಲಿ ಆ 74 ರೂಪಾಯಿಗಳನ್ನು ಹೇಳಿಲ್ಲ. 40 ರೂಪಾಯಿಗಳನ್ನು ಹೇಳಿಲ್ಲ. ಬೇರೆ ಒಂದು ಫಿಗರನ್ನು ಸೂಚಿಸಿದ್ದಾರೆ. ಇದನ್ನು ನೋಡಿದರೆ ಇಲ್ಲಿ ಸರ್ಕಾರದವರು ಟ್ರೂತನ್ನು ಸಪ್ರೆಸ್

ಮಾಡಿದ್ದಾರೆಂದು ಕಾಣುತ್ತಿದೆ. ಆದರೆ ಹಾಗೇ ಇನ್ನೊಂದು ಕಡೆ ಟ್ರೂತನ್ನು ಸಪ್ರೆಸ್ ಮಾಡಲಿಕ್ಕಾಗಿಲ್ಲ. ಅಪೆಂಡಿಕ್ಸ್‌ನಲ್ಲಿ ಒಂದು ಕಡೆ 105 ರೂಪಾಯಿಗಳನ್ನು ಬೇರೆ ಹೇಳಿದ್ದಾರೆ. ಇದನ್ನು ಯಾವತ್ತು ತಗಿಸಿಕೊಂಡರೆಂಬುದನ್ನು ಹೇಳಲಿಲ್ಲ.........

Mr. SPEAKER.—Rs. 105 is the rate arrived at after it was tried departmentally for a short while to ascertain the rate.

ಶ್ರೀ ಅಣ್ಣಾರಾವ್ ಗಣಮುಖಿ.—ಹಾಗೆ 105 ರೂಪಾಯಿಗಳಿದ್ದ ಡೇಟಾ ರೇಟನ್ನು ಪುನಃ ರಿವೈಸ್ ಮಾಡಲಾಯಿತೆಂದು ಹೇಳಿದ್ದಾರೆ. ಆದರೆ ಸರ್ಕಾರದವರಿಗೆ ಅನುಕೂಲ ಮಾಡಿಕೊಳ್ಳಲು ಈ ಡೇಟಾ ರೇಟನ್ನು ಇವರು 105 ಕ್ಕೆ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಿರಬಹುದು. ಆದರೆ ಅಲ್ಲಿರತಕ್ಕ ಜನ 74 ವರ್ಕಬಲ್ ರೇಟೆಂದು ಹೇಳುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ 2 ಕೋಟಿ 64 ಲಕ್ಷ ರೂಪಾಯಿಗಳ ನಷ್ಟ ಉಂಟಾಯಿತು. ಕಂಟ್ರಾಕ್ಟರು ಮೇಲೆ ಒಂದು ರೇಟನ್ನು ಹಾಕಿ ಕೆಳಗೆ ಇನ್ನೊಂದು ರೇಟನ್ನು ಹಾಕಿದ್ದಾನೆಂದರೆ ಅದನ್ನು ಯಾರೂ ಒಪ್ಪುವುದಿಲ್ಲ.

Mr. SPEAKER.—What is the material effect of the mistake? The party is entitled to withdraw before acceptance of the tender. He has done it and therefore the party goes out of the picture.

ಶ್ರೀ ಅಣ್ಣಾರಾವ್ ಗಣಮುಖಿ.—ಆ ಹೇಮೆಂಟನ್ನು ವಿತ್‌ಹೋಲ್ಡ್ ಮಾಡುವುದಷ್ಟೇ ಅಲ್ಲ, ಆತನನ್ನು ಬ್ಲಾಕ್ ಲಿಸ್ಟಿಗೂ ಸೇರಿಸಬೇಕಾಗಿತ್ತು. ಆದರೆ ಅದಕ್ಕೆ ಬದಲಾಗಿ ಅಧಿಕಾರಿಗಳನ್ನೂ ಆತನನ್ನೂ ಕರೆದು ಕುರ್ಚಿ ಮೇಲೆ ಕುಳ್ಳಿರಿಸಿ ಅತ ಕೇಳಿದ ರೇಟಿಗಿಂತ ಹೆಚ್ಚಿನ ರೇಟನ್ನು ಕೊಟ್ಟು ಆತನಿಗೆ ಅದೇ ಕೆಲಸವನ್ನು ಕೊಟ್ಟಿದ್ದಾರೆ. ಇಲ್ಲಿ ಲೋಯೆಸ್ಟ್ ಟೆಂಡರನ್ನು ಒಪ್ಪದೇ ಇದ್ದುದಕ್ಕಾಗಿ ಸರ್ಕಾರಕ್ಕೆ 72 ಲಕ್ಷ ರೂಪಾಯಿ ನಷ್ಟವಾಯಿತು. ಈಗ ಮತ್ತೆ ಅದೇ ರಾಮಯ್ಯ ತನಗೆ 13.9 ಲಕ್ಷ ರೂಪಾಯಿಗಳು ಬರಬೇಕಾಗಿತ್ತೆಂದು ಅರ್ಬಿಟ್ರೇಷನ್ ಕೊಟ್ಟ ತೀರ್ಮಾನದ ಮೇಲೆ ಮತ್ತೆ ಹೈಕೋರ್ಟಿಗೆ ಅಪೀಲ್ ಹೋಗಿದ್ದಾನೆ. ಆ ಲಿಂಗನಮಕ್ಕಿ ರೇಟಿನ ವಿಚಾರದಲ್ಲಿ ಸರ್ಕಾರದವರು ಹೀಗೆಲ್ಲಾ ಮಾಡಿದ್ದೇ ಇಷ್ಟಕ್ಕೆಲ್ಲಾ ಕಾರಣವಾಯಿತು.

ಇದು ಯೋಗ್ಯವಲ್ಲ. ಈ ರೇಟನ್ನು ಆರ್ಬಿಟ್ರೇಷನ್ ಚೀಫ್ ಇಂಜನಿಯರ್ ಮೊದಲು ನಿಗದಿ ಮಾಡುತ್ತಾರೆ. ಸಿವಿಲ್ ಇಂಜನಿಯರ್ ಅವರು ಕಮಿಟಿಯಲ್ಲಿ ಈ ವಿಚಾರವನ್ನು ಮೂರು ಸಾರಿ ಪ್ರಶ್ನೆ ಮಾಡಿದ್ದಾರೆ. ಸರಕಾರದಲ್ಲಿ ಎಕ್ಸ್‌ಪಾರ್ಟ್ ಯಾರು ಇದ್ದಾರೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಒಬ್ಬ ಚೀಫ್ ಇಂಜನಿಯರ್ ಬೇಡವೆಂದರೆ ಸಿವಿಲ್ ಇಂಜನಿಯರಿಂಗ್ ಸಬ್ ಕಮಿಟಿ ಅದನ್ನು ಅಲ್ಲಗಳೆದು ಈ ನಿರ್ಣಯ ತೆಗೆದುಕೊಂಡದ್ದು. ಆದ್ದರಿಂದ ಡೈರೆಕ್ಟಾಗಿ ಟೆಂಡರ್ ಕಾಲ್‌ಫಾರ್ ಮಾಡಿ ಕೆಲಸ ಹಂಚಿದ್ದು ಬಹಳ ಅನ್ಯಾಯವೆಂದು ನಾನು ಹೇಳುತ್ತೇನೆ.

11-00 a.m.

ಇನ್ನು ಎಲೆಕ್ಟ್ರಿಕ್ ಸಿಟಿ ಬೋರ್ಡ್ ಎಂದು ಏನಿದೆ. ಅದು ಸಾಧಾರಣವಾಗಿ ಅಲ್ಲಿನ ಅಧಿಕಾರಿಗಳಿಗೆ 1950ರಲ್ಲಿ ಅಧಿಕಾರಗಳನ್ನು ವಹಿಸುವ ಬಗ್ಗೆ ಒಂದು ಸರಕಾರೀ ಆಜ್ಞೆ ಹೊರಟಿತ್ತು. ಅದರಲ್ಲಿ ಈ ಅಧಿಕಾರಗಳನ್ನು ಕೊಟ್ಟಿದ್ದಾರೆ. (1) To make contract and sanction tenders in respect of matters which are beyond the limits of powers delegated to the Chief Engineer and Special Chief Engineer. (2) To make variation in contracts and estimates ಅದಲ್ಲದೆ 8-11-1957 ರಲ್ಲಿ HECP ಕಮಿಟಿ ಎಂದು ರಚನೆಮಾಡಿದ್ದಾರೆ. ಅದರಲ್ಲಿ 10 ಜನರು ಇದ್ದಾರೆ. ಅವರಿಗೂ ಇದೇ ಅಧಿಕಾರವನ್ನು ಕೊಟ್ಟಿದ್ದಾರೆ. ಆದರೆ ಈಗಿರತಕ್ಕ ಬೋರ್ಡ್ 23-6-60ರಲ್ಲಿ ರಚನೆ ಯಾವಾಗ ಅದಕ್ಕೆ ಈ ಕೆಳಕಂಡ ಅಧಿಕಾರಗಳನ್ನು ಕೊಟ್ಟಿದ್ದಾರೆ.

1. To scrutinise and approve estimates of H.E. Projects, examine and decide wherever necessary matters pertaining to plans and designs;

2. To make contracts and sanction tenders in respect of matters which are beyond the limits of powers of the Chief Engineers or Special Engineer;

3. To make variations in contracts and estimates.

(ಶ್ರೀ ಅಣ್ಣಾರಾವ್ ಗಣಮುಖಿ)

ಈ ಅಧಿಕಾರಗಳನ್ನು ಸರ್ಕಾರದವರು ಅವರಿಗೆ ಕೊಟ್ಟ ಮೇಲೆ ಅವರಿಗೇ ಪೂರ್ಣಾಧಿಕಾರ ಕೊಡುವುದಕ್ಕೆ ಬಿಡಬಾರದು. ಅದಕ್ಕೊಂದು ಅಡ್ವೈಸರಿಬಾಡಿ ಇದೆ. ಅವರು ತೀರ್ಮಾನ ತೆಗೆದುಕೊಳ್ಳುತ್ತಾರೆಂದೇನಲ್ಲ. ಫೈನಲ್‌ಪವರ್ಸನ್ನು ಅವರಿಗೆ ಕೊಡುವುದಕ್ಕೆ ಪಿ. ಡಬ್ಲ್ಯೂ. ಡಿ. ಸೆಕ್ರೆಟೇರಿಯಟ್ ಅವರು ನಿರ್ಣಯ ತೆಗೆದುಕೊಳ್ಳುವಂತೆ ಒಂದು ಸರ್ಕಾರೀ ಆಜ್ಞೆಯನ್ನು ಇಷ್ಯೂ ಮಾಡಬೇಕು. ಈ ಪವರ್ ಅವರಿಗೆ ಕೊಡುವುದಕ್ಕೆ ಬದಲಾಗಿ ಚೀಫ್ ಇಂಜನಿಯರ್ ಎಲ್ಲಾ ಟೆಂಡರುಗಳನ್ನು ಕರೆದು ಅವನ್ನು ಬೋರ್ಡಿನ ಮುಂದೆ ಇಟ್ಟು ಸರಕಾರಕ್ಕೆ ಸ್ಕ್ರೂನಿಗೆ ಕಳುಹಿಸಿದಾಗ ಬೋರ್ಡಿನಲ್ಲಿ ಆಗಿರತಕ್ಕ ತೀರ್ಮಾನವನ್ನು ಪುನಃ ಮುಂದಕ್ಕೆ ಹಾಕಿದುದು ತಪ್ಪು. ಅದನ್ನು ಅವಾಯ್ಡ್ ಮಾಡಿ ಉದ್ದೇಶಪೂರ್ವಕವಾಗಿ ಮುಂದಕ್ಕೆ ಹಾಕಿದ್ದಾರೆಂದು ನಾನು ಹೇಳುತ್ತೇನೆ. ಎರಡನೆಯದಾಗಿ ಈ ಬೋರ್ಡಿನ 15 ಜನರಲ್ಲಿ 12 ಜನ ಬೆಂಗಳೂರಿನಲ್ಲಿರುವವರೇ ಇದ್ದಾರೆ. ಅದರಲ್ಲಿ 8 ಜನ ಸರಕಾರೀ ಅಧಿಕಾರಿಗಳು ಇದ್ದಾರೆ. ಎಮರ್ಜೆನ್ಸಿ ಮೀಟಿಂಗ್ ಕೇವಲ 45 ನಿಮಿಷಗಳಲ್ಲಿ ಕರೆಸಬಹುದಾಗಿತ್ತು. ಆದರೆ ಈ ಬೋರ್ಡ್ ರಚನೆಯಾದಂದಿನಿಂದ ಇಲ್ಲಿಯವರೆಗೂ ಅದು ಸರಿಯಾಗಿ ಕೆಲಸ ಮಾಡದೆ ಕಂಟ್ರಾಕ್ಟರುಗಳನ್ನು ಸರಿಯಾಗಿ ಸ್ಕ್ರೂಟಿನಿ ಮಾಡದ ಚೀಫ್ ಇಂಜನಿಯರವರಿಗೆ ಸರಕಾರದವರು ಉತ್ತೇಜನ ಕೊಡಬಾರದು. ಎಲ್ಲ ರೀತಿಯಲ್ಲೂ ನೋಡಿದರೆ ಸರ್ಕಾರದವರು ಜುಡಿಷಿಯಲ್ ಎಂಕ್ವೈರಿ ಮಾಡಿಸಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಹಿಂದೆ ಈ ಬಗ್ಗೆ ಜುಡಿಷಿಯಲ್ ಎಂಕ್ವೈರಿಯನ್ನು ಮಾಡುತ್ತೇವೆಂದು ಒಂದು ಕಡೆಯಲ್ಲಿ ಹೇಳಿದ್ದಾರೆ.

Sri. S. NIJALINGAPPA.—I am seriously thinking of whether I should institute a judicial enquiry.

ಶ್ರೀ ಅಣ್ಣಾರಾವ್ ಗಣಮುಖಿ.—ಒಟ್ಟಿನಲ್ಲಿ ಈ ವಿಚಾರದಲ್ಲಿ ಜುಡಿಷಿಯಲ್ ಎಂಕ್ವೈರಿ ಮಾಡಿದರೆ ಬಹಳ ಉತ್ತಮ. ಇಲ್ಲದಿದ್ದರೆ ಅಲ್ಲಿನ ಲೋಪದೋಷಗಳು ಇನ್ನೂ ಬಹಳ ಹೆಚ್ಚಾಗುತ್ತವೆ. ಅವು ಹಾಗೆಯೇ ಬೆನ್ನತ್ತಿಬರುತ್ತಿರುತ್ತವೆ. ಆದ್ದರಿಂದ ನಾನು ಸರಕಾರಕ್ಕೆ ವಿನಯಪೂರ್ವಕವಾಗಿ ಬೇಡಿಕೊಳ್ಳುವುದಿಷ್ಟೇ. ಒಂದೊಂದಾಗಿ ಜುಡಿಷಿಯಲ್ ಎಂಕ್ವೈರಿ ಸಾಕಷ್ಟು ಆಗಬೇಕು. ಈ ಕಾರ್ಯವನ್ನು ಸರಕಾರದವರು ಆದಷ್ಟು ಜಾಗ್ರತೆ ಮಾಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ಈ ಶರಾವತಿ ಶ್ವೇತಪತ್ರದ ಮೇಲೆ ಈಗಾಗಲೇ ಒಂದೂವರೆ ದಿವಸಗಳ ಕಾಲ ಚರ್ಜೆ ನಡೆದು ಈಗ ನನಗೆ ಹತ್ತು ನಿಮಿಷಗಳು ಕೊಟ್ಟಿರುವ ಈ ಸಂದರ್ಭದಲ್ಲಿ ಈ ಶ್ವೇತಪತ್ರದ........

Mr. SPEAKER.—Let him not think that it is I who have given him ten minutes. His party has given him that much time.

Sri H. D. DEVE GOWDA.—I said that because it is so difficult to speak on this subject within ten minutes Sir.

Sri C. J. MUCKANNAPPA.—That is why I made a request to the Chair. Let the Chief Minister make his reply by 3 O' Clock, Sir.

Mr. SPEAKER.—Let the names come to me through the party whips. I do not get the names. He does not understand how complicated it is to reconcile so many demauds. If the Hon'ble Member cannot confine himself to the time-limit, he is at liberty to resume his seat.

ಶ್ರೀ ಎಚ್. ಡಿ. ದೇವೇಗೌಡ.—ಈಗ ಈ ಶರಾವತಿಯ ಬಗ್ಗೆ ಹೇಳುವುದಾದರೆ ನಾನು ಮಾನ್ಯ ಸಭೆಗೆ ಬಂದು ಸುಮಾರು ಎರಡುವರೆ ವರ್ಷಗಳಾಯಿತು. ಈ ಎರಡವರೆ ವರ್ಷಕಾಲದಲ್ಲಿ ನಾನು ಇದೇ ಪ್ರಥಮವಾಗಿ ಈ ದೇಶದಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಟೀಕೆಗಳಿಗೆ ಒಳಗಾಗಿರತಕ್ಕ ಈ ಪ್ರಾಜೆಕ್ಟಿನ ಮೇಲೆ ನನ್ನ ಅಭಿಪ್ರಾಯವನ್ನು ಕೊಡತಕ್ಕ ಒಂದು ಸಂದರ್ಭವನ್ನು ಈ ದಿವಸ ಉಪಯೋಗಿಸಿಕೊಳ್ಳುವ ಸನ್ನಿವೇಶ ನನಗೆ ದೊರಕಿದೆ. ಈ ದಿವಸ ಶ್ರೀಮಾನ್ ಗಂಜೀವೀರಪ್ಪನವರು ತಮ್ಮ ಭಾಷಣದಲ್ಲಿ ಸರಕಾರದ ನಡವಳಿಕೆಗಳು ಏನಿವೆ, ಸರಕಾರ ತನ್ನ ಕರ್ತವ್ಯವನ್ನು ಯಾವರೀತಿ ವಿಚಕ್ಷಣೆಯಿಂದ ನಡೆಸಿದೆ ಎಂಬುದಕ್ಕೆ

ಈ ಮಾನ್ಯ ಸಭೆ ಸರ್ಕಾರದವರನ್ನು ಕನ್‌ಗ್ರಾಜುಲೇಟ್ ಮಾಡಬೇಕಾಗಿದೆ ಎಂದು ಒತ್ತಿ ತಿಳಿಸಿದರು. ಜೊತೆಗೆ ವಿರೋಧಪಕ್ಷದ ಕೆಲವು ಸದಸ್ಯರು ಮಾಡತಕ್ಕ ಕ್ರಿಟಿಸಿಜಮ್ಸ್ ಅನ್‌ಚಾರಿಟಬಲ್ ಎಂದು ಅವರು ನಿನ್ನೆ ಈ ಸಭೆಯಲ್ಲಿ ಉಪಯೋಗಿಸಿದ್ದಾರೆ. ನಿನ್ನೆ ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀಮಾನ್ ವೀರೇಂದ್ರಪಾಟೀಲ್ ಅವರು ಶ್ರೀಮಾನ್ ಅಣ್ಣಾರಾವ್‌ಗಣಮುಖಿಯವರ ಮತ್ತು ಶ್ರೀಮಾನ್ ವಿ. ಎಸ್. ಪಾಟೀಲ್ ಅವರ ಸ್ಟೇಟ್‌ಮೆಂಟಿನ ಬಗ್ಗೆ ಉತ್ತರವನ್ನು ವ್ಯಕ್ತಪಡಿಸಿದಾಗ್ಯೆ ಅವರೇನು ಎಕ್ಸ್‌ಪರ್ಟ್ ಅಲ್ಲ, ಅವರು ಅಂಥ ಅಭಿಪ್ರಾಯವನ್ನು ವ್ಯಕ್ತಪಡಿಸಬಾರದು ಎಂದು ಅವರು ತಿಳಿಸಿದ್ದಾರೆ. ಮೊನ್ನೆ ಶರಾವತಿಗೆ ಹೋಗಲು ಶಾಸಕರಿಗೆ ಸರ್ಕಾರ ಕೊಟ್ಟಂತಹ ಒಂದು ಆಹ್ವಾನದ ಮೇಲೆ ನಾನು ಸಹ ಶರಾವತಿಗೆ ಹೋಗಿ ಅಲ್ಲಿ ಕೆಲವು ಕೆಲಸ ಕಾರ್ಯಗಳನ್ನು ನೋಡಿದೆ, ಅಲ್ಲಿ ಕೆಲಸ ಮಾಡಿರುವ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಒಂದೆರಡು ಈ ಸಭೆಯಲ್ಲಿ ವ್ಯಕ್ತ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವೊತ್ತಿನ ದಿವಸ ನಮ್ಮ ಮುಂದಿಟ್ಟಿರುವ ಈ ಭಾರಿ ಶ್ವೇತ ಪತ್ರ ಏನಿದೆ ಅದರಲ್ಲಿ ಕಂಟ್ರಾಕ್ಟರುಗಳ ಟೆಂಡರುಗಳು, ಅಗ್ರಿಮೆಂಟುಗಳು, ಅವರ ಟೆಂಡರುಗಳ ರೇಟ್ಸ್ ಹಾಗೂ ಟೆಂಡರು ನೋಟಿಫಿಕೇಷನ್‌ಗಳನ್ನೂ, ಪೂರ್ಣ ಸ್ಕೀಮುಗಳನ್ನೂ ನಮ್ಮ ಮುಂದೆ ಇಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ಪೂರ್ಣವಾದ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಟೆಂಡರು ನೋಟೀಸುಗಳಲ್ಲಿ ಏನು ಅಗ್ರಿಮೆಂಟ್ ಕ್ಲಾಜುಗಳು ಇರುತ್ತವೆಯೋ ಅವುಗಳನ್ನು ಪೂರ್ಣವಾಗಿ ಇದರಲ್ಲಿ ನಮೂದು ಮಾಡಿಲ್ಲ. ಈ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳುವುದಾದರೆ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಟೆಂಡರ್ ನೋಟಿಫಿಕೇಷನ್ ಕ್ಲಾಜಸ್ ಏನು ಇರುತ್ತವೆಯೋ ಅವುಗಳನ್ನು ಶರಾವತಿಗೆ ಅನ್ವಯಿಸಿ ಏನು ಉದ್ದೇಶದಿಂದ ಅಗ್ರಿಮೆಂಟ್ ಕ್ಲಾಜಸ್ ಹಾಕಿದ್ದಾರೆಯೋ, ಅದನ್ನೂ ಮತ್ತು ಈ ಇಲಾಖೆಯಲ್ಲಿರತಕ್ಕ ಸಂಪ್ರದಾಯವನ್ನೂ ನೋಡಿದರೆ ಇದರಲ್ಲಿ ಮೋಸ ಅಡಗಿದೆ ಎಂಬುದು ಎದ್ದು ಕಾಣುತ್ತದೆ. ಇವರೇ ಕಟ್ಟಿರತಕ್ಕ ಶ್ವೇತಪತ್ರದಲ್ಲಿ ಅಡಗಿರುವುದು ಏನೆಂದರೆ, ಕಂಟ್ರಾಕ್ಟರುಗಳು ಡಿಕ್ಟೇಟರಾಗಿ ಸರ್ಕಾರದ ಇಲಾಖೆಯ ಅಧಿಕಾರಿಗಳ ತನಿಖೆಗೆ ಅನುಗುಣವಾದಂತಹ ಎಲ್ಲಾ ರೀತಿಯ ಸೌಲತ್ತುಗಳನ್ನು, ಅಗ್ರಿಮೆಂಟ್ ಕ್ಲಾಜಸ್ ವಗೈರೆಗಳನ್ನು ಇಂಪ್ರೂವ್ ಮಾಡಿ ಕಳುಹಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸರ್ಕಾರ ಮತ್ತು ಇಂಜಿನಿಯರಿಂಗ್ ಇಲಾಖೆಯವರು ಕಂಟ್ರಾಕ್ಟರುಗಳು ಎಲ್ಲಾ ಕಲಮುಗಳನ್ನೂ ಒಪ್ಪಿದ್ದಾರೆ ಎಂದು ಹೇಳಿದರೆ ಬಹಳ ವಿಷಾದಕರವಾದ ಸಂದರ್ಭ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಸ್ವಾಮಿ, ಶ್ರೀಮಾನ್ ಗಾಂಜಿ ವೀರಪ್ಪನವರು ಬಹಳ ಉಚ್ಛಮಟ್ಟದಲ್ಲಿ ಶ್ವೇತಪತ್ರವನ್ನು ಬೆಂಬಲಿಸುತ್ತಾ ಮಾತನಾಡಿದರು. ರಾಕ್‌ಫಿಲಿಂಗ್ ಅಪ್ ಸ್ಟ್ರೀಮ್ ಡ್ಯಾಮಿನಲ್ಲಿ ನಾವು ನೋಡಿರತಕ್ಕ ಅನಾಹುತಗಳು ಏನೇನು ಇವೆಯೋ ಅವುಗಳನ್ನು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಈ ಮಾನ್ಯ ಸಭೆಯವರ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ಶರಾವತಿ ಪ್ರಾಜೆಕ್ಟ್ ಕೆಲಸ ನಡೆಯುವ ಸ್ಥಳಕ್ಕೆ ಹೋಗಿ ಕಣ್ಣಾರೆ ಕಂಡುಬಂದ ವಿಷಯಗಳನ್ನು ಇಲ್ಲಿ ನಾನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಮೂರು ಪದಗಳನ್ನು ವ್ಯಾಖ್ಯಾನ ಮಾಡಿದ್ದಾರೆ. ರಾಕ್ ಫಿಲಿಂಗ್; ಅಪ್‌ಸ್ಟ್ರೀಮ್, ರಿವಿಟ್‌ಮೆಂಟ್ ಇವೆಲ್ಲಾ ಟೆಕ್‌ನಿಕಲ್ ಟರ್ಮ್ಸ್. ಇವು ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಥವಾಗುವುದಿಲ್ಲ. ಈ ವಿಷಯದಲ್ಲಿ ತಜ್ಞರ ಶಾಖೆಯವರು ಕೊಟ್ಟಿರತಕ್ಕ ಅಭಿಪ್ರಾಯಗಳೇನಿವೆಯೋ ಅದರಂತೆಯೇ ಮಾಡಬೇಕಾಗುತ್ತದೆ. ಈ ಸ್ಪೆಸಿಫಿಕೇಷನ್ ವಿಚಾರದಲ್ಲಿ ಮುಖ್ಯ ಇಂಜಿನಿಯರುಗಳು ತಿಳಿಸಿರುವ ವಿಷಯದಲ್ಲಿ ನಾನು ಒಂದು ಷರತ್ತನ್ನು ಹಾಕುವುದಕ್ಕೆ ಇಚ್ಛೆಪಡುತ್ತೇನೆ. ಏನು ಕ್ಲಾಸಿಫಿಕೇಷನ್ ಆಫ್ ವರ್ಕನ್ನು ಎಗ್ಸಿಕ್ಯೂಟ್ ಮಾಡುತ್ತಾರೆ ಎನ್ನುವುದನ್ನು ಯೋಚನೆ ಮಾಡಿ, ವಿಂಗಡಣೆ ಮಾಡಿ ಸ್ಪೆಸಿಫಿಕೇಷನ್‌ನಲ್ಲಿ ತಿಳಿಸಬೇಕು. ರಾಕ್‌ಫಿಲಿಂಗ್ ಕೆಲಸ ಯಾವರೀತಿ ನಡೆದಿವೆ. ಅದಕ್ಕೆ ಯಾವ ಯಾವ ಸೈಜಿನ ಕಲ್ಲನ್ನು ಹಾಕುತ್ತಾರೆ, ಯಾವ ಪ್ರಪೋರ್ಷನೇಟ್ ಬರುತ್ತದೆ ಎಂಬುದನ್ನು ತಿಳಿಸಬೇಕು. ಏತಕ್ಕೆಂದರೆ ಇದರಲ್ಲಿ ಅನೀತಿ ಮತ್ತು ವಂಚನೆ ನಡೆದಿದೆ. ಅಲ್ಲಿ ಮಾಡಿರತಕ್ಕ ಕೆಲಸ ಯಾವ ರೀತಿ ಇದೆಯೆಂಬುದನ್ನು ಹೇಳುವುದಾದರೆ ಮೊದಲು ರಾಕ್‌ಫಿಲಿಂಗ್ ವರ್ಕ್ ಬಗ್ಗೆ ಒರಿಜಿನಲ್ ಟೆಂಡರನ್ನು ಕರೆದು ತಾರಾಪುರ ಅಂಡ್ ಕಂಪೆನಿಯವರಿಗೆ ಕೆಲಸವನ್ನು ಕೊಡತಕ್ಕಂಥಾ ಕಾಲದಲ್ಲಿ ಅದರ ಕ್ವಾಂಟಿಟಿ ಏನಿದೆ ಎಂಬುದನ್ನು ನೋಡಿದರೆ 22 ಸಾವಿರ ಸಿ.ಎಫ್.ಟಿ.ಗೆ ಇದ್ದ ಡಿಸೈನನ್ನು ಬದಲಾವಣೆ ಮಾಡಿದರು. ಆ ಡಿಸೈನನ್ನು 44 ಸಾವಿರ ಸಿ.ಎಫ್.ಟಿ.ಗೆ ಹೆಚ್ಚು ಮಾಡಿದರು. ಆ ಡಿಸೈನನ್ನು ಬದಲಾವಣೆ ಮಾಡಿದುದರ ಪರಿಣಾಮವಾಗಿ ಕಂಟ್ರಾಕ್ಟರಿಗೆ ಅರ್ಬಿಟ್ರೇಷನ್ ರಿಲಿಂಕ್ವಿಷ್ ಮಾಡಿದ್ದೇವೆ. ಆದ್ದರಿಂದ ಒಪ್ಪದೇ ಬೇರೆ ಮಾರ್ಗವೇ ಇಲ್ಲ ಎಂದು ಹೇಳಿದ್ದಾರೆ. 22 ಸಾವಿರ ಸಿ.ಎಫ್.ಟಿ. ಇದ್ದ ಡಿಸೈನಿಗೆ ಒರಿಜಿನಲ್ ಟೆಂಡರಿನಲ್ಲಿ ಏನೇನು ಸ್ಪೆಸಿಫಿಕೇಷನ್ ಇತ್ತೋ ಆ ಕೆಲಸಗಳನ್ನು ಮಾಡಿಸದೆ ರಿಲಿಂಕ್ವಿಷ್ ಮಾಡುವುದಕ್ಕೆ ಏತಕ್ಕೆ ಹೋದರು ಎಂಬುದನ್ನು ತಿಳಿಸಬೇಕು. ಒರಿಜಿನಲ್ ಟೆಂಡರಿನಲ್ಲಿ ಯಾವ ಯಾವ ಐಟಮ್‌ಗಳು ಇದ್ದುವು ಎನ್ನುವ ವಿಚಾರದಲ್ಲಿ ನಾನು ಯಾವ ಚೀಫ್ ಇಂಜಿನಿಯರ ಜೊತೆಯಲ್ಲಿ ಬೇಕಾದರೂ

(ಶ್ರೀ ಎಚ್. ಡಿ. ದೇವೇಗೌಡ)

ಮಾತನಾಡುವುದಕ್ಕೆ ಸಿದ್ಧನಾಗಿದ್ದೇನೆ. ನನಗೆ 12 ವರ್ಷಗಳು ಕಂಟ್ರಾಕ್ಟ್ ಮಾಡಿದ ಅನುಭವ ಇದೆ. ಈ ಟೆಂಡರ್ ವಿಷಯದಲ್ಲಿ ಏನೇನು ನಡೆಯುತ್ತದೆ ಎನ್ನುತಕ್ಕ ವಿಷಯಗಳೆಲ್ಲವೂ ನನಗೆ ಚೆನ್ನಾಗಿ ಗೊತ್ತಿದೆ. ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ Quantity mentioned in the estimate are only approximately it may vary ಎಂದು ಹೇಳಿದ್ದಾರೆ. 22 ಸಾವಿರ ಸಿ.ಎಫ್.ಟಿ. ರಾಕ್‌ಫಿಲ್ ಡ್ಯಾಮನ್ನು ಕಟ್ಟುವುದಕ್ಕೋಸ್ಕರ ತಾರಾಪೂರ್ ಅಂಡ್ ಕಂಪೆನಿಯವರಿಗೆ ಕೊಟ್ಟಿದ್ದಂತಹ ರೇಟನ್ನು ಬದಲಾಯಿಸುವುದಕ್ಕೋಸ್ಕರ ನಮ್ಮ ಅಧಿಕಾರಿಗಳು 104 ರೂಪಾಯಿಗಳ ನೆಗೋಷಿಯೇಟೆಡ್ ರೇಟ್ ಕೊಡತಕ್ಕ ಸಂಧಾನವನ್ನು ಮಾಡಿದರು. ನಮ್ಮ ಮಿತ್ರರಾದ ಶ್ರೀಮಾನ್ ಗಾಂಜಿ ವೀರಪ್ಪನವರು ಇದರಿಂದ 34 ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಬಹುದು ಎಂದು ಹೇಳಿದ್ದಾರೆ. ಇದರ ಬಗ್ಗೆ ಅಂಕಿಅಂಶಗಳನ್ನು ತಿಳಿಸುವುದಾದರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಶರಾವತಿಯ ಯೋಜನೆಯು ನಮ್ಮ ದೇಶದ ಜೀವನಾಡಿ ಎಂದು ಇದೇ ಸಭೆಯಲ್ಲಿ ಹೇಳಿದ್ದಾರೆ. ದೇಶದ ಅಭಿವೃದ್ಧಿಯ ವಿಷಯದಲ್ಲಿ ಆಡಳಿತ ಪಕ್ಷದವರಿಗೆ ಎಷ್ಟು ಆಸಕ್ತಿ ಇದೆಯೋ ವಿರೋಧಪಕ್ಷದವರಿಗೂ ಅಷ್ಟೇ ಆಸಕ್ತಿ ಇರುತ್ತದೆ. ಅವರು ದೇಶದ ಅಭಿವೃದ್ಧಿಯನ್ನು ಮಾಡುತ್ತಿರುವಾಗ ನಾವೂ ಸಹ ಬೆಂಬಲಿಗರಾಗಿ ಅವರ ಹಿಂದೆಯೇ ಹೋಗುತ್ತೇವೆ. 120 ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗೆ ಖರ್ಚುಮಾಡುತ್ತಿರುವಾಗ ಇದರ ವಿಷಯದಲ್ಲಿ ಯಾರೂ ಕೂಡ ಮಿಸ್‌ಲೀಡ್ ಮಾಡಬಾರದು. ಇದರಿಂದ ಜನತೆಯು ಮನ ನೋಯುತ್ತದೆ. ಆ ರೀತಿ ಮಾಡುವುದಾದರೆ ಸಾರ್ವಜನಿಕರ ಹಿತದೃಷ್ಟಿಯಿಂದ ನ್ಯಾಯದೊರೆತಂತಾಗುವುದಿಲ್ಲ. ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ರಾಕ್ ಫಿಲಿಂಗ್‌ನಲ್ಲಿ ಯಾವ ಯಾವ ಐಟಮ್ ಹಾಕುತ್ತಾರೆ, ರಾಕ್ ಫಿಲಿಂಗ್ ಅಪ್ ಸ್ಟ್ರೀಮ್ ರಿವೆಟ್‌ಮೆಂಟ್ ಮತ್ತು ಡೌನ್‌ಸ್ಟ್ರೀಮ್ ಇವುಗಳನ್ನು ಹೇಗೆ ಮಾಡುತ್ತಾರೆ, ಯಾವ ಕಲ್ಲನ್ನು ಹಾಕುತ್ತಾರೆ. ಹೇಗೆ ರೇಟನ್ನು ಬದಲಾವಣೆ ಮಾಡತಕ್ಕ ಕ್ಲಾಸಿಫಿಕೇಷನ್ ಮಾಡುತ್ತಾರೆ, ಎಂಬುದನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ತಿಳಿಸಬೇಕು. ಇದರಲ್ಲಿ ಮೋಸ ಅಡಗಿದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಕಡೆ ಹೇಳುತ್ತಾರೆ ಒಂದು ಲಕ್ಷ 50 ಸಾವಿರ ಸಿ.ಎಫ್.ಟಿ. ಇರತಕ್ಕ ಕೆಲಸವನ್ನು 150 ದಿವಸಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. 1,31,200 ಸಿ.ಎಫ್.ಟಿ. ವೇರಿಯೇಷನ್ ವಿಚಾರವನ್ನು ಹೇಳುತ್ತಾ "This was due to the fact that a large number of piece-workers had now sprung up who had opened several smaller quarries which were regared as uneconomical by major contractors and who could therefore supply materials at shorter leads and consequently at smaller cost. The lowest tender of Messrs Sharavathi Construction Co., whose tender was 33.36 per cent less was accepted. By this time, new works on the projects had become so scarce that many contractors began to compete for works even quoting considerably less than the estimated amounts." ಎಂದು ಹೇಳಿದ್ದಾರೆ. ಆ ಕೆಲಸವನ್ನು ಗೊತ್ತುಮಾಡಲ್ಪಟ್ಟ ಅವಧಿಯಲ್ಲಿ ಮುಗಿಸಬೇಕಾಗಿದ್ದರೆ ಹೆಚ್ಚಿನ ಮೆಷಿನರಿ, ಟ್ರಾನ್ಸ್‌ಪೋರ್ಟಿಗೆ ವೆಹಿಕಲ್ಸ್ ಮತ್ತು ಹೆಚ್ಚಿನ ಕೆಲಸಗಾರರು ಇತ್ಯಾದಿಗಳೆಲ್ಲಾ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ವ್ಯತ್ಯಾಸಕ್ಕೆ ಕಾರಣವನ್ನು ತಿಳಿಸತಕ್ಕದ್ದು ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಶ್ರೀಮಾನ್ ಕೆ. ಎಲ್. ರಾವ್ ಅವರು ಹೇಳಿದಂತಹ ಒಂದು ವಿಷಯವನ್ನು ನಾವು ಪ್ರಸ್ತಾಪ ಮಾಡಬೇಕಾಗಿದೆ. ಅವರ ಒಂದು ಪ್ರಾವೀಣ್ಯತೆ, ಅನುಭವ ಅವರ ತಜ್ಞತೆಯನ್ನು ಅಳತೆ ಮಾಡತಕ್ಕ ಶಕ್ತಿ ನನಗೆ ಇಲ್ಲ. ಅವರಿಗೆ ಈ ಕೆಲಸದ ಸಂಬಂಧದಲ್ಲಿ ಸರಿಯಾದಂತಹ ಅಂಕಿಅಂಶಗಳನ್ನು ಸಂಬಂಧಪಟ್ಟವರು ಕೊಡಲಿಲ್ಲ. ಅವರಿಗೆ ಸರಿಯಾದ ಅಂಕಿಅಂಶಗಳು ಸಿಕ್ಕಿ ಅದನ್ನು ಪರಿಶೀಲನೆ ಮಾಡಿ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಸಾಕಷ್ಟು ಅಂಕಿಅಂಶಗಳು ದೊರೆಯದೆ ಇರುವುದರಿಂದ. ಅವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಕೇವಲ ಆಧಾರರಹಿತವಾದದ್ದು ಎಂದು ನಾನು ಹೇಳುತ್ತೇನೆ.

ಇನ್ನು ಲಿಂಗನಮಕ್ಕಿ ಪವರ್ ಚಾನಲ್ ಏತಕ್ಕೆ ಕ್ರಾಕ್ ಬಂತು ಎಂದು ಕೇಳಿದ್ದಕ್ಕೆ ನೆಲದ ಕೆಳಭಾಗದಿಂದ ವೆಲ್ಲಗಡೆ ಹೊರಟಿರತಕ್ಕ ಅನಿರೀಕ್ಷಿತ ಒತ್ತಡವು ಪ್ರಾಯಶಃ ಹೀಗೆ ಈ ಕ್ರಾಕ್ ಬರುವುದಕ್ಕೆ ಕಾರಣವಾಯಿತು ಎಂದು ಹೇಳಿದರು. ಈ ಪವರ್ ಚಾನಲ್ ಕನ್‌ಸ್ಟ್ರಕ್ಟ್ ಮಾಡುವುದಕ್ಕೆ ಪೈಲೆಟ್ ಫೌಂಡೇಷನ್ ಹೊಡೆದು ಅದರಮೇಲೆ ಕಾಂಕ್ರಿಟ್ ಪ್ಲಾಟ್‌ಫಾರಮ್ ರಚನೆ ಮಾಡಿದ

ಮೇಲೆ ಅಂಡರ್‌ಗ್ರೌಂಡಿನಲ್ಲಿ ಹೇಗೆ ವಾಟರ್ ಬಂತು ಅದು ಕ್ರ್ಯಾಕ್ ಏಕಾಯಿತು ಎಂಬುದನ್ನು ತಿಳಿಸಬೇಕು. ಈ ಪ್ಲ್ಯಾಟ್‌ಫಾರಮ್ ರಚನೆ ಮಾಡುವುದಕ್ಕೆ ಸಿಮೆಂಟ್, ಮಾರ್ಟರ್ ಕಬ್ಬಿಣ, ಜೆಲ್ಲಿ ಇತ್ಯಾದಿ ಸಾಮಾನುಗಳನ್ನು ಯಾವ ಪ್ರಮಾಣದಲ್ಲಿ ಹಾಕಿದ್ದಾರೆ, ಅದು ಒಡೆದುಹೋಗುವುದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು. ಮತ್ತು ನಾನು ಈ ಕೆಳಗೆ ಹೇಳಿರುವಂತಹ ವಿಚಾರಗಳ ಬಗ್ಗೆ ಸಾಕಷ್ಟು ಕಾರಣಗಳನ್ನು ತಿಳಿಸಬೇಕು. ಮತ್ತು ಅವುಗಳ ಬಗ್ಗೆ ವಿಚಾರಣೆಯನ್ನು ನಡೆಸಬೇಕೆಂದು ನಾನು ಹೇಳುತ್ತೇನೆ.

1. The intention of introducing the arbitration clause and the consequence and implication thereof.

2. After changing the agreement, sufficient care was not taken to introduce the condition clause in the tender notification.

3. Ex-parte decision by the Government to entrust the work without bringing it before the H.E.C.P.

4. Failure to challenge the arbitration award.

5. Loss to the Exchequer on account of Arbitration Clause.

6. Failure to asses the property of officers in charge of these works and also of the contractors and Minister in charge.

7. Whether quality is maintained in the works ?

ಇದರಲ್ಲಿ ಸಂಬಂಧಪಟ್ಟ ಕಂಟ್ರ್ಯಾಕ್ಟರುಗಳಿಗೆ ಮೊದಲು ಏನು ಆಸ್ತಿ ಇತ್ತು, ಈಗ ಯಾವ ಮಟ್ಟದಲ್ಲಿದ್ದಾರೆ ಎಂದು ನೋಡಿದ್ದೇವೆ. ಅವರಿಗೆ ಇಷ್ಟು ಆಸ್ತಿ ಎಲ್ಲಿಂದ ಬಂತು ? ಕೆಲವು ಅಧಿಕಾರಿಗಳಿದ್ದಾರೆ. ಅವರುಗಳು ಯಾರೇ ಇರಲಿ ಅವರ ಆಸ್ತಿ ಪಾಸ್ತಿಗಳೇನು ಎಂದು ತನಿಖೆ ಮಾಡಬೇಕು. ಅನೇಕ ಜನ ಮಾಜಿ ಮಂತ್ರಿಗಳಿಗೆ ಅವರ ಸಂಬಂಧಿಕರ ಹೆಸರಿನಲ್ಲಿ ದುಡ್ಡು ಕೊಟ್ಟಿರುವುದಕ್ಕೆ ಚೀಟಿಗಳಿವೆ ಎಂದು ಹೇಳುತ್ತಾರೆ. .ಇದನ್ನೆಲ್ಲ ವಿಚಾರಣೆ ನಡೆಸಬೇಕು, ಮತ್ತು ಸಂಬಂಧಪಟ್ಟವರನ್ನು ಬಲಿ ಹೊಡೆಯಬೇಕು. ತಪ್ಪಿತಸ್ಥರು ಯಾರೇ ಆಗಿರಲಿ ಹೆದರದೆ ಅವರ ಆಸ್ತಿ ಪಾಸ್ತಿಗಳೇನಿವೆ ಎಂದು ವಿಚಾರಿಸಿ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕು. ಇನ್ನು ಹೆಚ್ಚಿಗೆ ಮಾತನಾಡಲು ಅವಕಾಶವಿಲ್ಲ. ದಯವಿಟ್ಟು ನಾನು ಕೊಟ್ಟಂಥ ಕಾರಣಗಳ ಬಗ್ಗೆ ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕು ಅಥವಾ ಒಂದು ವಿಚಾರಣಾ ಸಮಿತಿಯನ್ನಾದರೂ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಹತ್ತು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಶರಾವತಿ ವಿಷಯದಲ್ಲಿ ಅನೇಕರು ಮಾತನಾಡಿದ್ದಾರೆ. ಈ ಸಭೆಯಲ್ಲಿ ತಾಂತ್ರಿಕ ವಿವರಗಳ ಬಗ್ಗೆ ಯಾವ ವಿಷಯವನ್ನೂ ಮಾತನಾಡುವುದಕ್ಕೆ ಅವಕಾಶವಿಲ್ಲ. ನಮಗೆ ಕೊಟ್ಟಿರುವ ಶ್ವೇತ ಪತ್ರ ಒಂದು ಕಾಕ್ ಅಂಡ್ ಬುಲ್ ಸ್ಟೋರಿ ಇದ್ದ ಹಾಗೆ ಇದೆ. ಹಿಂದಿನ ಸರ್ಕಾರದವರು ಕೊಟ್ಟಿದ್ದ ವರದಿಯೂ ಸಹ ಅದೇ ರೀತಿಯಲ್ಲಿದೆ. ಈ ವಿಷಯದಲ್ಲಿ ಈ ಸರ್ಕಾರವನ್ನು ದೂಷಿಸುತ್ತ ಇಲ್ಲ, ಹಿಂದೆ ಇದ್ದ ಸರ್ಕಾರವೂ ಕೂಡ ಇದರಲ್ಲಿ ಭಾಗಿಯಾಗಿದೆ. ಜನತೆಯ ಮನಸ್ಸಿನಲ್ಲಿ ಏನು ಭಾವನೆಯುಂಟಾಗಿದೆ, ಜನ ಏಕೆ ಕೂಗಿಕೊಂಡರು ಎಂದರೆ ಶರಾವತಿಗೆ ಹೋದ ಕಂಟ್ರ್ಯಾಕ್ಟರುಗಳು, ಅಧಿಕಾರಿಗಳು, ಅಲ್ಲಿ ಕೆಲಸ ಮಾಡತಕ್ಕ ಕೂಲಿಗಳು ಇರತಕ್ಕ ಮಟ್ಟದಲ್ಲಿ ಶ್ರೀಮಂತರೂ ಇಲ್ಲ. ಕೆಲವರು ಏನೂ ಗತಿ ಇಲ್ಲದೆ ಇದ್ದವರು ಅಲ್ಲಿಗೆ ಹೋಗಿ ಧನಿಕರಾಗಿ ಬಂದು ಆಗರ್ಭ ಶ್ರೀಮಂತರು ಕೂಡ ಅವರನ್ನು ನೋಡಿ ಅಸೂಯೆ ಪಡುವಂತಾಗಿದೆ. ಶರಾವತಿಗೆ ಹೋದವರು ಈ ರೀತಿ ದೊಡ್ಡ ಮನುಷ್ಯರಾಗುತ್ತಿರುವುದರಿಂದ ಅಲ್ಲಿ ಏನೋ ಅನ್ಯಾಯ ನಡೆಯುತ್ತಿದೆ ಎಂದು ಜನಗಳು ದೇಶಾದ್ಯಂತ ಕೂಗುತ್ತಿದ್ದಾರೆ. ಅದರ ಫಲವಾಗಿ ನಾವು ಬಂದು ತಮ್ಮನ್ನು ಬಾಧಿಸಬೇಕಾಗಿದೆ. ಈ ವಿಷಯದಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಮಾಡಬೇಕು. ಒಂದು ವಿಚಾರಣೆಯನ್ನು ಮಾಡುವುದರಿಂದ ಸರ್ಕಾರದವರದು ಏನೂ ತಪ್ಪಿಲ್ಲ, ಸರ್ಕಾರ ನಿರ್ದೋಷಿಯಾಗಿದೆ ಎನ್ನುವ ಒಂದು ತೀರ್ಮಾನಕ್ಕೆ ಜನಗಳು ಬರಲಿ ಎನ್ನುವ ಉದ್ದೇಶದಿಂದ ನಾವು ವಿಚಾರಣೆ ಮಾಡಬೇಕೆಂದು ಕೇಳುತ್ತಿದ್ದೇವೆ. ಇದರಲ್ಲಿ ನ್ಯಾಯಾಂಗ ವಿಚಾರಣೆ ಮಾಡುವುದರಿಂದ ಏನೂ ತೊಂದರೆಯಾಗುವುದಿಲ್ಲ. ಸರ್ಕಾರ ನಿರ್ದೋಷಿ ಎನ್ನುವುದನ್ನು ಜನತೆಗೆ ತೋರಿಸಬೇಕು. ಸರ್ಕಾರವನ್ನು ಡಿಫೆಂಡ್ ಮಾಡತಕ್ಕ ರೀತಿಯಲ್ಲಿ ಶ್ರೀ ಗಾಂಜಿ ವೀರಪ್ಪನವರು ಹೇಳಿದರು. ಉತ್ಪ್ರೇಕ್ಷೆ ಮಾಡಿ ಸುಮ್ಮನೆ ಸರ್ಕಾರದವರನ್ನು ದೂಷಿಸಬೇಕೆಂದು ಶರಾವತಿ ವಿಷಯದಲ್ಲಿ ಮಾತನಾಡುತ್ತಿಲ್ಲ. ಶರಾವತಿಗೆ ಹೋದವರು ಎಲ್ಲ ಲಾಭ ಮಾಡುತ್ತಿದ್ದಾರೆ, ದುಡ್ಡಿಗೆ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಕೆಲಸವನ್ನು ಮಾಡುತ್ತಿಲ್ಲ, ದೇಶದ ಅಭಿವೃದ್ಧಿಯಾಗತಕ್ಕ ಕೆಲಸಗಳನ್ನು ಮಾಡುತ್ತಿಲ್ಲ ಎಂದು ರುತ್ತಿದ್ದಾರೆ. ಆದುದರಿಂದ ನ್ಯಾಯಾಂಗ ವಿಚಾರಣೆ ಯಾಗಲಿ ಎಂದು ಒತ್ತಾಯ ಮಾಡುತ್ತಿದ್ದೇವೆ.

ಶರಾವತಿ ಯೋಜನೆಯನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ 1954 ರಲ್ಲಿಯೇ ಅಂದಾಜುಗಳು ತಯಾರಾಗಿದ್ದುವು. ಸರ್ಕಾರ ಆ ಬಗ್ಗೆ ಒಂದು (Book let) ಪುಸ್ತಕವನ್ನು ಹೊರಡಿಸಿದ್ದಾರೆ. ಅದರಲ್ಲಿ ಪೂರ್ಣವಾದ ವಿವರಗಳನ್ನು ಕೊಟ್ಟಿದ್ದಾರೆ. ಭೂಗರ್ಭ ಶಾಸ್ತ್ರ ಇಲಾಖೆಯವರು ಆ ಪ್ರದೇಶದಲ್ಲಿ ಸರ್ವೆ ಕಾರ್ಯವನ್ನು ನಡೆಸಿದ್ದಾರೆ. ಸಾಯಿಲ್ ಟೆಸ್ಟ್ ಕೂಡ ಮಾಡಿದ್ದಾರೆ. ಆ ಪುಸ್ತಕದಲ್ಲಿ ಡಾ. ಕೆ. ಎಲ್. ರಾವ್ ಅವರು ಒಂದು ವಿಷಯವನ್ನು ಹೇಳಿದ್ದಾರೆ.

> "The Sharavati Project is perhaps the best Hydro-Electric Project in the country undertaken so far and in the national interests must be pushed up with utmost speed. The Civil Engineering work will involve practically no foreign exchange. The latter will be required only for the Electrical Machinery and Penstocks, for which supply of steel will even be sufficient as fabrication can be done at the work site as in the case of Mahatma Gandhi Works. As the Dams will be constructed of lime-surki, the consumption of scarce materials like cement is also small. The absence of handicaps as above indicates that the scheme may be assigned high priority."

ಅದರಲ್ಲಿ ಹೇಳಿರುವುದು ಒಂದು, ಈಗ ಆಗುತ್ತಿರುವುದು ಮತ್ತೊಂದು. ಸುರ್ಕಿ ಮಾರ್ಟರನ್ನು ಉಪಯೋಗಿಸಬೇಕೆಂದು ತಜ್ಞರ ಅಭಿಪ್ರಾಯವಿರುವಾಗ ಅದರ ಆಧಾರದ ಮೇಲೆ ಕೆಲಸಗಳನ್ನು ಮಾಡಿಸಲಿಲ್ಲ. ನಮ್ಮ ಸ್ನೇಹಿತರು ಕೆಲವರು ಹೇಳಿದ ಹಾಗೆ ಕಂಟ್ರಾಕ್ಟರುಗಳ ಬಲೆಗೆ ಬಿದ್ದಿದ್ದಾರೆ. ಯಾವ ಕೆಲಸವನ್ನು ಷುರು ಮಾಡಬೇಕಾದರೂ ಕೂಡ ಕಂಟ್ರಾಕ್ಟರುಗಳು ಇಡೀ ದೇಶದ ಸ್ವತ್ತನ್ನು ತಮ್ಮ ಸ್ವತ್ತಾಗಿ ತಿಳಿದುಕೊಂಡು ಯಾವರೀತಿ ತಮಗೆ ಅನುಕೂಲವಾಗಬೇಕೋ ಆ ರೀತಿ ಕೆಲಸ ಮಾಡಿ ಸರ್ಕಾರವನ್ನು ಮಿಸಲೀಡ್ ಮಾಡಿ, ಈ ತರಹ ಕೆಲಸ ಮಾಡಬೇಕು ಎಂದು ತೋರಿಸಿ ಅವರಿಗೆ ಲಾಭ ಬರತಕ್ಕ ಕೆಲಸಗಳನ್ನು ದೇಶದ ಹಿತದೃಷ್ಟಿಯನ್ನು ಮರೆತು ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ.

ಮೊಟ್ಟ ಮೊದಲು ತಯಾರಾದ ಅಂದಾಜು 1954 ರಲ್ಲಿ 22.97 ಕೋಟಿ ರೂಪಾಯಿಗಳು ದ್ದಾಗಿತ್ತು. ಆಗ ಡಿಸೈನ್-ಪ್ಲಾನ್ ಎಲ್ಲವನ್ನೂ ತಯಾರು ಮಾಡಲಾಗಿತ್ತು. ಅದರ ಪ್ರಕಾರ ಮಣ್ಣಿನ ಕಟ್ಟೆಯನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದರು. ಅದಕ್ಕೆ ಭೂಗರ್ಭ ಶಾಸ್ತ್ರಜ್ಞರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

> "From the examination of the plan of the dam line and the position of the bore-holes sunk, it is seen that the above bore-holes cover almost the entire section. The main rock.........of the area is a medium to coarse granitic gneiss with patches of basic inclusions and runs of pegmatite traversing the main mass. The rock is generally fresh and hard both near the surface and at depths and is, therefore, quite suitable for founding the dam".

ಹೀಗೆ ಎಲ್ಲ ಪರೀಕ್ಷೆಗಳನ್ನೂ ಮಾಡಿ ಮಣ್ಣಿನ ಕಟ್ಟೆಯನ್ನು ಹಾಕಬೇಕೆಂದು ತೀರ್ಮಾನ ಮಾಡಿದರು. ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಕಾರಣವಿಲ್ಲದೆ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಅಂದಾಜುಗಳು ಪುನರ್ವಿಮರ್ಶೆಯಾಗಬೇಕು ಎಂದು ಅದನ್ನು ಪುನರ್ವಿಮರ್ಶೆ ಮಾಡಿದ್ದಾರೆ.

> "As a result of all these changes, which were effected in consultation with the Central Water and Power Commission

> and under expert advise, the estimates for the first stage of the Project had to be changed to Rs. 3,965.38 lakhs ".

ಎಂದು ಹೇಳಿದ್ದಾರೆ. ಇದರಿಂದ 22.97 ಕೋಟಿ ರೂಪಾಯಿಗಳಿಗೆ ಅಂದಾಜಾಗಿದ್ದುದನ್ನು 33.65 ಕೋಟಿ ರೂಪಾಯಿಗಳಿಗೆ ಬದಲಾವಣೆ ಮಾಡುವುದಕ್ಕೆ ಕಾರಣ ಕೊಟ್ಟಿದ್ದಾರೆ. ಮೊದಲು ಮಣ್ಣಿನಿಂದ ಕಟ್ಟೆಯನ್ನು ಕಟ್ಟಬೇಕೆಂದು ಮಾಡಿ ಆನಂತರ ಮೇಸನರಿ ಡ್ಯಾಂ ಕಟ್ಟಬೇಕೆಂದು ಬದಲಾವಣೆ ಮಾಡುವುದಕ್ಕೆ ಕಾರಣವೇನು ? ಪುನಃ ಇದನ್ನು ಅರ್ದನ್ ಡ್ಯಾಂ ಮಾಡಬೇಕೆಂದು ತಿರುಗಿಸಿದರು. ಮೊದಲು ಮಣ್ಣಿನ ಕೆಲಸಕ್ಕೆ 40 ರೂಪಾಯಿಗಳ ಪ್ರಕಾರ ದರವನ್ನು ಅಂದಾಜಿನಲ್ಲಿ ಹಾಕಿದ್ದರು.

> " For instance the rate for earth work in all soils including lead and lift, etc., which was Rs. 40 per 1,000 c.ft. in the original estimate is now working out to Rs. 120 on an average on piece-work system."

ಎಂದು ಅವರೇ ಹೇಳಿದ್ದಾರೆ. ಅಂದಾಜನ್ನು 40 ರೂಪಾಯಿಗಳಿಗೆ ಮಾಡಿ ಪೀಸ್ ವರ್ಕ್‌ನಲ್ಲಿ 120 ರೂಪಾಯಿ ಮಾಡಿದ್ದಾರೆ. ಮೇಸನರಿ ಡ್ಯಾಂ ಕಟ್ಟಬೇಕೆಂದು ಮಾಡಿ ಅದರ ಬಗ್ಗೆ ತಾರಾಪೂರ್ ಅಂಡ್ ಕಂಪನಿಯವರೊಡನೆ ಸರ್ಕಾರದವರು ಅರ್ಬಿಟ್ರೇಷನ್ ಮಾಡಿಕೊಂಡು 240 ರೂಪಾಯಿಗೆ ತೀರ್ಮಾನ ಕೊಟ್ಟಿದ್ದಕ್ಕೆ ಮತ್ತೂ 35 ರೂಪಾಯಿ ಜಾಸ್ತಿ ಕೊಟ್ಟು ಒಟ್ಟು 275 ರೂಪಾಯಿ ರೇಟಿಗೆ ತಂದಿದ್ದಾರೆ. ಅದನ್ನು ತಾವು ಮಾಡಿದ್ದಲ್ಲ, ಹಿಂದಿನ ಸರ್ಕಾರ ಮಾಡಿದ್ದು ಇದನ್ನು ತಾವು ಆಲೋಚನೆ ಮಾಡಬೇಕು. ತಜ್ಞರ ಸಮಿತಿಯವರು 40 ರೂಪಾಯಿಗಳಿಗೆ ಅಂದಾಜು ಮಾಡಿದ್ದನ್ನು ಅರ್ತವರ್ಕ್‌ಗೆ 275 ರೂಪಾಯಿಗೆ ಏರಿಸಿಕೊಟ್ಟಿರತಕ್ಕ ಕಾಲದಲ್ಲಿ ದೇಶದ ಜನತೆ ಶರಾವತಿಯಲ್ಲಿ ಅನ್ಯಾಯವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದರಲ್ಲಿ ತಾರಾಪೂರ್ ಅಂಡ್ ಕಂಪನಿಯವರದು ಫಿಷಿ ಡೀಲ್ ಆಗಿದೆ. ಮೇಸನರಿ ಡ್ಯಾಂ ಬದಲಾಯಿಸಿ ಕಟ್ಟುವುದಕ್ಕೆ ತಾರಾಪೂರ್ ಅಂಡ್ ಕಂಪನಿಯವರಿಗೇ ಅವಕಾಶ ಕೊಟ್ಟಿದ್ದಾರೆ. ಆ ಮೇಲೆ ಆರ್ಬಿಟ್ರೇಷನ್ ಮಾಡುವುದಕ್ಕೂ ಬಿಡುತ್ತಾರೆ. ಏಕೆ ಈ ತರಹ ಮಾಡಬೇಕು ? ಇದನ್ನು ಎಚ್. ಇ. ಸಿ. ಪಿ. ಬೋರ್ಡಿನವರ ತೀರ್ಮಾನಕ್ಕೆ ಬಿಟ್ಟು ಅವರ ಅಭಿಪ್ರಾಯವನ್ನು ತೆಗೆದುಕೊಂಡು ಕೊಟ್ಟಿಲ್ಲ. ಇವರೇ ಒಂದು ರೇಟ್ ನಿಗದಿ ಮಾಡಿ ಇವರೇ ಅದನ್ನು ಹೆಚ್ಚಿಸುವುದಕ್ಕೆ ಏಕೆ ಅವಕಾಶ ಮಾಡಬೇಕು ? ರೇಟ್ ನಿಗದಿ ಮಾಡದೆ ಕೆಲಸವನ್ನು ಕೊಡುತ್ತಾರೆ. ಇದರಿಂದ ದೇಶದ ಹಣ ಬಹಳ ಅಪವ್ಯಯವಾಗುತ್ತದೆ. ಇದೇರೀತಿ ರಾಕ್ ಫಿಲ್ಲಿಂಗಿಗೂ ನಡೆದಿದೆ. ರಾಕ್‌ಫಿಲ್‌ನಲ್ಲಿ ಕೂಡ ಏನೋ ಸಂದೇಹಾಸ್ಪದವಾದ ವ್ಯವಹಾರ—ಫಿಷೀ ಡೀಲ್ ನಡೆದಿದೆ. ಟೆಂಡರ್ ಕರೆದಾಗ ಆ ಕಂಟ್ರಾಕ್ಟರು ನಲವತ್ತು ರೂಪಾಯಿ ರೇಟನ್ನು ಕೊಟ್ಟಿದ್ದಾರೆ. ಇದೇನೂ ಅನ್‌ವರ್ಕಬಲ್ ಅಲ್ಲ. ಬೇರೆ ಕಡೆ ಇಂತಹ ಕೆಲಸ ಹತ್ತು ರೂಪಾಯಿ ಹೆಚ್ಚು ಕಡಿಮೆ ನಡೆದಿದೆ. ಎಚ್ ಇ ಸಿ ಪಿ ಬೋರ್ಡಿನವರು ಹೇಳಿದ್ದಾರೆ ಕಂಟ್ರಾಕ್ಟ್ ಒಪ್ಪಂದದಲ್ಲಿ:

> " Mention may be made here that almost in every case, there was very keen competition.
>
> It is also pertinent to point out that not a single instance has the Board recommended or the Government accepted any but the lowest offer."

11-30 A.M.

ಎಂದು ಇದಕ್ಕೆ ಸರಕಾರ ಹೇಳಿದ್ದಾರೆ. ಅವರು ಹೆಚ್ಚು ರೇಟನ್ನು ಕೊಟ್ಟು ಮೂರು ಜನರಿಗೆ ಹಂಚಿ ಕೊಟ್ಟಿದ್ದಾರೆ. ರಾಮಯ್ಯನವರು ಟೆಂಡರನ್ನು ನಲವತ್ತು ರೂಪಾಯಿ ಪ್ರಕಾರ ಒಪ್ಪಲಿಲ್ಲ. ಶಂಕರ ನಾರಾಯಣ್ ಕಂಪನಿಯವರು ನೂರು ರೂಪಾಯಿ ರೇಟನ್ನು ಕೊಟ್ಟಿದ್ದರು. ಹೀಗಿದ್ದರೂ ಕೂಡ ಹೆಚ್ಚಿನ ರೇಟು ಕೊಟ್ಟು ಮೂರು ಜನರಿಗೆ ಏಕೆ ಹಂಚಿದರು ? ಅಲ್ಲದೆ ಮೂವತ್ತು ಲಕ್ಷ ರೂಪಾಯಿ ಅಡ್ವಾನ್ಸ್ ಏಕೆ ಕೊಟ್ಟರು ? ಸರಕಾರ ಹೀಗೆ ಕಂಟ್ರಾಕ್ಟರುಗಳಿಗೆ ಧನ ಸಹಾಯವನ್ನೂ ಕೊಡುತ್ತದೆ. ನೀವು ಕೆಲಸ ಮಾಡಿ ಎಂದು ಹೇಳಿದ್ದರೆ, ಮೂರಲ್ಲ ಮುನ್ನೂರು ಟೆಂಡರುಗಳು ಬರುತ್ತಿದ್ದವು. ಅತ್ಯಂತ ಕಡಮೆ ರೇಟಿನ ಟೆಂಡರನ್ನು ಬಿಟ್ಟು ತಮ್ಮವರಿಗೆ ಹೆಚ್ಚು ರೇಟನ್ನು ಕೊಟ್ಟರು ಎಂದು ಸಂದೇಹಪಡುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಒಂದು ವಿಷಯ ವನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರು ಜನರಲ್ಲಿ ಒಂದು ತಪ್ಪು ಭಾವನೆ ಬರುವಂತೆ ಹೇಳುತ್ತಿದ್ದಾರೆ. ರಾಮಯ್ಯನವರು ಟೆಂಡರಿಲ್ಲದಿದ್ದರೆ ಶಂಕರನಾರಾಯಣ್ ಕಂಪೆನಿಯವರ ಟೆಂಡರನ್ನು ಏಕೆ ಒಪ್ಪಲಿಲ್ಲ ಎಂದು ಕೇಳುತ್ತಿದ್ದಾರೆ. ರಾಕ್‌ಫಿಲ್ ಒಂದರ ವಿಚಾರವನ್ನು ಮಾತ್ರ ತೆಗೆದುಕೊಂಡು ಹೀಗೆ ಹೇಳುತ್ತಿದ್ದಾರೆ, ಆದರೆ ಇದರ ಜೊತೆಗೆ ಬೇರೆಬೇರೆ ಕೆಲಸಗಳೂ ಇವೆ. ಮೊದಲನೆಯ ಟೆಂಡರ್ ಇಪ್ಪತ್ತಾರು ಲಕ್ಷ ಇಪ್ಪತ್ತಾರು ಸಾವಿರದ ಇನ್ನೂರ ನಲವತ್ತು ರೂಪಾಯಿ, ಅದಕ್ಕಿಂತ ಕಡಮೆಯದು ಶಂಕರನಾರಾಯಣ್ ಕಂಪನಿಯವರು ಎರಡು ಕೋಟಿ ಅರವತ್ತೊಂದು ಲಕ್ಷ ಎಂಬತ್ತೊಮ್ಬರು ಸಾವಿರದ ಆರುನೂರ ಐವತ್ತೊಮ್ಬರು ರೂಪಾಯಿಗೆ. ನಾವು ನೆಗೋಷಿಯೇಟ್ ಮಾಡಿದ್ದು ಅತ್ಯಂತ ಕಡಮೆ ರೇಟಿಗೆ.

"It is the lowest rate as compared to the rates quoted by all the seven contractors. According to the Hon'ble Member, even the next lowest man is the lowest man according to negotiated rate."

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಶಂಕರನಾರಾಯಣ್ ಕಂಪೆನಿಯಲ್ಲದೆ ಬೇರೆಯವರಿಗೇಕೆ ಕೊಡಲಿಲ್ಲ ?

"Whether the tender documents were received in time and properly filled as required."

ನಲವತ್ತು ರೂಪಾಯಿ ನಾನು ಕೊಟ್ಟದ್ದು ತಪ್ಪು ಎಂದು ಅತ ಟೆಲಿಗ್ರಾಮ್ ಕೊಟ್ಟರೆ ಅದಕ್ಕೆ ಸರಕಾರ ಒಪ್ಪಿದ್ದಾರೆ.

"Whether the tenderers are registered contractors or have applied for registration, whether they have deposited the necessary earnest money or furnished the standard security.

Whether they possess the requisite experience for execuiting the work tendered for and whether they have the necessary equipment, tools, and plant, technical personnel and financial resources."

ಎಂದಿದೆ. ಇದನ್ನು ಹೇಗೆ ಒಪ್ಪಿದರು ಮತ್ತು ಮೂವತ್ತು ಲಕ್ಷ ರೂಪಾಯಿ ಏಕೆ ಅಡ್ವಾನ್ಸ್ ಕೊಟ್ಟರು ?

ಶ್ರೀ ವೀರೇಂದ್ರ ಪಾಟೀಲ್.—ಟೆಂಡರ್ ಷರತ್ತಿನಲ್ಲಿ ನಮೂದು ಮಾಡಿದ್ದೆವು, ನಿಮಗೆ ಯಾವುದಾದರೂ ಹೊಸ ಯಂತ್ರೋಪಕರಣಗಳು ಬೇಕಾದರೆ ಅದನ್ನು ಒದಗಿಸುತ್ತೇವೆ ಎಂದು ಹೇಳಿದ್ದೇವೆ. ಇದು ಟೆಂಡರಿನ ಒಂದು ಷರತ್ತು. ಹೀಗಿದ್ದರೂ ಕೂಡ ಮಾನ್ಯ ಸದಸ್ಯರು ತಮಗೆ ಅನುಕೂಲವಾಗುವ ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ತಾವು ಕೊಟ್ಟಿರುವ ಟೆಂಡರಿನ ಷರತ್ತುಗಳ ವಿಷಯ ನೋಡಿದರೆ ಎಲ್ಲರಿಗೂ ಗೊಂದಲವುಂಟಾಗುತ್ತದೆ. ಮೊದಲು ಅಂದಾಜು ಮಾಡಿದುದು ಇಪ್ಪತ್ತೆರಡು ಕೋಟಿ ರೂಪಾಯಿಗೆ, ನಂತರ ಮೂವತ್ತೊಂದು ಕೋಟಿ ರೂಪಾಯಿಗೆ ಆಮೇಲೆ ಅದು ಮೂವತ್ತೊಂಬತ್ತು ಕೋಟಿ ರೂಪಾಯಿ ಆಯಿತು.

"It is not comprehensive it is misleading, it is confusive remarks."

Sri VEERENDRA PATIL.—Originally we had prepared an estimate for each unit having a generating capacity of 71,000 KW. Afterwards that capacity was changed to 89,100 KW. When the capacity of the Project is changed naturally we have to change the design of the dam...

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಎಂಬತ್ತೊಂಬತ್ತು ಸಾವಿರದ-ಒಂದು ನೂರು ರೂಪಾಯಿ ಕಿಲೋವ್ಯಾಟ್ಸ್ ಎಂದಿದೆ. ಮೊದಲ ಅಂದಾಜಿನಲ್ಲಿ 22.97 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಇವರು ಮೂವತ್ತೊಂಬತ್ತು ಕೋಟಿ ಎಂದು ಹೇಳುತ್ತಾರೆ, ಮತ್ತೆ ಮೂವತ್ತೊಂದು ಕೋಟಿ ಎಂದು ಹೇಳುತ್ತಾರೆ. ನಮಗೆ ಸಂದೇಹ ಬಂದಿದೆ. ಮೊದಲ ಅಂದಾಜಿನಲ್ಲಿ ಬೇರೆ ಬೇರೆ ಕೆಲಸ ಗಳಿವೆ; ಸಿವಿಲ್ ಕಾಮಗಾರಿಗಳಲ್ಲದೆ ಬೇರೆ ಬೇರೆ ಕೆಲಸಗಳೂ ಇವೆ. ಹೈಡ್ರಾಲಿಕ್ ಮತ್ತು ಸಿವಿಲ್ ಇಂಜಿನಿಯರಿಂಗ್ ಕೆಲಸಗಳು ಟ್ರಾನ್ಸ್‌ಮಿಷನ್ಸ್ ಲೈನ್ಸ್, ರಿಸೀವಿಂಗ್ ಸ್ಟೇಷನ್ಸ್, ಮಿಸಲೇನಿಯಸ್ ಕೆಲಸಗಳೆಲ್ಲವೂ ಇವೆ. ಇಲ್ಲಿ ಸಿವಿಲ್ ಇಂಜಿನಿಯರಿಂಗ್ ಕೆಲಸಗಳನ್ನು ಮಾತ್ರ ಕೊಟ್ಟಿದ್ದಾರೆ. ಮಿಕ್ಕುದುದರ ವಿಷಯವೆಲ್ಲವೂ ಜನರಿಗೆ ಗೊತ್ತಾಗ ಬೇಡವೆ ! ಈ ಶ್ವೇತಪತ್ರದಲ್ಲಿ ಕಂಟ್ರಾಕ್ಟರುಗಳೆಷ್ಟು ಜನ, ಯಾರು ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ, ಎಷ್ಟೆಷ್ಟು ಕೆಲಸ ಮಾಡಿದ್ದಾರೆ, ಟೆಂಡರ್ ರೇಟು ಎಷ್ಟೆಷ್ಟು, ಯಾರ್‍ಯಾರಿಗೆ ಎಷ್ಟೆಷ್ಟು ಹಣವನ್ನು ಅಡ್ವಾನ್ಸ್ ಕೊಟ್ಟಿದ್ದೀರಿ ಇದೆಲ್ಲವನ್ನೂ ಇದರಲ್ಲಿ ತೋರಿಸಿದ್ದರೆ ಚೆನ್ನಾಗಿತ್ತು. ಹಾಗೆ ಕೊಟ್ಟಿಲ್ಲದಿರುವುದರಿಂದ ಜನತೆಯ ಮುಂದೆ ನಿಜವಾದ ಚಿತ್ರವನ್ನಿಟ್ಟಿಲ್ಲ. ನಾನು ಕೇಳಿಕೊಳ್ಳುವುದಿಷ್ಟೆ : ಸರಕಾರ ಜನರ ಮುಂದೆ ನೈಜವಾದ ಪೂರ್ಣ ಚಿತ್ರವನ್ನಿಡಬೇಕು. ಅವರು ಕೊಟ್ಟಿರುವ ರೇಟು ಬಹಳ ಹೆಚ್ಚು. ಮೊದಲು ನಲವತ್ತು ರೂಪಾಯಿ ಇದ್ದುದು ಕೊನೆಗೆ ಇನ್ನೂರ ಎಪ್ಪತ್ತೈದು ರೂಪಾಯಿ ಕೊಟ್ಟಿ ದ್ದಾರೆ. ಇದನ್ನು ನೋಡಿದರೆ ಯಾರಿಗಾದರೂ ಅನುಮಾನ ಉಂಟಾಗುತ್ತದೆ. ಅಲ್ಲದೆ ಟೆಂಡರ್ ಮೂಲಕ ಕೊಟ್ಟಿಲ್ಲ, ನೆಗೋಸಿಯೇಷನ್ ಮೇಲೆ ಕೊಟ್ಟಿದ್ದಾರೆ. ಮೊದಲೇ ಗೊತ್ತು ಮಾಡದೆ, ಹಾಗೆಯೇ ಕೆಲಸ ಮಾಡಲು ಅವರಿಗೆ ಕೊಟ್ಟುದಲ್ಲದೆ ಎಚ್ ಇ ಸಿ ಪಿ ಮೀಟಿಂಗ್ ಮುಂದೆ ಹಾಕಿ ನಂತರ ಕೊಟ್ಟಿದ್ದಾರೆ. 1962 ನೆಯ ಇಸವಿಯಲ್ಲಿ ಎರಡು ಬಾರಿ ಮೀಟಿಂಗ್‌ಗಳನ್ನು ಮುಂದೂಡಿ, ನೆಗೋಸಿಯೇಷನ್ ಮೇಲೆ ರೇಟನ್ನು ಗೊತ್ತು ಮಾಡಿರುವುದರಿಂದ ಅನುಮಾನ ಬರುತ್ತದೆ. ಅದೇ ರೀತಿ ರಾಕ್ ಫಿಲಿಂಗ್‌ಕ್ಕೆ 40 ರೂಪಾಯಿ ಇದ್ದುದು 120 ರೂಪಾಯಿ ರೇಟ್ ಮಾಡಿದೆ. ಸ್ಟೋನ್ ಮೇಸನರಿಗೆ ನೂರಕ್ಕೆ ನೂರರಷ್ಟು ಜಾಸ್ತಿಯಾಗಿದೆ. ಸೀಮೆಂಟ್ ಕೆಲಸದಲ್ಲಿ 1:6 ಪ್ರಮಾಣ ಇದೆಯೋ ಎಂಬ ಅನುಮಾನವಿಲ್ಲವೇ ! ಸೀಮೆಂಟ್ ಕಾಂಕ್ರೀಟ್ ಕೆಲಸಕ್ಕೆ 100 ಸೀ.ಎಫ್.ಟಿ.ಗೆ 100 ರೂಪಾಯಿ ಇರುವುದು 600 ರೂಪಾಯಿ ಕೊಟ್ಟಿದ್ದೀರಿ. ಇದರಿಂದ ಜನಗಳಿಗೆ ಅನುಮಾನ ಬರುವುದಿಲ್ಲವೇ ? ಇಂಥ ಅನುಮಾನ ಪರಿಹಾರವಾಗುವುದಕ್ಕೆ ಜ್ಯುಡೀಶಿಯಲ್ ಎನ್‌ಕ್ವಾಯರಿ ಮಾಡ ಬೇಕು. ತಾವು ನಿರ್ದೋಷಿಗಳಾಗಿದ್ದೀರಿ. ತಮ್ಮ ಮೇಲೆ ನಿಜವಾಗಿಯೂ ಯಾವ ಆರೋಪವಿಲ್ಲ. ಹಾಗಾದರೆ ಜ್ಯುಡೀಶಿಯಲ್ ಎನ್‌ಕ್ವಾಯರಿ ಮಾಡುವುದಕ್ಕೆ ತಾವು ಏತಕ್ಕೆ ಹಿಂಜರಿಯುತ್ತೀರಿ? ಇದರಿಂದ ಅಂಥ ಅನಾಹುತ ಏನು ಆಗುತ್ತದೆ ? ದಯವಿಟ್ಟು ಜ್ಯುಡಿಶಿಯಲ್ ಎನ್‌ಕ್ವಯರಿ ಮಾಡ ಬೇಕೆಂದು ಮತ್ತೊಮ್ಮೆ ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಶರಾವತಿ ಯೋಜನೆಯ ಬಗ್ಗೆ ಪ್ರಕಟಪಡಿಸಿದ ಶ್ವೇತ ಪತ್ರದ ಮೇಲೆ ಚರ್ಚೆ ನಡೆಯಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದು ಸೂಕ್ತ ಎಂದು ನಾನು ತಿಳಿದುಕೊಂಡು ಅವರು ಕೇಳಿದ್ದು ಸರಿಯಾಗಿದೆ ಎಂದು ಚರ್ಚೆಗೆ ಅವಕಾಶ ಮಾಡಿಕೊಡಲಾಯಿತು. ಈಗ ಎರಡು ದಿವಸ ಈ ವಿಷಯದ ಮೇಲೆ ಚರ್ಚೆಯಾಯಿತು. ಈ ಶರಾವತಿ ವಿಚಾರದಲ್ಲಿ ಸುಮಾರು ಒಂದು ಒಂದೂವರೆ ವರ್ಷಗಳ ಹಿಂದೆ ಒಂದೇ ಸಮನೆ ಪುಕಾರು ಎದ್ದಿತು. ಈ ಯೋಜನೆ ಕೆಲಸ ಪ್ರಾರಂಭವಾದ ಮೇಲೆ 1959ರಲ್ಲಿ ಇದರಲ್ಲಿ ಮಹಾ ಪ್ರಮಾದವಾಗಿದೆ ಎಂದು ಪುಕಾರು ಎದ್ದಿತು. ಯಾವ ಸಂದರ್ಭದಲ್ಲಿ ಇಂಥ ದೊಡ್ಡ ಕಂಟ್ರಾಕ್ಟ್ ಕೊಡಬೇಕಾಯಿತು ಎಂಬುದನ್ನು ಹೇಳಿದ್ದಾರೆ. ಅದಕ್ಕೂ ಮುಂಚೆ ಶರಾವತಿ ಯೋಜನೆಯ ಬಗ್ಗೆ ಇರತಕ್ಕ ಒಂದು ಹಿನ್ನೆಲೆ ಏನಿದೆ ಅದನ್ನು ಕೊಡ ಬೇಕಾದುದು ಅವಶ್ಯಕ. ಕೇಂದ್ರ ಸರಕಾರದವರು ರಾಜ್ಯ ಸರಕಾರದವರು ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿಯಾಗಬೇಕು ಎನ್ನುವ ಒಂದು ವಿಶಾಲ ದೃಷ್ಟಿಯಿಂದ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ವಿದ್ಯುತ್‌ಚ್ಛಕ್ತಿ ಉತ್ಪಾದನೆಯಾಗಬೇಕು ಎಂಬ ಧೋರಣೆ ಇಟ್ಟುಕೊಂಡಿದೆ. ಈ ಆಶೆ ಎಲ್ಲರಿಗೂ ಇದೆ. ಈ ದೃಷ್ಟಿಯಿಂದ ಹೆಚ್ಚು ವಿದ್ಯುತ್‌ಚ್ಛಕ್ತಿ ಉತ್ಪಾದನೆ ಮಾಡುವ ವಿಷಯದಲ್ಲಿ ಬೇರೆ ರಾಜ್ಯ ಗಳು ಬಹಳ ಮುಂದುವರಿವೆ. ಅವರು ನಮ್ಮನ್ನು ಮೀರಿಸಿದ್ದಾರೆ. ನಮ್ಮಲ್ಲಿ ಸಾಕಷ್ಟು ನದಿ ಗಳ ಅನುಕೂಲತೆ ಇದ್ದರೂ ಕೂಡ ಇದುವರೆಗೆ ಹೆಚ್ಚಾಗಿ ಉಪಯೋಗಿಸಿಕೊಂಡಿಲ್ಲ. ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ಪವರ್ ಹೌಸ್ ಒಂದು ಮಾತ್ರ ಇದೆ. ಅಲ್ಲಿ ಇನ್ನೊಂದು ಇಂಥ ಪ್ರಾಜೆಕ್ಟ್ ಆಗಬೇಕು ಎನ್ನುವ ಹತ್ತು ಹದಿನೈದು ವರ್ಷಗಳ ನಮ್ಮ ಆಶೆ ನೆರವೇರುವ ಕಾಲ ಈಗ ಬಂದಿದೆ. ಇದಕ್ಕೆ ನಾವು ಸಂತೋಷ ಪಡಬೇಕು. ಈ ಸಂದರ್ಭದಲ್ಲಿ ಅದೆಷ್ಟು ಜಾಗ್ರತೆ ನಮ್ಮಲ್ಲಿ ಇಂಥ ಯೋಜನೆಯಾಗಬೇಕು ಎಂದು ಕೇಂದ್ರ ಸರಕಾರದ ಎಂಜಿನಿಯರುಗಳೊಡನೆ ನಮ್ಮ ಎಂಜಿ ನಿಯರುಗಳು ಸೇರಿಕೊಂಡು ಕೆಲಸ ಮಾಡಿದ್ದಾರೆ. ಪ್ರಾರಂಭದಲ್ಲಿ ಈ ಯೋಜನೆ ತಯಾರು ಮಾಡು ವುದಕ್ಕೆ ಅರಣ್ಯ ಪ್ರದೇಶದಲ್ಲಿ ಹೋಗಿ ಪರಿಶೀಲನೆ ಮಾಡುವುದಕ್ಕೆ ಹೆಚ್ಚಾಗಿ ಕಷ್ಟಪಟ್ಟು ಯೋಗ್ಯ

(ಶ್ರೀ ಎಸ್. ನಿಜಲಿಂಗಪ್ಪ)

ಸ್ಥಳ ಹುಡುಕಿ ಕೊಟ್ಟಿರತಕ್ಕಂಥ ಎಂಜಿನಿಯರುಗಳನ್ನು ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಎಂಜಿನಿಯರುಗಳು ಹತ್ತಾರು ವರ್ಷ ಕಾಡಿನಲ್ಲಿ ಹೆಚ್ಚಾಗಿ ಕಷ್ಟ ಪಟ್ಟಿದ್ದಾರೆ. ಯೋಗ್ಯ ಸ್ಥಳ ಹುಡುಕುವಾಗ್ಗೆ ಕಾಡಿನಲ್ಲಿ ಆನೆಯ ಭಯಕ್ಕೆ ಕೂಡ ಸಿಕ್ಕಿದ್ದಾರೆ. ಶರಾವತಿ ಯೋಜನೆಗೆ ಯೋಗ್ಯ ಸ್ಥಳ ಹುಡುಕಿ ಕೊಟ್ಟಿದ್ದಾರೆ. ಕಂಟ್ರಾಕ್ಟರರಿಗೋಸ್ಕರ ಈ ಸ್ಥಳ ತೆಗೆದುಕೊಳ್ಳಲಾಗಿದೆ ಎಂದು ತಪ್ಪು ಅಭಿಪ್ರಾಯ ಬರತಕ್ಕಂಥ ರೀತಿಯಲ್ಲಿ ಶ್ರೀ ಕೇಶವ ಮೂರ್ತಿಯವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಹೇಳಿದರು. ಕಡಿಮೆ ತಿಳುವಳಿಕೆಯಿದ್ದವರು ಯಾವ ರೀತಿ ಮಾತನಾಡುತ್ತಾರೋ ಆ ರೀತಿ ಮಾತನಾಡಿದ್ದಾರೆ. ಸಾಕಷ್ಟು ತಿಳುವಳಿಕೆ ಇದ್ದು ಪ್ರತಿನಿಧಿಗಳಾಗಿದ್ದು ಜವಾಬ್ದಾರಿ ವಹಿಸಿಕೊಂಡಿರತಕ್ಕಂಥ ಜನ ಆ ರೀತಿ ಮಾತನಾಡುವುದು ಸರಿಯಲ್ಲ. ಈ ಯೋಜನೆ ಮಾಡಿರುವುದು ಕಂಟ್ರಾಕ್ಟರರ ಸಲುವಾಗಿ ಅಲ್ಲ. ಈ ಯೋಜನೆಯ ಕೆಲಸಕ್ಕೆ ಕಂಟ್ರಾಕ್ಟರರು ಯಾರು ದೊರೆಯುತ್ತಾರೆ ಎಂಬುದು ಗೊತ್ತಿರಲಿಲ್ಲ. ಈ ಯೋಜನೆ ಕಂಡು ಹಿಡಿದು ಇದೇ ಸ್ಥಳ ಇರಬೇಕೆಂದು ಹುಡುಕಿಕೊಟ್ಟವರು ನಮ್ಮ ಎಂಜಿನಿಯರುಗಳು. ಈ ಕೆಲಸ ಅವರು ಮಾಡಿದ್ದಾರೆ. ಕಂಟ್ರಾಕ್ಟರರು ಈ ಕೆಲಸ ಮಾಡಿಲ್ಲ. ಈ ಯೋಜನೆಯ ಕೆಲಸ ಆದಷ್ಟು ಜಾಗ್ರತೆ ಮಾಡಬೇಕು ಎಂಬ ಉದ್ದೇಶದಿಂದ ಅವಸರವಾಗಿ ಅಲ್ಲಿ ಕೆಲಸ ನಡೆದಿದೆ. ಇದು ಒಪ್ಪತಕ್ಕ ಮಾತು. ಆದಷ್ಟು ಜಾಗ್ರತೆ ಈ ಕೆಲಸ ಪ್ರಾರಂಭವಾದರೆ ಸಾಕು ಎಂಬ ದೃಷ್ಟಿಯಿಂದ ಪ್ರಾರಂಭದಲ್ಲಿ ಅವಸರದಿಂದ ಕೆಲಸಗಳು ನಡೆದವು. ಇದರಲ್ಲಿ ತಪ್ಪು ಕಂಡು ಹಿಡಿಯುತ್ತಾ ಹೋಗುವುದು ಸರಿಯಲ್ಲ. ಈ ಯೋಜನೆಯ ಕೆಲಸ ಪ್ರಾರಂಭವಾಯಿತಲ್ಲಾ ಎಂದು ಸಮಾಧಾನ ಒಂದು ತೃಪ್ತಿ ನಮಗೆ ಇರಬೇಕು. ಅಂಥ ತೃಪ್ತಿ ನನಗೆ ಇದೆ. ಈ ಅವಸರ ನಾವು ನಿಂತುಕೊಂಡು ಮಾಡಿದ್ದಲ್ಲ. ಇದರಲ್ಲಿ ನಮ್ಮ ಎಂಜಿನಿಯರುಗಳು ಇದ್ದಾರೆ ಕೇಂದ್ರ ಸರಕಾರದ ಸಿ.ಪಿ.ಡಬ್ಲ್ಯು. ಇಂಜಿನಿಯರ್ಸ್ ಇದ್ದಾರೆ. ಇಂಥ ದೊಡ್ಡ ಯೋಜನೆ ಕಾರ್ಯಗತ ಮಾಡಲು ನಮ್ಮ ಎಂಜಿನಿಯರುಗಳಿಗೆ ಕೇಂದ್ರ ಸರಕಾರದ ಎಂಜಿನಿಯರುಗಳು ಸಹಾಯ ಮಾಡುತ್ತಾ ಇದ್ದಾರೆ. ಅವರ ಸಲಹೆ ತೆಗೆದುಕೊಳ್ಳುತ್ತಾ ಇದ್ದೇವೆ. ಈ ಯೋಜನೆಯ ಕೆಲಸ ಇಬ್ಬರೂ ಸೇರಿ ಮಾಡಿದ್ದಾರೆ. ಮೊದಲು ಅರ್ಥ್ ಡ್ಯಾಂ ಮಾಡಬೇಕು ಎಂದು ಇದ್ದಿತು. ಅರ್ಥ್ ಡ್ಯಾಂ ಸರಿ ಹೋದೀತು ಎಂದು ಭಾವಿಸಲಾಗಿತ್ತು. ಪುನಃ ಆಲೋಚನೆ ಮಾಡಿ ಸ್ಥಳಕ್ಕೆ ಹೋಗಿನೋಡಲು ಅರ್ಥ್ ಡ್ಯಾಂ ಸರಿಹೋಗುವುದಿಲ್ಲ ಬಹಳ ತಡವಾಗುತ್ತದೆ ಮತ್ತು ಅದಕ್ಕೆ ಬೇಕಾಗುವ ಯೋಗ್ಯ ಮಣ್ಣು ಸಿಕ್ಕುವುದಿಲ್ಲ ಎಂದು ಯೋಚನೆ ಮಾಡಿ ಮೇಸನರಿ ಡ್ಯಾಂ ಹಾಕಿತು. ಈ ಬದಲಾವಣೆಯಿಂದ ಖರ್ಚು ಜಾಸ್ತಿಯಾಗುತ್ತದೆ. ಆದರೆ ಎಂಜಿನಿಯರು ಮತ್ತು ತಜ್ಞರ ಸಲಹೆ ಪ್ರಕಾರ ಸಾಕಷ್ಟು ಯೋಗ್ಯ ಮಣ್ಣು ಡ್ಯಾಂ ರಚನೆಗೆ ಸಿಕ್ಕುವುದಿಲ್ಲ. ಆದುದರಿಂದ ಮೇಸನರಿ ಡ್ಯಾಂ ಮಾಡಬೇಕು ಎಂದು ತೀರ್ಮಾನ ಮಾಡಲಾಯಿತು. ಇದನ್ನು ತೀರ್ಮಾನ ಮಾಡುವುದಕ್ಕೆ ಮುಂಚೆ ಅನೇಕ ಕಡೆ ಬೋರ್ ಮಾಡಿ ಸಾಕಷ್ಟು ಮಣ್ಣು ಪರೀಕ್ಷೆ ಮಾಡಿ ಎಂಜಿನಿಯರು ತಜ್ಞರು ವಿಚಾರ ಮಾಡಿದರು. ಮೂರರಲ್ಲಿ ಎರಡು ಭಾಗ ಕಟ್ಟಡ ಮೇಸನರಿ ಭಾಗವಾಗಿದೆ. ಅರ್ಥ್ ಡ್ಯಾಂ ಮಾಡುವ ಸ್ಥಳದಲ್ಲಿ ಜಾಗ ಸರಿಯಾಗಿಲ್ಲ 80 ಅಡಿ ಆಳ ಹೋಗಬೇಕಾಗುತ್ತದೆ, ಅಷ್ಟು ಫೌಂಡೇಶನ್ ಹಾಕುವುದಕ್ಕಾಗುವುದಿಲ್ಲ. ಜಾಗ ಮೋಸದ್ದು ಆಗಿದೆ ಎಂದು ಕೆಲಸ ಮಾಡುವಾಗ್ಗೆ ಗೊತ್ತಾಯಿತು. ಆದುದರಿಂದ ಅಲ್ಲಿಯೂ ಕೂಡ ಮೇಸನರಿ ಡ್ಯಾಂ ಮಾಡಿದರೆ ಭದ್ರವಾಗಿ ಇರುತ್ತದೆ ಎಂದು ಮೇಸನರಿ ಡ್ಯಾಂ ಮಾಡಬೇಕೆಂದು ಪುನಃ ತೀರ್ಮಾನ ಮಾಡಬೇಕಾಯಿತು. ಆದುದರಿಂದ 4,5,6ನೇ ಭಾಗದಲ್ಲಿ ಅರ್ಥ್ ಡ್ಯಾಂ ಮಾಡಬೇಕೆಂಬ ತೀರ್ಮಾನ ವ್ಯತ್ಯಾಸವಾಯಿತು. ಈ ಯೋಜನೆಯಲ್ಲಿ ಬಂದಿರತಕ್ಕಂಥ ಕಷ್ಟ ಅರ್ಥ್ ಡ್ಯಾಂನಲ್ಲಿ 25 ಕೋಟಿ ಅಂದಾಜು ಇದ್ದುದು 39 ಕೋಟಿಯಾದುದು ನಿಜ. ಇದಕ್ಕೆ ಕಾರಣ ಇದೆ. ಇದನ್ನು ಮಾಡುವಾಗ್ಗೆ ಕಂಟ್ರಾಕ್ಟರರನ್ನು ಇಟ್ಟುಕೊಂಡು ಮಾಡಿಲ್ಲ. ಈ ಯೋಜನೆಯ ಕೆಲಸ ತ್ವರಿತವಾಗಿ ಆಗಬೇಕು ಇದು ಅತ್ಯಗತ್ಯ ಮತ್ತು ಅವಶ್ಯಕವಾದ ಯೋಜನೆ. ಮೈಸೂರಿನ ಅಭಿವೃದ್ಧಿಯಾಗಬೇಕು, ನಮ್ಮ ಮೈಸೂರು ರಾಜ್ಯದ ಭವಿಷ್ಯ ಚೆನ್ನಾಗಿ ಆಗಬೇಕಾದರೆ ಇಂಥ ದೊಡ್ಡ ಯೋಜನೆ ಆಗಬೇಕು. ಇದನ್ನು ಹಿಂದುಸ್ತಾನದಲ್ಲಿಯೇ ದೊಡ್ಡದಾದ ಯೋಜನೆಯನ್ನಾಗಿ ಮಾಡಬೇಕು ಎಂಬ ಉದ್ದೇಶದಿಂದ ಅವಸರ ಮಾಡಿದರು. ಆದರೆ ಸ್ಥಳದ ಮಹಾತ್ಮೆಯಿಂದ ಈ ಸಂದರ್ಭದಲ್ಲಿ ಅಲ್ಲಿ ಯೋಗ್ಯ ಫೌಂಡೇಶನ್ ಸಿಕ್ಕಲಿಲ್ಲ. ಆದುದರಿಂದ ಬದಲಾವಣೆ ಮಾಡಬೇಕಾಯಿತು. ಅದನ್ನು ಕಟ್ಟಬೇಕಾದರೆ ಅರ್ಥ್‌ಡ್ಯಾಂ ಆಗುವುದಿಲ್ಲ ಮೇಸನರಿ ಡ್ಯಾಂ ಮಾಡಬೇಕು ಎಂದು ತೀರ್ಮಾನ ಮಾಡಬೇಕಾಯಿತು. ಈ ತೀರ್ಮಾನವನ್ನು ಯಾವ ಕಂಟ್ರಾಕ್ಟರರನ್ನು ಕೇಳಿ ಮಾಡಲಿಲ್ಲ. ಪರಿಸ್ಥಿತಿ ನೋಡಿಕೊಂಡು ಮಾಡಿದೆ. ಕಂಟ್ರಾಕ್ಟರರನ್ನು ಇಟ್ಟುಕೊಂಡು ಯಾರೂ ಇಂಥ ಕೆಲಸ ಮಾಡುವುದಿಲ್ಲ. ಇಂಥ ದೊಡ್ಡ ಯೋಜನೆ ಜಾಗ್ರತೆ ಮಾಡಬೇಕು ಎಂದು ಮನಸ್ಸಿನಲ್ಲಿ ಇಟ್ಟುಕೊಂಡು ಆತುರತೆಯಿಂದ ಕೆಲಸ ಮಾಡಿದೆ. ಆದುದರಿಂದ ಮೇಸನರಿ ಡ್ಯಾಂ

ಕಟ್ಟಬೇಕು ಅಂದರೆ ಫೌಂಡೇಶನ್ ಸಿಕ್ಕಲಿಲ್ಲ. ಅರ್ಥ್ ಡ್ಯಾಂ ಸ್ವಲ್ಪ ಭಾಗ ಆಯಿತ್ತು ಪೂರ್ತಿಯಾಗಲಿಲ್ಲ. ಇದನ್ನು 1959ರಲ್ಲಿ ಸರಕಾರ ಒಂದು ಹೇಳಿಕೆ ಕೊಟ್ಟು ಸ್ಪಷ್ಟಪಡಿಸಿದೆ. ಸಣ್ಣ ಸಣ್ಣ ಕಂಟ್ರಾಕ್ಟರರಿಂದ ಈ ಯೋಜನೆಯು ಕೆಲಸವಾಗುವುದಿಲ್ಲ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಬೇಕಾಗುತ್ತಾರೆ ಏಕೆಂದರೆ ಜಾಗ್ರತೆ ಕೆಲಸವಾಗಬೇಕಾಗಿತ್ತು. ದೊಡ್ಡ ಕಂಟ್ರಾಕ್ಟರರಿಗೆ ಸಾಕಷ್ಟು ಅನುಕೂಲತೆ ಇರುತ್ತದೆ, ಮೆಷಿನರಿ ಅನುಕೂಲತೆ ಇರುತ್ತದೆ ಅಲ್ಲದೆ ಸ್ವಲ್ಪ ಮಟ್ಟಿಗೆ ಹಣದ ಅನುಕೂಲತೆ ಶಕ್ತಿ ಅನುಭವ ಇರುತ್ತದೆ. ಅವರ ಶಕ್ತಿ ಅನುಭವ ಇಟ್ಟುಕೊಂಡು ಅವರನ್ನು ಚುನಾಯಿಸಿದೆ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಇಂಥ ದೊಡ್ಡ ಯೋಜನೆ ಕೆಲಸದಲ್ಲಿ ಅವರಿಗೆ ಸಾಲ ಕೊಡಬೇಕಾಗುತ್ತದೆ. ಅನುಕೂಲ ಮಾಡಿ ಕೊಡಬೇಕಾತ್ತದೆ. ಮಾನ್ಯ ಶಿವಪ್ಪನವರಿಗೆ ಇದು ಗೊತ್ತಿದೆ. ಅವರು ಒಂದು ಇಂಡಸ್ಟ್ರೀ ಪ್ರಾರಂಭ ಮಾಡಬೇಕಾದರೆ ಮೈಸೂರು ಬ್ಯಾಂಕಿನಿಂದ ಹಣ ಸಾಲ ತರುತ್ತಾರೆ. ಅವರು ಹಣ ಸಾಲ ತಂದರು ಎಂದು ಅವರು ಢಡೂತಿ ಆಸಾಮಿ ಅಲ್ಲಾ ಎಂದು ಹೇಳುವುದಕ್ಕಾಗುವುದಿಲ್ಲ. ಇಂಥ ಕೆಲಸ ಸಾಲ ತೆಗೆದುಕೊಂಡು ಮಾಡಬೇಕಾಗುತ್ತದೆ. ಆದುದರಿಂದ ಇದಕ್ಕೆ ದೊಡ್ಡ ಕಂಟ್ರಾಕ್ಟರರು ಒಪ್ಪಿಕೊಂಡು ಬಂದಿದ್ದಾರೆ. ಇದು ಸರಿಯೋ ತಪ್ಪೊ, ಅದು ಬೇರೆ ವಿಚಾರ. ಸದುದ್ದೇಶದಿಂದ ಆದಷ್ಟು ಜಾಗ್ರತೆ ಕೆಲಸವಾಗಲಿ ಅಂತ ಮಾಡಿದ್ದಾರೆ. ಕಂಟ್ರಾಕ್ಟರುಗಳಿಗೋಸ್ಕರ ಮಾಡಿದ್ದಾರೆ ಅಂತ ಹೇಳುವುದರಲ್ಲಿ ಅರ್ಥವಿಲ್ಲ. ಕಂಟ್ರಾಕ್ಟರುಗಳು ಬಂದದ್ದು ಅನಂತರ. ಟೆಂಡರು ಬಂದದ್ದರಲ್ಲಿ ಚುನಾಯಿಸಿ ಕೊಟ್ಟಿದ್ದಾರೆ. ಅದು ಎಲ್ಲಾ ಸರಿಯಾಗಿದೆ. ಹೀಗೆ ಮಾಡತಕ್ಕಂಥ ಕಾಲದಲ್ಲಿ ಆರ್ಬಿಟ್ರೇಶನ್ ಕ್ಲಾಜ್ ಹಾಕಿದ್ದಾರೆ, ಸ್ವಲ್ಪಮಟ್ಟಿಗೆ ಇದರಿಂದ ತೊಂದರೆಯಾಗಿದೆ ಅನ್ನುವುದನ್ನು ಒಪ್ಪಿಕೊಳ್ಳಬೇಕು. ಆರ್ಬಿಟ್ರೇಶನ್ ಕ್ಲಾಜನ್ನು ದುರುದ್ದೇಶ ಇಟ್ಟುಕೊಂಡು ಹಾಕಿದರು ಅಂತ ಹೇಳುವುದಕ್ಕಾಗುವುದಿಲ್ಲ. ಈ ಆರ್ಬಿಟ್ರೇಶನ್ ಕ್ಲಾಜು ಎಲ್ಲಾ ಕಾಂಟ್ರಾಕ್ಟುಗಳಲ್ಲಿಯೂ ಇರುತ್ತದೆ. ಇಂಟರ್‌ನ್ಯಾಶನಲ್ ಕಾಂಟ್ರಾಕ್ಟುಗಳಲ್ಲಿಯೂ ಇರುತ್ತದೆ; ಇದು ಗೊತ್ತಿದ್ದ ವಿಷಯ. ಆದರೆ ಅದಕ್ಕೆ ಇಲ್ಲಿ ಮೊದಲು ಪ್ರಾಮುಖ್ಯತೆ ಕೊಡುತ್ತಾ ಇದ್ದೇವೆ. ಈ ಆರ್ಬಿಟ್ರೇಷನ್ ಕ್ಲಾಸಿನಲ್ಲಿ ಏನಿದೆಯೆಂದರೆ: ಸ್ಥಳದಲ್ಲಿರತಕ್ಕಂಥ ಸ್ಪೆಷಲ್ ಇಂಜನಿಯರುಗಳಿಗೂ, ಎಕ್ಸಿಕ್ಯೂಟೀವ್ ಇಂಜನಿಯರುಗಳಿಗೂ (ಅಥವ ಸರಕಾರ) ಮತ್ತು ಕಂಟ್ರಾಕ್ಟರುಗಳಿಗೂ, ಮಾಡತಕ್ಕಂಥ ಕೆಲಸದಲ್ಲಿ, ದರದಲ್ಲಿ ವ್ಯತ್ಯಾಸ ಬಂದರೆ, ಭಿನ್ನಾಭಿಪ್ರಾಯ ಬಂದರೆ ಯಾವ ಪಕ್ಷವಾದರೂ ಆರ್ಬಿಟ್ರೇಶನ್ನಿಗೆ ರೆಫರ್ ಮಾಡಬಹುದು. ಮತ್ತು ಎರಡು ಪಕ್ಷಗಳೂ ಒಬ್ಬೊಬ್ಬ ಪಂಚಾಯತಿದಾರರನ್ನು ನೇಮಕ ಮಾಡಬಹುದು. ಇಬ್ಬರೂ ಬೇರೆಯವರೊಬ್ಬರನ್ನು ಅಂಪೈರನ್ನು ನೇಮಕ ಮಾಡಿಕೊಳ್ಳುತ್ತಾರೆ. ಆರ್ಬಿಟ್ರೇಶನ್ನಿಗೆ ಯಾರಾದರೂ ಒಬ್ಬರು ನೋಟೀಸು ಕೊಟ್ಟಮೇಲೆ, ಮತ್ತೊಬ್ಬ ಪಾರ್ಟಿಯವರು 15 ದಿವಸಗಳೊಳಗೆ ಒಪ್ಪದೆಹೋದರೆ ಏಕಪಕ್ಷೀಯ ತೀರ್ಮಾನ ಮಾಡಬಹುದೆಂದಿದೆ. ಇದರಿಂದ ನಮಗೆ ಸ್ವಲ್ಪ ಅನಾನುಕೂಲವಾಗಿದೆ ಅಂತ ಹೇಳಬೇಕು. ಆರ್ಬಿಟ್ರೇಶನ್ನಿಗೆ ಯಾರು ಹೋದರೂ ಅನ್ಯಾಯವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಕಂಟ್ರಾಕ್ಟರುಗಳು ನಮ್ಮ ಕೈಯಲ್ಲಿಲ್ಲದೆ, ಅವರ ಮೇಲೆ ಸರಕಾರಕ್ಕೆ ಹತೋಟಿ ಇಲ್ಲದೆ, ಸರಕಾರಕ್ಕೇ ತೀರ್ಮಾನ ತೆಗೆದುಕೊಳ್ಳುವ ಅವಕಾಶವಿಲ್ಲದೆ, ವಿಷಯಗಳನ್ನು ಆರ್ಬಿಟ್ರೇಶನ್ನಿಗೆ ವಹಿಸಬೇಕಾಗಿಬಂತು. ಈಗ ಅನುಮಾನ ಬಂದಿರುವುದು ಅರ್ತ್‌ನ್ ಡ್ಯಾಮ್ ಮಾಡಬೇಕು ಎಂದು ತೀರ್ಮಾನ ಮಾಡಿದ ಮೇಲೆ. ಯೋಗ್ಯವಾದ ಮಣ್ಣು ಹತ್ತಿರ ಸಿಗುವುದಿಲ್ಲವೆಂದು '1-2-3-4 ಮೈಲಿ ದೂರದವರೆಗೆ ಹೋಗಿ, ಗುಡ್ಡಗಳನ್ನು ತೋಡಿದ್ದಾರೆ. ಅಲ್ಲಲ್ಲಿ ಇಂಪರ್ವಿಯಸ್, ಸೆಮಿ ಇಂಪರ್ವಿಯಸ್ ಏನು ಇರುತ್ತದೆ ಅಲ್ಲಲ್ಲೇ ಹೋಗಬೇಕಾಗುತ್ತದೆ. ಬಹಳ ದೂರದವರೆಗೆ ಹೋಗಿ ಕಷ್ಟಪಟ್ಟು ಗಟ್ಟಿ ಮಣ್ಣನ್ನು ತಂದು ಅಣೆಯನ್ನು ಕಟ್ಟಿದ್ದಾರೆ. ಇದು ಸರಿಯಾಗಿ ನಡೆದಿಲ್ಲ ಅಂತ ಹೇಳಿ ಒಂದು ಪುಕಾರು ಇದೆ. ಒಂದು ಸಂತೋಷದ ಮಾತು. ಈಗ 15 ದಿವಸದಿಂದ ಮಳೆ ಸಾಕಷ್ಟು ಬಂದಿದೆ. ಸ್ಪಿಲ್‌ವೇವರೆಗೂ ನೀರು ಬಂದಿದೆ; ನಮಗೆ 3-4 ಟರ್‌ಬೈನ್ಸ್ ಫೀಡ್ ಮಾಡುವಷ್ಟು ನೀರು ನಿಂತಿದೆ. ಚೆನ್ನಾಗಿ ಕೆಲಸ ನಡೆದಿದೆ. ಯಾರೂ ಏನೇನೂ ಅನುಮಾನಪಡಬೇಕಾಗಿಲ್ಲ. ಶರಾವತಿಯ ದೃಶ್ಯವೂ ಚೆನ್ನಾಗಿದೆ. ಎಲೆಕ್ಟ್ರಿಸಿಟಿಯೂ ಇನ್ನು 2-3 ತಿಂಗಳೊಳಗೆ ಉತ್ಪನ್ನವಾಗಬಹುದು. ಆದ್ದರಿಂದ ಅಲ್ಲಿ ಸಾಕಷ್ಟು ನೀರು ನಿಂತಿದೆ. ಯೋಗ್ಯವಾದ ಕೆಲಸ ನಡೆದಿದೆ. ಎಲೆಕ್ಟ್ರಿಸಿಟಿ ಪ್ರೊಡಕ್ಷನ್, ಜನರೇಟರ್ಸ್, ಪವರ್ ಸ್ಟೇಷನ್, ಯಾವಭಾಗದಲ್ಲೂ ಎಲ್ಲಿಯೂ ಏನೂ ತಕರಾರು ಮಾಡಿಲ್ಲ; ಸರಿಯಾಗಿ ನಡೆಯುತ್ತಿದೆ. ಅಮೇರಿಕ ದೇಶದಿಂದ ಕೆಲವು ಮೆಶಿನರಿಗಳನ್ನು ತರಿಸುತ್ತಾ ಇದ್ದೇವೆ; ಜಪಾನಿನಿಂದ ಕೆಲವು ಮೆಶಿನರಿಗಳನ್ನು ತರಿಸುತ್ತಿದ್ದೇವೆ; ಫ್ರಾನ್ಸಿನಿಂದ ಕೆಲವು ಮೆಶಿನರಿಗಳನ್ನು ತರಿಸುತ್ತಿದ್ದೇವೆ. ಅವುಗಳನ್ನು ತರಿಸುವುದರಲ್ಲಿ ಅನ್ಯಾಯ ಮಾಡುವುದಕ್ಕಾಗುವುದಿಲ್ಲ. ಎಲ್ಲಿಯೂ ತಕರಾರು ಇಲ್ಲ, ತೊಂದರೆ ಇಲ್ಲ. ಮೇಸನ್ರಿ ಡ್ಯಾಮ್ ಬದಲಾಗಿ ಅರ್ತ್‌ನ್ ಡ್ಯಾಮ್ ಕಾರ್ಯ ಶರಾವತಿಯಲ್ಲಿ ಆರಂಭವಾದಾಗಿನಿಂದ ಅನುಮಾನಕ್ಕೆ ಶುರುವಾಯಿತು. ಅನುಮಾನ ಬಂದರೆ ಅದಕ್ಕೆ ಕೊನೆ ಮೊದಲೇ ಇಲ್ಲ. ಅನುಮಾನ

(ಶ್ರೀ ಎಸ್. ನಿಜಲಿಂಗಪ್ಪ)

ಕಡಿಮೆಮಾಡಿಕೊಳ್ಳಬೇಕು ಎಂದು ನಮ್ಮ ಸ್ನೇಹಿತರಿಗೆ ಹೇಳುತ್ತಾ ಇರುತ್ತೇನೆ. ಅನುಮಾನ ಬಹಳ ಮಾಡಿಬಿಟ್ಟರೆ ತೊಂದರೆಯಾಗಬಹುದು ; ಕೆಟ್ಟ ಪರಿಣಾಮವಾಗಬಹುದು. ಅನುಮಾನ ಮಾಡಿದರೆ ಪ್ರಯೋಜನವಾಗುವುದಿಲ್ಲ. ಹಾಗೆ ನೋಡಿದರೆ ಇಲ್ಲಿ ಅನುಮಾನಕ್ಕೆ ಕಾರಣವೇ ಇಲ್ಲ. ಎಲ್ಲಾ ಸೆಕ್ಷನ್ನಿನಲ್ಲಿಯೂ, ಎಲ್ಲಾ ಕಡೆಯೂ, ಎಲ್ಲಾ ಭಾಗದಲ್ಲಿಯೂ ಸುಸೂತ್ರವಾಗಿದೆ. ಮೇಸನ್ರಿ ಡ್ಯಾಮ್ ಬದಲು ಮಣ್ಣಿನ ಕಟ್ಟೆ ಪ್ರಾರಂಭವಾದಾಗಿನಿಂದ ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೇವೆ ಅನ್ನತಕ್ಕಂಥ ಒಂದೊಂದು ವಿಷಯದಲ್ಲಿ ಪುಕಾರು ಇದೆ. ಅವನ್ನು ಹಿಂದಿನ ಸರಕಾರದವರು ಕೊಟ್ಟಿದ್ದಾರೆ. ಈ ಆರ್ಬಿಟ್ರೇಶನ್ ಕ್ಲಾಜು ಸೇರಿಸಿದ್ದರಿಂದ ಸ್ವಲ್ಪ ತೊಂದರೆಯಾಗಿದೆ. ಈ ಅರ್ದನ್ ಡ್ಯಾಮ್ ಬಿಟ್ಟರೆ ಬೇರೆ ಕಡೆ ವಿಷಯದಲ್ಲಿ ಎಲ್ಲಿಯೂ ತೊಂದರೆ ಇಲ್ಲ ; ಏನೂ ತಕರಾರು ಇಲ್ಲ.

ಶ್ರೀ ಎಸ್. ಶಿವಪ್ಪ.—ಅಣೆಯ ಬಾಗಿಲೊಂದು ಕೆಳಗೆಬಿದ್ದು ಹೋದುದ್ದು?

ಶ್ರೀ ಎಸ್. ನಿಜಲಿಂಗಪ್ಪ.—ಇದು ಮುಚ್ಚಬೇಕಾಗಿದ್ದ ಬಾಗಿಲು; ಅದು ಬಿದ್ದುಹೋದ್ದು ಒಳ್ಳೆಯದೇ ಆಯಿತು. ಅರ್ದನ್‌ಡ್ಯಾಂ ಕೆಲಸವನ್ನು ತಾರಾಪುರ್ ಕಂಪೆನಿಗೆ ವಹಿಸಿದೆ. ನಮಗೆ ಬಂದಿರುವ ಕಷ್ಟ ಆರ್ದನ್ ಡ್ಯಾಮ್ನಲ್ಲಿ. ಮಣ್ಣು ಮತ್ತು ಭೂಮಿ ಅಷ್ಟು ಸರಿಯಾಗಿರಲಿಲ್ಲ. ಆದ್ದರಿಂದ ಕಟ್ಟೆಯ ರೂಪುರೇಖೆಗಳನ್ನು ಹಲವು ಸಲ ಬದಲಾವಣೆ ಮಾಡಬೇಕಾಯಿತು. ಮೊದಲು ಇದನ್ನು ತಾರಾಪೂರ್‌ರವರಿಗೆ 60 ರೂಪಾಯಿ ಕೊಟ್ಟಿದ್ದೆವು. ಅದಕ್ಕೆ ಮುಂಚೆ 216 ರೂಪಾಯಿ ಚಿಲ್ಲರೆ ಒಂದು ಯೂನಿಟ್ಟಿಗಿತ್ತು. ಅದಕ್ಕೇ ಬರುವುದು ತಕರಾರು. 200 ರೂಪಾಯಿ ಕೊಡಬೇಕೆಂದು ಸರಕಾರದ ಉದ್ದೇಶವಿತ್ತು. ಕಂಟ್ರಾಕ್ಟರು, ಪೆಟ್ರೋಲುದರ, ಟ್ಯಾಕ್ಸು ಎಲ್ಲಾ ಜಾಸ್ತಿಯಾಗಿದೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದರು. ಅವರಿಂದ ಕೆಲಸ ನಿಲ್ಲಿಸಿಬಿಡುವುದಕ್ಕಾಗುತ್ತಿರಲಿಲ್ಲ. ಏಕೆಂದರೆ 27 ಮತ್ತು 28ನೆ ಸೆಕ್ಷನ್ ಪ್ರಕಾರ ಪ್ರಾರಂಭದಲ್ಲಿ ಯಾವ ಕಂಟ್ರಾಕ್ಟರಿಗೆ ಕೊಟ್ಟಿದ್ದೆವೊ, ಅವರಿಗೇ ಸಬ್‌ಸ್ಟಿಟ್ಯೂಟೆಡ್ ವರ್ಕು ಕೊಡಬೇಕೆಂದಿದೆ. ಆದ್ದರಿಂದ ಆರ್ದನ್ ಡ್ಯಾಮ್ ಕೆಲಸವನ್ನೂ ಅವರಿಗೇ ಕೊಟ್ಟಿದ್ದೇವೆ. ಆದ್ದರಿಂದ ಕೊಟ್ಟದ್ದು ತಪ್ಪು ಅಂತ ಹೇಳುವುದಕ್ಕಾಗುವುದಿಲ್ಲ. 200 ರೂಪಾಯಿ ನ್ಯಾಯವಾದ ರೇಟ್ ಅಂದರೂ, ಅವರು 216 ರೂಪಾಯಿ ಕೊಡಬೇಕೆಂದು ನೋಟೀಸು ಕೊಟ್ಟರು. ಅದು ಆಗುವುದಿಲ್ಲವೆಂದರೂ, ಅಗ್ರಿಮೆಂಟ್ ಪ್ರಕಾರ ಕೆಲಸ ನಿಲ್ಲಿಸುವುದಕ್ಕಾಗುವುದಿಲ್ಲ ; ಕೆಲಸ ನಿಲ್ಲಿಸಕೂಡದು ಅಂತ ವಿಧಿ ಇದೆ. ಇದರೊಳಗೆ ಆರ್ಬಿಟ್ರೇಶನ್ನಿಗೆ ಹೋದರು ; ಆರ್ಬಿಟ್ರೇಶನ್ನಿಗೆ ಹೋದಾಗ 245 ರೂಪಾಯಿ ಮಾಡಿದರು ಆರ್ಬಿಟ್ರೇಟರು. ಅವರೂ ಬಹುಶಃ ಆಲೋಚನೆ ಮಾಡಿ ಮಾಡಿದ್ದಾರೆ ; ಅದು ತಪ್ಪು ಅಂತ ಹೇಳುವುದಕ್ಕಾಗುವುದಿಲ್ಲ. ಇದನ್ನು ಕೆಲವರು ಅನ್ಯಾಯವೆಂದು ತಿಳಿದುಕೊಂಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ನೀವು ನ್ಯಾಯವೆಂತ ಹೇಳುತ್ತೀರ ?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಹೇಳತಕ್ಕಂಥಾದ್ದು ಕಂಟ್ರಾಕ್ಟರ ಪರ, ಸರಕಾರದ ಪರ ಒಬ್ಬೊಬ್ಬ ಆರ್ಬಿಟ್ರೇಟರ್ ಇರುತ್ತಾರೆ; ಅವರ ಮೇಲೆ ಅಂಪೈರ್ ಇರುತ್ತಾರೆ. ಅವರು 245 ರೂಪಾಯಿ ದರ ಗೊತ್ತುಮಾಡಿದರು. ನಾನು ಒಪ್ಪದಿದ್ದಮಾತ್ರಕ್ಕೆ ಜುಡಿಶಿಯಲ್ ಎನ್‌ಕ್ವಯರಿ ಬೇಕೆ ? ಅದು ಆಗುವುದಿಲ್ಲ. ಯಾವಾಗ ಆರ್ಬಿಟ್ರೇಶನ್ನಿಗೆ ಒಪ್ಪಿದ್ದೇವೆಯೊ ಆವಾಗ ಆರ್ಬಿಟ್ರೇಶನ್ ತೀರ್ಮಾನವನ್ನು ಒಪ್ಪತಕ್ಕಂಥಾದ್ದು ನ್ಯಾಯ. ಪಂಚಾಯಿತಿದಾರರಲ್ಲಿ ಅಪ್ರಾಮಾಣಿಕತೆ ಇತ್ತು, ಅವರು ಲಂಚ ತಿಂದು ಆರ್ಬಿಟ್ರೇಟ್ ಮಾಡಿದ್ದಾರೆ ಅಂತ ಯಾರೂ ಹೇಳುವುದಿಲ್ಲ. ಅವರು ಲಂಚ ತಿಂದು ಮಾಡಿದ್ದಾರೆ ಅಂತ ಹೇಳಿದರೆ ವಿಚಾರಣೆ ಮಾಡಬಹುದು. ಅವರ ಮೇಲೆ ಇಲ್ಲಿಯವರೆಗೆ ಯಾವ ಆಕ್ಷೇಪಣೆಯೂ, ಅಪವಾದನೆಯೂ ಬಂದಿಲ್ಲ. ಹಾಗೇನಾದರೂ ಇದ್ದು ಪರೀಕ್ಷೆಮಾಡಬೇಕು ಅಂತ ಹೇಳಿದರೆ, ಅದು ಬೇರೆ ವಿಷಯ. ಆರ್ಬಿಟ್ರೇಷನ್ ತೀರ್ಮಾನವನ್ನು ಒಪ್ಪಿಕೊಳ್ಳಬೇಕೆಂದು ಅನೇಕ ಜಡ್ಜ್‌ಮೆಂಟುಗಳಿವೆ. ಅದರಂತೆ ನಾವು ನಡೆಯತಕ್ಕಂಥಾದ್ದು ನ್ಯಾಯ ಅಂತ ಸಾಕಷ್ಟು ಜಡ್ಜ್‌ಮೆಂಟುಗಳಿವೆ. ಅದು ಬಹುಶಃ ಲಾಯರುಗಳಿಗೆ ಗೊತ್ತಿದೆ.

ಹೀಗೆ 245 ರೂಪಾಯಿ ತೀರ್ಮಾನ ಮಾಡಿದರು ಅದರಂತೆ ಕೊಡಬೇಕಾಗಿ ಬಂತು ಕೊಟ್ಟಿದ್ದೇವೆ. 245 ರೂಪಾಯಿ ಕೊಟ್ಟದ್ದು ತಪ್ಪು ಎಂದರೆ ನಮ್ಮವರೇ ಜಾಸ್ತಿ ಕೊಟ್ಟರೇನೋ ಎಂಬ ಅನುಮಾನ ಮನಸ್ಸಿಗೆ ಬಂದರೆ ಜ್ಯೂಡಿಷಿಯಲ್ ಎನ್‌ಕ್ವೈರಿ ಆದರೂ ಏಕೆ ಮಾಡಬೇಕು ? ಒಂದು ವೇಳೆ ಜ್ಯೂಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದರೆ ಅವರಾದರೂ ಏನು ಮಾಡಬೇಕು ? ಅವರು ಹೇಳುತ್ತಾರೆ......

Sri S. SIVAPPA.—The Government has failed to question them.

12-00 NOON.

Sri S. NIJALINGAPPA.–Government appointed one of the arbitrators and they in turn appointed an umpire. 245 ರೂಪಾಯಿಗಳನ್ನು ಕೊಟ್ಟಿದ್ದಾರೆ ಅದನ್ನು ಸರ್ಕಾರದವರು ಕೊಶ್ಚನ್ ಮಾಡಲಿಲ್ಲ. ಮಾಡಬೇಕಾಗಿತ್ತೋ ಮಾಡಬಾರದಾಗಿತ್ತೊ ಅದನ್ನು ತಗೆದುಕೊಂಡು ಈಗ ಪ್ರಯೋಜನವಿಲ್ಲ. ಏಕೆಂದರೆ ಯಾರ ಮೇಲೂ ಆಕ್ಷೇಪಣೆ ಮಾಡಲಿಲ್ಲ ಏಕೆಂದರೆ ಜಡ್ಜ್‌ಮೆಂಟ್ ಆಫ್ ದಿ ಆರ್ಬಿಟ್ರೇಟರ್ಸ್ ಯೂನಾನಿಮಸ್ ಆಗಿತ್ತು, ಸರ್ಕಾರದವರು ಮತ್ತು ಕಂಟ್ರಾಕ್ಟ್‌ದಾರರ ಕಡೆಯವರು ಸೇರಿಕೊಂಡು, ಒಬ್ಬರನ್ನು ಅಂಪೈರ್ ಆಗಿ ಮಾಡಿಕೊಂಡು ಅವರು ಕೊಟ್ಟಿರತಕ್ಕ ಜಡ್ಜ್‌ಮೆಂಟು ಅದು ಆಗಿರುವುದರಿಂದ ಅದನ್ನು ಕೊಶ್ಚನ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಿಮ್ಮವರೇ ಕೊಟ್ಟಿರುವಾಗ ನೀವೇನು ಹೇಳುತ್ತೀರಿ ಎಂದು ಕೇಳುತ್ತಾರೆ, ಆಗ ನಾವೇನು ಹೇಳುವುದು ? ಆದ್ದರಿಂದ ಆರ್ಬಿಟ್ರೇಷನ್‌ಗೆ ಏಕೆ ಕಳುಹಿಸಿದ್ದನ್ನು ಏನು ಮಾಡಿದಿರಿ ಎಂದು ಇವತ್ತು ಕುಳಿತುಕೊಂಡು ಕೊಶ್ಚನ್ ಮಾಡಬೇಕೆಂದರೆ ಇದರಲ್ಲಿ ಯಾರೂ ತಪ್ಪು ಮಾಡಿದ್ದಿಲ್ಲ. ಆದ್ದರಿಂದ ಇದರಲ್ಲಿ ಜಡ್ಜ್‌ಮೆಂಟ್ ಕೊಡುವುದು ಏನೂ ಇಲ್ಲ. ಡ್ಯಾಂ ಕನ್‌ಸಾಲಿಡೇಷನ್‌ಗೆ 35 ರೂಪಾಯಿ ಕೊಟ್ಟಿದ್ದಾರೆ. ಕಾಂಟ್ರ್ಯಾಕ್ಟ್‌ನಲ್ಲಿ ಡ್ಯಾಂ ಕನ್‌ಸಾಲಿಡೇಷನ್ ವರ್ಕ್ ಇರಲಿಲ್ಲ. ಅದನ್ನು ತೆಗೆದುಕೊಂಡಾಗ್ಯೆ ಸರ್ಕಾರದವರ ಹತ್ತಿರ ಸಾಕಾದಷ್ಟು ಮೆಷಿನರಿ ಇರಲಿಲ್ಲ. ಆದ್ದರಿಂದ ಅವರನ್ನು ಕೇಳಿ ಅವರೊಡನೆ ಮಾತನಾಡಿ ಅವರಿಗೆ ಕೊಟ್ಟಿದ್ದಾರೆ. ಅದನ್ನು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಕೆಲಸ ಆಗಿದೆ. ಮೇಸನರಿ ಡ್ಯಾಂ ಅಂತ ತೀರ್ಮಾನ ಆದಾಗ ಅದರಂತೆ ಕಟ್ಟುತ್ತಾ ಬಂದಾಗ ಅಲ್ಲಿಗೆ ದೂರದಿಂದ ಸಾಮಾನುಗಳನ್ನು ತಂದು ಕಟ್ಟಬೇಕಾಯಿತು ಅದನ್ನು ಕಟ್ಟಿದ್ದರು. ರಾಕ್ ಫಿಲ್ ಬರುತ್ತದೆ, ಸ್ಟೋನ್ ಪಿಚಿಂಗ್ ಮಾಡುತ್ತಾರೆ. ಒಂದೆರಡು ಅಡಿ ಕಲ್ಲು ಹಾಕುತ್ತಾರೆ. ಈ ರೀತಿ ಎಲ್ಲಾ ಕೆಲಸ ಮಾಡುತ್ತಾ ಇದ್ದಾಗ ಏನು ಆಯಿತು ? ಆಗಿಂದಾಗ್ಯೆ ಈ ಕೆಲಸಗಳನ್ನು ಸಿ. ಡಬ್ಲ್ಯೂ. ಪಿ. ಸಿ. ಅವರು ಬಂದು ನೋಡುತ್ತಾರೆ. ಇದಕ್ಕೆ ಹಣ ಅಡ್ವಾನ್ಸ್ ಮಾಡಿರುವವರು ಕೇಂದ್ರ ಸರ್ಕಾರದವರು. ಆದ್ದರಿಂದ ಈ ಬೋರ್ಡ್‌ನಲ್ಲಿ ಅವರ ಪ್ರತಿನಿಧಿಯನ್ನು ಇಟ್ಟುಕೊಂಡಿದ್ದೇವೆ. ಅವರು ಬಂದು ಪ್ರತಿ ಸಲವೂ ನೋಡಿಕೊಂಡು ಹೋಗುತ್ತಾ ಇರುತ್ತಾರೆ. ಬರೀ ಅರ್ದನ್ ಡ್ಯಾಂ ಕಟ್ಟಿದರೆ ಆಗುವುದಿಲ್ಲ. ರಾಕ್ ಟೋ ಒಂದಕ್ಕೆ ಎರಡರಷ್ಟು ಆಗಬೇಕಾಗಿದೆ ಸ್ಯಾಂಡ್ ಅಂಡ್ ಷಿಂಗ್‌ಲೇ ಒಂಭತ್ತು ಸಾವಿರ ಇದ್ದದ್ದು 23 ಸಾವಿರ ಚಿಲ್ಲರೆ ಆಯಿತು; ಸ್ಟೋನ್ ಜೆಲ್ಲಿ ಆರೂವರೆ ಸಾವಿರ ಇದ್ದದ್ದು 15 ಸಾವಿರ ಆಯಿತು, ಪ್ರೊವೈಡಿಂಗ್ ರಾಕ್ ಟೋ 25 ಸಾವಿರ ಇದ್ದದ್ದು 44 ಸಾವಿರ ಆಯಿತು. ಹೆಚ್ಚು ಕಡಿಮೆ ಈ ರೀತಿ ಒಂದಕ್ಕೆ ಎರಡು ಎರಡೂಕಾಲರಷ್ಟು ಜಾಸ್ತಿಯಾಯಿತು. ಅಪ್ ಸ್ಟ್ರೀಂನಲ್ಲೂ ಕೂಡ ಇದೇ ರೀತಿ ಆಯಿತು. ಈ ರೀತಿ ಮಾಡಿದರೆ ಸರಿಯಾಗುವುದಿಲ್ಲ ನೀರು ನಿಲ್ಲುವುದಿಲ್ಲ ಎಂದು ಹೇಳಿ ಅವರು ದೊಡ್ಡದಾಗಿ ರಾಕ್ ಫಿಲ್ ಮಾಡಬೇಕೆಂದು ಹೇಳಿದರು. ಅವರು ಹೇಳಿದ ಕೆಲಸ ಬಹಳ ದೊಡ್ಡ ಕೆಲಸವಾಗುತ್ತದೆ. ಅದನ್ನು ಸ್ವಲ್ಪ ವ್ಯತ್ಯಾಸ ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಕರೆಸ್ಪಾಂಡೆನ್ಸ್ ನಡೆದು ಅವರ ಅಭಿಪ್ರಾಯ, ನಮ್ಮ ಅಭಿಪ್ರಾಯ ತಿಳಿಸಿ ನಮ್ಮ ಇಂಜನಿಯರುಗಳು ಅಲ್ಲಿಗೆ ಹೋಗಿ ಏನು ಮಾತನಾಡಿದರು ಎಂಬುದು ಎಲ್ಲವೂ ಕೂಡ ಈ ವೈಟ್ ಪೇಪರ್‌ನಲ್ಲಿ ಇದೆ. ಇದರಲ್ಲಿ ಏನೂ ಇಲ್ಲ ಎಲ್ಲವೂ ಕನ್‌ಫ್ಯೂಸ್ ಆಗುತ್ತದೆ ಎಂದು ಶ್ರೀಮಾನ್ ಕೇಶವ ಮೂರ್ತಿಗಳು ಹೇಳುವುದು ಏನಿದೆ, ಇದು ಸರಿಯಲ್ಲ ಅವರು ಸ್ವಲ್ಪ ನಿಧಾನವಾಗಿ ಎಲ್ಲವನ್ನೂ ಓದಿದರೆ ಅವರಿಗೇ ಗೊತ್ತಾಗುತ್ತದೆ. ಇದು ಏನು ಆಯಿತು ? ಅಪ್ ಸ್ಟ್ರೀಂ ಮೊದಲು ಕಾಂಟ್ರ್ಯಾಕ್ಟ್‌ನಲ್ಲಿ ಸೇರಿರಲ್ಲಿಲ್ಲ. ಮೊದಲು ಸಣ್ಣ ಕೆಲಸ ಆಗುತ್ತದೆ ಎಂದು ಹೇಳಿ ಸ್ಟೋನ್ ಜೆಲ್ಲಿಗೆ ಆರು ಸಾವಿರ ಆಗಬಹುದು ಎಂದ ಹೇಳಿ ಅಂದಾಜು ಮಾಡಲಾಗಿತ್ತು ಅದರಂತೆ ಪ್ರೊವೈಡ್ ಮಾಡಲಾಗಿತ್ತು. ಪ್ರೊವೈಡಿಂಗ್ ರಿಫ್ ರ್ಯಾಫ್ ರಿವಿಟ್‌ಮೆಂಟ್ ಇದು ಬಹಳ ಮುಖ್ಯವಾಗಿ ಆಗಬೇಕಾದದ್ದು. ಈ ರೀತಿ ಅಲ್ಪ ಸ್ವಲ್ಪ ಮಾಡಿದರೆ ಸಾಕು ಎಂದು ಯೋಚನೆ ಮಾಡಿದ್ದರು. ಕೊನೆಯಲ್ಲಿ ಅವರಿಗೂ ನಮಗೂ ನಡೆದಿರುವ ಪತ್ರವ್ಯವಹಾರ ನೋಡಿದರೆ ಗೊತ್ತಾಗುತ್ತದೆ. 12 ಸಾವಿರ ಸ್ಯಾಂಡ್ ಅಂಡ್ ಷಿಂಗ್‌ಲೇಗೆ ಆಯಿತು—100ಘನ ಅಡಿ—ಸ್ಟೋನ್ ಜೆಲ್ಲಿ ಆರು ಸಾವಿರ ಇದ್ದದ್ದು 47 ಸಾವಿರ ಆಯಿತು ಎಂದರೆ ಒಂದಕ್ಕೆ ಎಂಟರಷ್ಟು ಆಯಿತು. ಪ್ರೊವೈಡಿಂಗ್ ರಿಫ್ ರ್ಯಾಫ್ ಅಂತ ತೆಗೆದುಕೊಂಡರು ಮೊದಲು ಅದು ಇರಲಿಲ್ಲ, ಅದು ಎಷ್ಟಾಯಿತು ಎಂದರೆ ಒಂದು ಲಕ್ಷ 83 ಸಾವಿರ ಆಯಿತು. ರಾಕ್ ಫಿಲ್ ಅಪ್ ಮಾಡುವುದು ಒಂದು ಲಕ್ಷದ 88 ಸಾವಿರ ಆಯಿತು ಎಂದಮೇಲೆ ಒಂದಕ್ಕೆ ಹೆಚ್ಚು ಕಮ್ಮಿ ಆರರಷ್ಟು ಆಯಿತು. ಇದೆಲ್ಲಾ ಕಾಂಟ್ರ್ಯಾಕ್ಟ್‌ನಲ್ಲಿ ಸೇರಿರಲಿಲ್ಲ. ಬರೀ ರಾಕ್ ಟೋ ಮಾತ್ರ ಸೇರಿತ್ತು. ಅದೂ ಕೂಡ ಒಂದಕ್ಕೆ ಎರಡರಷ್ಟು ಹೆಚ್ಚು ಆಯಿತು. ಈ ರೀತಿ ಮೇಸನರಿ ಹೋಗಿ ಅರ್ದನ್ ಡ್ಯಾಂ ಆಯಿತು. ಕೆಲಸ ಎಷ್ಟು ಆಯಿತು ಎಂದರೆ ಎರಡು ಅಡಿ ಇದ್ದದ್ದು ಹೋಗಿ ಸುಮಾರು 200 ಅಡಿ ಅಗಲ, 180

(ಶ್ರೀ ಎಸ್. ನಿಜಲಿಂಗಪ್ಪ)

ಆಡಿ ಎತ್ತರ ಆಯಿತು ಇಷ್ಟೊಂದು ಭಾರಿ ಆದಮೇಲೆ ಅದನ್ನು ವಿಚಾರಮಾಡಬೇಕಾಗಿ, ಬಂತು ಅದು ನಮ್ಮ ಕರ್ತವ್ಯ ನಾವು ಮಾಡಿದೆವು. ಈ ಮಧ್ಯೆ 1962ನೇ ಡಿಸೆಂಬರ್‌ನಲ್ಲಿ ಮುಗಿಸಬೇಕಾದ ಕೆಲಸ ತಡವಾಯಿತು. ಇದನ್ನೆಲ್ಲಾ 1962ನೇ ಇಸವಿ ಮೇ ತಿಂಗಳಿನ ಹೊತ್ತಿಗೆ ತೀರ್ಮಾನ ಮಾ ಬೇಕಾಗಿ ಬಂತು. ಅದಕ್ಕೆ ಮುಂಚೆ ತಾರಾಪುರೆ ಅವರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದೆವು. ಅದನ್ನೆಲ್ಲಾ ಪ್ಯಾರಾ 27—28ರಲ್ಲಿ ಕೊಟ್ಟಿದ್ದೇವೆ. ಇದೆಲ್ಲಾ ಬಹಳ ಜಾಸ್ತಿಯಾಯಿತು ಎಂದು ಹೇಳಿ ಕಂಟ್ರಾಕ್ಟುದಾರರು ಎಂದು ಕಾಣುತ್ತದೆ ನಮ್ಮ ಹೊಳೆನರಸೀಪುರದ ಸದಸ್ಯರು ಶ್ರೀಮಾನ್ ದೇವೇಗೌಡರು ಹೇಳಿದರು. ದೇರ್ ಮಸ್ಟ್ ಬಿ ಲೈಟ್ ಚೇಂಜಸ್ ಅಂತ ಹೇಳಿದರು ಅದೇನೋ ನಿಜ. ಆದರೆ ಇಲ್ಲಿ ಅದು ಒಂದೊಂದೂ ಶೇಕಡ 80 ರಷ್ಟು ಜಾಸ್ತಿಯಾಗಿದೆ. ಇದು ಸ್ವಲ್ಪ ಎಂದು ನಾನು ಹೇಳುವುದಿಲ್ಲ, ಜಾಸ್ತಿ ಆಯಿತು. ಆದರೆ ಅವನು ಬೇಕಾಗಿಲ್ಲ ಎಂದು ಹೇಳಿದ. ವೀ ಕುಡ್ ಹ್ಯಾವ್ ಫೋರ್ಸ್ಡ ಹಿಮ್. ಆದರೆ ಪರಿಣಾಮ ಏನಾಗುತ್ತಾ ಇತ್ತೋ ಗೊತ್ತಿಲ್ಲ. ನೀರು ನಿಲ್ಲತಕ್ಕ ಕಡೆ—ಅಪ್ ಸ್ಟ್ರೀಂ ಏನಿದೆ ಅದಕ್ಕೆ ಕಾಂಟ್ರಾಕ್ಟ್ ಇರಲಿಲ್ಲ. ಮೇಲಿಂದ ಮೇಲೆ ಅದನ್ನು ಸರಿಮಾಡಬೇಕಾಗಿತು. ಅದನ್ನು ಮಾಡುವುದಕ್ಕೆ ಕಾಂಟ್ರಾಕ್ಟ್ ಕೊಡಬೇಕು, ಯಾವ ರೀತಿ ಕೊಡುವುದು? ಅವನಿಗೇ ಕೊಡಬೇಕು ಆಮೇಲೆ ರೇಟನ್ನು ಕೇಳಬೇಕು ಕೇಳಿದಾಗ ಅವನು ಏನು ಹೇಳುತ್ತಾನೆಯೋ ಏನೋ! ಅಂತೂ ಅವನಿಂದ ಬಿಡುಗಡೆ ಮಾಡಿಕೊಂಡೆವು. ಅವನ ಜವಾಬ್ದಾರಿ ಅಲ್ಲಿಗೆ ಮುಗಿದು ಹೋಯಿತು. ಒಂದು ವೇಳೆ ನಾವು ಅವನ ಕೈಯಲ್ಲಿ ಸಿಕ್ಕಿಕೊಂಡು ಅಪ್ ಸ್ಟ್ರೀಂ ಕೆಲಸವನ್ನು ಮಾಡಿಸಬೇಕಾಗಿ ಬಂದಿದ್ದರೆ ಏನಾಗುತ್ತಾ ಇತ್ತೋ ಭಗವಂತನಿಗೇ ಗೊತ್ತು. ಅವನಿಂದ ಬಿಡಿಸಿಕೊಳ್ಳದೇ ಟೆಂಡರ್ ಕರೆಯದೇ ಇದ್ದಿದ್ದರೆ ಯಾವ ರೀತಿ ಆಗುತ್ತಿತ್ತೋ ಹೇಳಲಿಕ್ಕೆ ಬರುವುದಿಲ್ಲ. ಅದೂ ಮಾಡಬೇಕಾಗಿತ್ತು ಇದೂ ಮಾಡಬೇಕಾಗಿತ್ತು ಎಂದು ಆಲ್‌ಟರ್‌ನೇಟೀವ್ಸ್ ಹೇಳುವುದಕ್ಕೆ ಬೇಕಾದಷ್ಟು ಇರುತ್ತದೆ. ಆದರೆ ನಮ್ಮ ಉದ್ದೇಶ ಇದ್ದದ್ದು ಆದಷ್ಟು ಜಾಗ್ರತೆ ಈ ಕೆಲಸ ಆಗಬೇಕು ನಾಳೆ ಆಗುವುದು ಇವತ್ತೇ ಆಗಬೇಕು, ಇವತ್ತು ಆಗುವುದು ಈ ಕ್ಷಣದಲ್ಲೇ ಆಗಬೇಕೆಂಬ ಉದ್ದೇಶದಿಂದ ಇದಕ್ಕೆ ಟೈಂ ಕೊಡುವುದು ಬೇಡ ಎಂದು ಹೇಳಿ ಟೆಂಡರ್ ಕಾಲ್ ಫಾರ್ ಮಾಡಿದೆವು.

ಶ್ರೀ ಎಸ್. ಶಿವಪ್ಪ.—ಡೌನ್ ಸ್ಟ್ರೀಂಗೆ ಟೆಂಡರನ್ನು ಏಕೆ ಕರೆಯಲಿಲ್ಲ?

ಶ್ರೀ ಎಸ್. ನಿಜಲಿಂಗಪ್ಪ.—ವಿಷಯ ಸರಿಯಾಗಿ ತಿಳಿದುಕೊಳ್ಳದೆ ಯಾರೂ ಟೆಂಡರು ಹಾಕುವುದಿಲ್ಲ, ಓದಿ ವಿಷಯ ತಿಳಿದು ಹಾಕುತ್ತಾರೆ. ಸಣ್ಣವರು ಟೆಂಡರು ಹಾಕುವುದಿಲ್ಲ, ಸಾಕಾದಷ್ಟು ಅನುಕೂಲ ಇರುವವರು, ದೊಡ್ಡ ಕಂಟ್ರಾಕ್ಟರುಗಳು ಏಳು ಜನರು ಟೆಂಡರು ಕೊಟ್ಟರು. ಅದರಲ್ಲಿ ಮೂರು ಜನರನ್ನು ಚುನಾಯಿಸಿದ್ದೇವೆ. ಒಬ್ಬರೇ ಎಲ್ಲವನ್ನೂ ಮಾಡಲು ಅದರಲ್ಲಿ ಯಾರೂ ಶಕ್ತರಾಗಿಲ್ಲ ಅಲ್ಲದೆ ಒಬ್ಬೊಬ್ಬರಿಗೇ ವಹಿಸಿದರೆ ಕೆಲಸ ನಿಧಾನವಾಗುತ್ತದೆ. ಅವರ ಕೆಪಾಸಿಟಿಯನ್ನೂ ನೋಡಬೇಕಾಗುತ್ತದೆ. ದೊಡ್ಡವರಿಗೇ ಕೊಡಬೇಕೆಂದಿಲ್ಲ. ಈಗ ಸಾಧಾರಣವಾಗಿ ಏಳು ಜನ 'ಎ' ದರ್ಜೆಯ ಕಂಟ್ರಾಕ್ಟರುಗಳೇ ಮುಂದೆ ಬಂದಿದ್ದಾರೆ. ಅವರು ಗೆಜೆಟ್, ಪತ್ರಿಕೆ ಮುಂತಾದುವುಗಳನ್ನೆಲ್ಲಾ ನೋಡುತ್ತಾ ಇರುತ್ತಾರೆ. ದಕ್ಷತೆ, ಶಕ್ತಿ, ಅನುಕೂಲ ಇರುವವರೇ ಸಾಮಾನ್ಯವಾಗಿ ಟೆಂಡರು ಹಾಕುವುದು. ಹಾಗೆ ಹಾಕಿದವರಲ್ಲಿ ಕಡಮೆ ದರ ಸೂಚಿಸಿದ್ದ ಮೂರು ಜನರನ್ನು ಚುನಾವಣೆ ಮಾಡಿದೆವು. ರಾಮಯ್ಯನವರ ವಿಚಾರದಲ್ಲಿ ವಾದಮಾಡುತ್ತಿದ್ದರು. ಟೆಂಡರ್ ಓಪನ್ ಮಾಡಿದಾಗ ಅವರು ಮೊದಲು 40 ರೂಪಾಯಿ ಹಾಕಿದ್ದೆ, ಅದು ಬಹಳ ಕಡಮೆ, 100 ರೂಪಾಯಿ ಕೊಡಬೇಕು ಎಂದು ಕೇಳಿದರು, ಮತ್ತೆ 115ರೂಪಾಯಿ ಕೊಡಬೇಕೆಂದು ಕೇಳಿದರು. ಆದುದರಿಂದ ಅದನ್ನು ಒಪ್ಪುವುದಕ್ಕಾಗುವುದಿಲ್ಲ, ಇನ್‌ವ್ಯಾಲಿಡ್, ಯಾವ ಮನುಷ್ಯನೇ ಆಗಲಿ ತನ್ನ ಟೆಂಡರಿನಲ್ಲಿ ಹಾಕಿದ್ದುದನ್ನು ಬದಲಾವಣೆ ಮಾಡಬೇಕೆಂದು ಹೇಳಿದರೆ ಅದು ಇನ್‌ವ್ಯಾಲಿಡ್ ಆಗುತ್ತದೆ ಎಂದು ನಾವು ಅದನ್ನು ಒಪ್ಪಿಕೊಳ್ಳಲಿಲ್ಲ ವ್ಯಾಜ್ಯ ಮಾಡುವುದು ಹೇಗೆ? ಏನಾದರೂ ಆಗಲಿ ಅವನಿಂದ ಕೆಲಸ ಮಾಡಿಸಲು ನಾವು ಒಪ್ಪಲಿಲ್ಲ. ಅನ್ಯಾಯವಾಗಬಾರದೆಂಬ ದೃಷ್ಟಿಯಿಂದ ನಾವು ಟೆಂಡರನ್ನು ನೋಡುತ್ತೇವೆ. ಒಂದು ಟೆಂಡರನು ಇನ್‌ವಾಲಿಡ್ ಎಂದು ರಿಜೆಕ್ಟ್ ಮಾಡಿದ ಮೇಲೆ ಜಾಗ್ರತೆಯಾಗಿ ಒಂದು ವರ್ಷದಲ್ಲಿ ಯಾರು ಕೆಲಸ ಮಾಡಬಹುದು ಎಂದು ಯೋಚನೆ ಮಾಡಿದೆವು. ಈ ಸಂದರ್ಭದಲ್ಲಿ ಬಹಳ ಅನ್ಯಾಯವಾಗಿದೆಯೆಂದು ಹೇಳಿದರು. ಸಿ. ಡಬ್ಲ್ಯು. ಪಿ. ಸಿ. ಬೋರ್ಡನ್ನು ಕನ್‌ಸಲ್ಟ್ ಮಾಡಿಲ್ಲ ಎಂದು ಹೇಳಿದರು. ಅದಕ್ಕೆ ಟೆಂಡರ್ ಕಾಲ್ ಫಾರ್ ಮಾಡಬೇಕೆಂದು. ಕನ್‌ಸಲ್ಟಿಂಗ್ ಇಂಜನಿಯರಿಂಗ್ ಬೋರ್ಡ್ ಏನಿದೆ ಅದನ್ನು ಕರೆಯಬೇಕು, ಆದಷ್ಟು ಜಾಗ್ರತೆ ಕೆಲಸ ವಹಿಸಬೇಕು ಎಂದು ತೀರ್ಮಾನ ಮಾಡಿದೆವು. ಟೆಂಡರ್ ಬಂತು. ಒತ್ತಾಯದ ಮೇಲೆ ಈ ಕೆಲಸ ಮಾಡಲಾಯಿತು. ಕರೆದ ದಿನ ಮೀಟಿಂಗ್ ಆಗಲಿಲ್ಲ. ಇನ್ನೊಂದು ಮೀಟಿಂಗ್ ಕರೆದರೆ ಮತ್ತೆ ಒಂದೆರಡು ತಿಂಗಳಾಗುತ್ತದೆ, ಏಕೆಂದರೆ ಅವರೆಲ್ಲಾ ಬರಬೇಕಾಗುತ್ತದೆ. ಟೆಂಡರು ಕರೆಯ

ಬೇಕೆಂದು ಒತ್ತಾಯದಮೇಲೆ ತೀರ್ಮಾನಿಸಿದೆವು. ಸಿ. ಡಬ್ಲ್ಯು. ಪಿ.ಸಿ. ದೇ ಕೊನೆಯ ತೀರ್ಮಾನವಲ್ಲ, ಕೊನೆಯ ತೀರ್ಮಾನ ಸರ್ಕಾರದ್ದೇ. ಏಕೆಂದರೆ Orders implementing the Board's decision will be issued in the Public Works and Electrical Secretariat in consultation with the Secretaries concerned ಎಂದಿದೆ. ಆಗ ಉದ್ದೇಶವೇನಿತ್ತು ಅಂದರೆ ಸೆಪ್ಟಂಬರ್—ಅಕ್ಟೋಬರ್‌ನಲ್ಲಿ ಕೆಲಸ ಷುರುಮಾಡಬೇಕು, ಅದಕ್ಕೆ ಮೂರು—ನಾಲ್ಕು ತಿಂಗಳ ಅವಕಾಶವಿರುತ್ತದೆ, ಅಷ್ಟರಲ್ಲಿ ಜೆಲ್ಲಿ, ಕಲ್ಲು, ಮರಳು ಮುಂತಾದ್ದೆಲ್ಲಾ ತಂದು ಕೊಳ್ಳಬೇಕು. ಮರಳನ್ನು ದೂರದಿಂದ ತರಬೇಕು, ಅದಕ್ಕೆ ತಕ್ಕಷ್ಟು ಸಿಬ್ಬಂದಿ, ಮೆಷೀನರಿ ಬೇಕು ಎಂದು ಆ ಕಾರಣದಿಂದ ಆ ದಿವಸ ತೀರ್ಮಾನ ಮಾಡದಿದ್ದರೆ ಕಷ್ಟ ಎಂದು ಅವರನ್ನು ಕರೆಸಿ ಮೂರು ಜನರಿಗೆ ವಹಿಸಿದೆವು. ರಾಮಯ್ಯನವರನ್ನು ಬಿಟ್ಟರೆ ಬಾಕಿಯವರು ಕಡಮೆ ದರಕ್ಕೆ ಒಪ್ಪಿದ್ದಾರೆಂದು ಅವರಿಂದ 161 ರೂಪಾಯಿ ಚಿಲ್ಲರೆ ದರದಲ್ಲಿ ಕೆಲಸ ಮಾಡಿಸಿದ್ದಾಗಿದೆ. ಅದರಿಂದ ತೊಂದರೆ, ಮೋಸ ಆಗಿಲ್ಲ. ಹಾಗೆ ಮಾಡದಿದ್ದರೆ 60—70 ಲಕ್ಷ ನಷ್ಟವಾಗುತ್ತಿತ್ತು, ಅದು ಉಳಿಯಿತು ಮೂರು ಜನರೂ ಸೇರಿ ಚೆನ್ನಾಗಿ ಕೆಲಸ ಮಾಡಿದರು. ತಾರಾಪುರೆಯವರಿಗೆ ಟೆಂಡರ್ ಸಿಸ್ಟಂ ಪ್ರಕಾರ ಕೆಲವು ಕೆಲಸ ಕೊಡಬೇಕಾಯಿತು. ಬೇರೆಯವರಿಗೆ ಕೊಟ್ಟರೆ ಕಲ್ಲನ್ನು ತರುವುದಕ್ಕೆ ಕಷ್ಟವಾಗುತ್ತಿತ್ತು. ಏಕೆಂದರೆ ಅಲ್ಲಿ ಕೆಲಸ ಮಾಡುತ್ತಿದ್ದವರು ಕ್ವಾರಿ ಅಲ್ಲಿದ್ದುದನ್ನೆಲ್ಲಾ ಆಕ್ರಮಿಸಿಕೊಂಡಿದ್ದರು, ಹೊಸಬರಾದರೆ ಅದನ್ನು ಬಿಟ್ಟು ಬೇರೆ ಕಡೆ ದೂರದಿಂದ ತರಲು ಕಷ್ಟವಾಗುತ್ತಿತ್ತು. ಅಲ್ಲದೆ ನಾವು ಹೇಳಿದ ದರದಲ್ಲಿ ಅವರು ಬಂದು ಕೆಲಸ ಮಾಡಿದರು.

SRI S. SIVAPPA.—When he relinquished his rights, why were not tenders called for downstream?

ಶ್ರೀ ಎಸ್. ನಿಜಲಿಂಗಪ್ಪ.—ಟೆಂಡರ್ ಕರೆದರೆ ಅನೇಕ ವೇಳೆ ಕಷ್ಟವಾಗುತ್ತದೆ. ಒಂದೆರಡು ತಿಂಗಳು ಟೆಂಡರು ಕರೆಯಲು ಕಾಲಾವಕಾಶ ಬೇಕಾಗುವಾಗ ದರ ಹೆಚ್ಚಲು ಅವಕಾಶವಾಗುತ್ತದೆ. ಅಪ್‌ಸ್ಟ್ರೀಮ್‌ನಲ್ಲಿ ಕೆಲಸವಾಗುವಾಗ ಡೌನ್‌ಸ್ಟ್ರೀಂನಲ್ಲೂ ಆಗಬೇಕಾದ್ದು ಅಗತ್ಯ ಎಂದು ಅದನ್ನೂ ವಹಿಸಿದ್ದೇವೆ. ಹೀಗೆ ಅವಶ್ಯಕವಾದುದನ್ನು ಮಾಡಲೇಬೇಕು. ನೀರು ತುಂಬಿ ಸರಿಯಾಗಿ ನಡೆಯುತ್ತಿಲ್ಲ ಎಂಬುವುದು ವಿಷಾದ ವಿಚಾರ. ಇನ್ನೂ ಅನುಮಾನ ಕಂಡರೆ ತಪಶೀಲು ಬೇಕಾದರೆ ಕೇಳಿದಾಗ ಹೇಳುತ್ತೇನೆ.

ಈ ದಿವಸ ದೇವೇಗೌಡರು ಬಹಳ ಆಶ್ಚರ್ಯಕರವಾದ ಒಂದು ಮಾತನ್ನು ಹೇಳಿದರು. ಅವರು ಕಂಟ್ರಾಕ್ಟರ ಚೀಟಿ ಇದೆ ಎಂದು ಹೇಳಿದರು. ಅದು ನಿಜವಾಗಿದ್ದರೆ ನನ್ನ ಹತ್ತಿರ ಹೇಳಲಿ, ವಿಚಾರ ಮಾಡುತ್ತೇನೆ. ಅಂಥಾದ್ದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿ ಅಥವಾ ಬೇರೆ ಏನು ಬೇಕಾದರೂ ಮಾಡೋಣ. ನೈತಿಕ ಪತನವಾದಾಗ ವಿಚಾರ ಮಾಡುವುದು ಎಲ್ಲರ ಕರ್ತವ್ಯ, ಮಾಡಲು ಸಿದ್ಧ. ಚೀಟಿ ಇದ್ದರೆ ತರಿಸೋಣ. ಈ ದಿವಸ ಜುಡಿಷಿಯಲ್ ಎನ್‌ಕ್ವೈರಿಗೆ ವಹಿಸಬೇಕೆಂದರೆ ಏನು ಕಾರಣದಮೇಲೆ ವಹಿಸಬೇಕು? 32 ಲಕ್ಷ ನಷ್ಟವಾಗುವುದನ್ನು ತಪ್ಪಿಸಿದ್ದೇವೆ. ಆದರೆ ಲೆಕ್ಕ ಹಾಕುವುದು ಬೇಡ. ಏನು ಬೇಕಾದರೂ ವಾದ ಮಾಡಬಹುದು, ಕೆಲವು ನಿಜ ಸಂಗತಿಗಳಿದ್ದರೆ ಹೇಗೆ ಬೇಕಾದರೂ ಲಾಯರುಗಳು ಆರ್ಗ್ಯೂ ಮಾಡುತ್ತಾರೆ. ಒಟ್ಟಿನಲ್ಲಿ ನ್ಯಾಯವೇ ಎಂದು ನೋಡಬೇಕು. ಈ ಸಂದರ್ಭದಲ್ಲಿ ಒಂದು ಸಣ್ಣ ಕತೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಇಬ್ಬರು ಹೆಣ್ಣು ಮಕ್ಕಳ ಚಿತ್ರ ಬರೆದು ಮೊದಲನೆಯ ದಿವಸ ಅದರಲ್ಲಿ ಯಾವುದು ಸರಿಯಾಗಿಲ್ಲವೋ ಅದನ್ನು ಮಾರ್ಕ್ ಮಾಡುವಂತೆ ಹೇಳಿದ.

†ಅಂಥಾ ಒಂದು ಚಿತ್ರವನ್ನಿಟ್ಟು. ಮಾರನೇ ದಿನ ಜನರು ಬಂದು ಆ ಚಿತ್ರವನ್ನು ನೋಡಿ ಇದು ಸರಿಯಿಲ್ಲ, ಇದು ಸರಿಯಿಲ್ಲ, ಎಂದು ಹೇಳಿ ಹೊರಟು ಹೋಗಿದ್ದರು. ಮಾರನೆಯ ದಿನ ಅದೆ ಇನ್ನೊಂದು ಆ ತಪ್ಪಾಗಿದ್ದ ಚಿತ್ರವನ್ನೆ ಪುನಃ ತಂದಿಟ್ಟು ಜನರು ಇದರಲ್ಲೇನು ದೋಷಗಳಿವೆ ತೋರಿಸಬೇಕೆಂದು ಕೇಳಿದಾಗ ಜನರೆಲ್ಲಾ ಅದು ಎಲ್ಲಾ ಸರಿಯಾಗಿದೆ ಎಂದು ಹೇಳಿದರಂತೆ. ಹಿಂದಿನ ದಿನ ತಪ್ಪಾಗಿದ್ದ ಭಾಗವನ್ನು ಯಾರು ಯಾರು ಮಾರ್ಕ್ ಮಾಡಿದ್ದರೋ ಅವರೆಲ್ಲರೂ ಮಾರನೆ ದಿನ ಅದೇ ಚಿತ್ರ ಸರಿಯಾಗಿದೆ ಅದರಲ್ಲಿ ಯಾವ ಭಾಗವು ತಪ್ಪಿಲ್ಲ ಎಂದು ಹೇಳಿದರಂತೆ. ಹೀಗಿ ಈ ವಿಚಾರ ನೋಡತಕ್ಕವರು ದೃಷ್ಟಿಯ ಮೇಲೆ ಹೋಗುತ್ತದೆ. ಆದರೆ ಈ ವ್ಯವಹಾರದಲ್ಲಿ ಅಂಥಾ ಲಂಚರುಷವತ್ತುಗಳೇನಾದರೂ, ಅಂದರೆ ಈಗತಾನೆ ಮಾತನಾಡಿದ ಮಾನ್ಯ ಹೊಳೆನರಸೀಪುರದ ಸದಸ್ಯರು ಹೇಳಿದಂಥ ವಿಚಾರಗಳಿದ್ದರೆ ಅವುಗಳನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ನಾನು ಅದನ್ನು ಖಂಡಿತ ವಿಚಾರಮಾಡುತ್ತೇನೆ. ಆದರೆ ಅಂಥಾ ಯಾವ ಒಂದು ನಿದರ್ಶನವಿಲ್ಲದೆ ಜುಡಿಷಿಯಲ್ ಎನ್‌ಕ್ವೈರಿಯಾಗಬೇಕೆಂದರೆ ಅದು ಅಷ್ಟು ಸಾಧುವಾಗಿ ಕಂಡುಬರುವುದಿಲ್ಲ. ಇಂಥ ಒಂದು ಎನ್‌ಕ್ವೈರಿಯನ್ನು ನಿಷ್ಕಾರಣವಾಗಿ ಮಾಡುವುದಕ್ಕಾಗುವುದಿಲ್ಲ. ನಿಜವಾಗಿಯೂ ಅಂಥ ಸತ್ಯ, ನೀತಿ, ಪ್ರಾಮಾಣಿಕತೆಗೆ ಅಭಾವವಿದ್ದರೆ ಅದನ್ನು ಮಾಡಬಹುದು. ಆದರೆ ಅಲ್ಲಿ ಅಂಥಾ ಯಾವ ಅನ್ಯಾಯ

(ಶ್ರೀ ಎಸ್. ನಿಜಲಿಂಗಪ್ಪ)

ಗಳೂ ನಡೆದಿಲ್ಲ, ಸಾಕಷ್ಟು ಕೆಲಸಕಾರ್ಯಗಳು ಚೆನ್ನಾಗಿ ನಡೆದಿರುತ್ತದೆ. ಆದರೆ ಅಲ್ಲಿ ಈ ಹಿಂದೆ ಒಂದೆರಡುಕಡೆ ಬಿರುಕುಬಿಟ್ಟಿದ್ದ ವಿಚಾರದಲ್ಲಿ ಸಾಕಷ್ಟು ಪರಿಶೀಲನೆ ಮಾಡಿಸಲಾಗಿದೆ. ಅದು ನೆಲದ ದೋಷದಿಂದ ಹಾಗಾಗಿದೆ ಎಂದು ಅನೇಕ ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಹಾಗೂ ಅದಕ್ಕೆ ಹೆದರಬೇಕಾದ ಪರಿಸ್ಥಿತಿಯಿಲ್ಲವೆಂತಲೂ ಕೂಡ ಹೇಳಿದ್ದಾರೆ. ಅಲ್ಲಿ ಮೈಸೂರು ಸಿಮೆಂಟ್ ಕನ್‌ಸ್ಟ್ರಕ್ಷನ್ ಕಂಪೆನಿಯವರು ಬಹಳ ಚೆನ್ನಾಗಿ ಕೆಲಸಮಾಡಿದ್ದಾರೆ. ಅಲ್ಲಿ ಸುಮಾರು 20 ಅಡಿ ನೀರು ಅದರ ಮೇಲೆ ಹರಿಯಬೇಕು. ಆ ನೀರಿನ ಘರ್ಷಣೆ ಎಷ್ಟಾಗುತ್ತದೆಂಬುದನ್ನೂ ಲೆಕ್ಕ ಹಿಡಿದು ಕೆಳಗಡೆ ಹೋಗತಕ್ಕ ನೀರಿನ ಲೆಕ್ಕವನ್ನೂ ಹಿಡಿದು ಅಲ್ಲಿ ಕೆಲಸಮಾಡಿದ್ದಾರೆ. ಆದರೆ ನಾವು ಅಲ್ಲಿ ಲೆಕ್ಕಹಾಕಿದ್ದ ನೀರಿಗಿಂತ ಜಾಸ್ತಿ ನೀರು ಬಂದಪ್ರಯುಕ್ತ ಅಲ್ಲಿ ಬಿರುಕುಂಟಾಯಿತು. ಈ ವಿಚಾರದಲ್ಲಿ ನಮ್ಮಲ್ಲಿದ್ದ ಇಂಜನಿಯರುಗಳಲ್ಲದೆ ಕೇಂದ್ರದ ಇಂಜಿನಿಯರನ್ನೂ ಟೆಲಿಗ್ರಾಂ ಕೊಟ್ಟು ಕರೆಸಿ ಅದನ್ನೆಲ್ಲಾ ಪರಿಶೀಲನೆ ಮಾಡಿದ್ದರಲ್ಲಿ ಆ ಬಗ್ಗೆ ಯಾರೂ ಅಷ್ಟೇನೂ ಭಯಪಡಬೇಕಾದ್ದಿಲ್ಲವೆಂದು ಆ 5—6 ಜನರು ನುರಿತ ಇಂಜಿನಿಯರುಗಳು ಹೇಳಿದ್ದಾರೆ. ಹೀಗೆ ಅಲ್ಲಿ ಹೆಜ್ಜೆ ಹೆಜ್ಜೆಗೂ ಪರೀಕ್ಷೆಮಾಡಲು ತಕ್ಕ ಇಂಜಿನಿಯರಿಂಗ್ ಶಿಬ್ಬಂದಿಯನ್ನಿಟ್ಟಿದ್ದೇವೆ. ಹಾಗಿರುವಾಗ ಅಲ್ಲಿ ಎಲ್ಲಾ ಕೆಲಸಗಳೂ ಕೆಟ್ಟು ಹೋಗಿವೆಯೆಂದು ಹೇಳತಕ್ಕದ್ದು ಸರಿಯಲ್ಲ. ಆ ಬಿರುಕು ಬಂದಿದ್ದ ಸ್ಥಳದಲ್ಲಿ ಈಗಾಗಲೇ ಆ ಇಂಜಿನಿಯರುಗಳ ಸಲಹೆಮೇರೆಗೆ ಅಲ್ಲಿ ಬಿರುಕು ಬಂದಿದ್ದ ಸ್ಥಳದಲ್ಲಿ ಕಲ್ಲುಗಳನ್ನೂ ಮತ್ತು ಸ್ಯಾಂಡನ್ನೂ ಚೀಲದಲ್ಲಿ ಭರ್ತಿಮಾಡಿ ಬಿಟ್ಟಿದೆ. ಅಲ್ಲಿಂದ ಇಲ್ಲಿಯತನಕ ಯಾವ ತೊಂದರೆಯೂ ಆಗಿಲ್ಲ.

ಇನ್ನು ಶ್ರೀಮಾನ್ ಶಿವಪ್ಪನವರು ಅಲ್ಲಿಗೆ ಸರಬರಾಯಿಮಾಡಲಾಗಿದ್ದ ಸಿಮೆಂಟ್ ಮತ್ತು ಕಬ್ಬಿಣ ಎಲ್ಲಿಗೋ ಹೋಯಿತು, ಅದರಿಂದ ಅಲ್ಲಿಯ ಕೆಲಸಕಾರ್ಯಗಳು ಅಷ್ಟು ಚೆನ್ನಾಗಿ ಆಗಿಲ್ಲವೆಂಬ ಮಾತನ್ನು ಹೇಳಿದರು. ಅಲ್ಲಿ ದಿನಕ್ಕೆ ಸಾವಿರಾರು ಚೀಲ ಸಿಮೆಂಟೂ ಮತ್ತು ಕಬ್ಬಿಣ ಖರ್ಚಾಗುತ್ತಿದೆ. ಅಂಥಾ ಕಡೆ ಎಲ್ಲೋ 100 ಚೀಲ ಸಿಮೆಂಟೂ ಮತ್ತು 2 ಲಾರಿ ಕಬ್ಬಿಣ ಎಲ್ಲಿಗೋ ಹೋಯಿತೆಂದು ಅಲ್ಲಿ ನಡೆದಿರತಕ್ಕ ಕೆಲಸವೆಲ್ಲಾ ಬಹಳ ಕನಿಷ್ಟಮಟ್ಟದ್ದು ಎಂದು ಹೇಳತಕ್ಕದ್ದು ಸರಿಯಲ್ಲ. ಎಂದು ಆ ಕಬ್ಬಿಣ ಮತ್ತು ಸಿಮೆಂಟ್ ಕಳವಾಯಿತೋ ಅಂದೇ ಅದನ್ನು ಕಂಡುಹಿಡಿಯಲಾಯಿತು. ಅದೇ ದಿವಸ ಅವರ ಮೇಲೆ ಕೇಸನ್ನೂ ಕೂಡ ಹಾಕಲಾಗಿದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಅದನ್ನು ಹಿಡಿದವರು ಪೋಲೀಸಿನವರು......

ಶ್ರೀ ಎಸ್. ನಿಜಲಿಂಗಪ್ಪ.—ಹೌದು. ನಾವು ಅವರನ್ನು ಅಲ್ಲಿಟ್ಟಿರುವುದೇ ಅದಕ್ಕೆ. ಆದರೆ ಇದರಲ್ಲಿ ಒಂದು ವಿಷಯ : ನ್ಯಾಯವಾಗಿ ಮಲಗಿರತಕ್ಕ ಮನುಷ್ಯನನ್ನು ಎಚ್ಚರಿಸುವುದು ಸುಲಭ ಆದರೆ ನಟನೆಯಲ್ಲಿ ನಿದ್ರೆಮಾಡತಕ್ಕ ಮನುಷ್ಯನನ್ನು ಎಚ್ಚರಿಕೆಮಾಡುವುದು ಬಹಳ ಕಷ್ಟ. ಆ ಕೇಸನ್ನು ಹಿಡಿದಿರತಕ್ಕವರು ನಮ್ಮ ಪೋಲೀಸಿನವರೇ. ಅವರು ಅಂಥ ತಪ್ಪಿತಸ್ಥರನ್ನೇ ಹುಡುಕುತ್ತಿರುತ್ತಾರೆ. ಹಿಡಿದೂ ಹಾಕಿದ್ದಾರೆ. ಹಾಗೆ ಅಲ್ಲಿ ಏನೋ ಒಂದೆರೆಡು ಲಾರಿ ಕಬ್ಬಿಣ ಮತ್ತು 100 ಚೀಲ ಸಿಮೆಂಟು ಹೋದುದರಿಂದ ಅಲ್ಲಿ ನಡೆದಿರತಕ್ಕ ಕೆಲಸಗಳಿಗೆ ಸಾಕಷ್ಟು ಸಿಮೆಂಟನ್ನೂ ಕಬ್ಬಿಣವನ್ನೂ ಉಪಯೋಗಮಾಡಿಲ್ಲವೆಂದು ಹೇಳತಕ್ಕದ್ದು ಸರಿಯಲ್ಲ. ಇಷ್ಟೇ ಅಲ್ಲದೆ ಆಗಿಂದಾಗ್ಗೆ ಸಿ. ಡಬ್ಲ್ಯು. ಪಿ. ಸಿ. ಅವರು ಅಲ್ಲಿಗೆ ಬಂದು ಅಲ್ಲಿ ನಡೆದಿರತಕ್ಕ ಕೆಲಸಗಳನ್ನು ಪರಿಶೀಲನೆಮಾಡಿ ಸರ್ಟಿಫಿಕೇಟನ್ನು ಕೊಡುತ್ತಿದ್ದಾರೆ. ತಾವು ಯಾರುಬೇಕಾದರೂ ಹೋಗಿ ಅದನ್ನು ನೋಡಿಕೊಂಡುಬರಬಹುದು. ಇಲ್ಲಿಯವರೆಗೂ ಆ ಕಟ್ಟೆಯಲ್ಲಿ ನೀರು ಸಲೀಸಾಗಿ ನಿಂತಿದೆ. ಅಲ್ಲಿ ಸರಿಯಾಗಿ ಕಬ್ಬಿಣ ಮತ್ತು ಸಿಮೆಂಟನ್ನು ಉಪಯೋಗ ಮಾಡಿದ್ದಾರೆ. ಈ ದಿವಸ ಅಲ್ಲಿ ಕಬ್ಬಿಣ ಮತ್ತು ಸಿಮೆಂಟನ್ನು ಹೇಗೆ ಕಾಯುತ್ತಿದ್ದಾರೆಂಬುದನ್ನು ತಾವು ಯಾರುಬೇಕಾದರೂ ಹೋಗಿ ನೋಡಬಹುದು.

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಅಲ್ಲಿಂದ ಕುಂದಾಪುರಕ್ಕೆ ಕಬ್ಬಿಣ ಮತ್ತು ಸಿಮೆಂಟ್ ಸಾಗಿ ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ ನನಗೂ ಆ ಕುಂದಾಪುರ ಅಲ್ಲಿಗೆ ಬಹಳ ಸಮೀಪದಲ್ಲಿದೆ ಎಂಬ ವಿಚಾರ ಗೊತ್ತಿದೆ. ಅಲ್ಲಿ ಅನೇಕ ಕೆಲಸ ಕಾರ್ಯಗಳೂ ಒಂದು ಕಾಲೇಜ್‌ಕಟ್ಟಡ ಇವೆಲ್ಲಾ ನಡೆಯುತ್ತಿವೆ. ಅಂಗೆ ಒಂದುಲಾರಿಯಲ್ಲ ಹತ್ತಾರು ಲಾರಿಗಳು ಕಬ್ಬಿಣ ಮತ್ತು ಸಿಮೆಂಟನ್ನು ಸಾಗಿಸುತ್ತಿವೆ. ಆದರೆ ಅಲ್ಲಿಗೆ ಹೋಗತಕ್ಕ ಸಿಮೆಂಟೆಲ್ಲಾ ಇಲ್ಲಿಯದೇ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನು ಸಿಮೆಂಟಿನ ವಿಚಾರದಲ್ಲಿ ಒಂದು ಅನುಮಾನವನ್ನು ಕ್ವಾಲಿಟಿ ವಿಚಾರದಲ್ಲಿ ಕೆಲವರು ವ್ಯಕ್ತಪಡಿಸಿದರು. ನಾವು ಅದನ್ನು ಪರೀಕ್ಷೆಮಾಡಿಯೇ ತೆಗೆದುಕೊಳ್ಳುವುದು. ಒಟ್ಟಿನಲ್ಲಿ ಅಲ್ಲಿ ಆ ಒಂದೆರಡು ಬಿರುಕುಗಳು ಬಿಟ್ಟಿದ್ದೇ ಒಂದು ದೊಡ್ಡಪ್ರಮಾದವಾಗಿಬಿಟ್ಟಿದೆ. ಅಂಥಾ ಭಾರೀ ಪ್ರಮಾಣದ ಕೆಲಸಗಳು ನಡೆಯತಕ್ಕ ಕಡೆ ಅಂಥ ಸಣ್ಣಪುಟ್ಟ ನ್ಯೂನತೆಗಳಿದ್ದೇ ಇರುತ್ತವೆ. ಉದಾಹರಣೆಗೆ ಹೇಳುವುದಾದರೆ : ಡೆಲ್ಲಿಯಲ್ಲಿ ಆ ಪಾರ್ಲಿಯಮೆಂಟ್ ಹೌಸಿನಿಡೂ ಒಂದು ದೊಡ್ಡ

ಯೋಜನೆಯೇ. ಅಲ್ಲಿ ಏನೋ ಆಕಸ್ಮಿಕವಾಗಿ ಮೇಲಿಂದ ಒಂದು ಇಟ್ಟಿಗೆ ಕೆಳಗೆ ಬಿತ್ತು. ಅಷ್ಟರಿಂದಲೇ ಅಲ್ಲಿ ನಡೆದಿರತಕ್ಕ ಕೆಲಸವೆಲ್ಲಾ ತಪ್ಪಿನಿಂದ ಕೂಡಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಸಾಕಷ್ಟು ವಿಚಾರಮಾಡಿ ಅಲ್ಲಿ ಏನೇನು ನಡೆದಿದೆ ಎಂಬುದನ್ನು ನಾನು ಸ್ವತಃ ನೋಡಿದ್ದೇನೆ. ಇದರಲ್ಲಿ ತಮಗೆ ಉಹೆಯಿಂದ ಇರ್ರೆಗ್ಯುಲರ್ ಎಂಬುದಾಗಿ ಕಾಣಬಹುದೇ ವಿನಹ ಜುಡಿಷಿಯಲ್ ಎನ್‌ಕ್ವೈರಿಗೆ ಹೋಗಬೇಕಾದುದು ಏನೂ ಇಲ್ಲವೆಂದು ನಾನು ಹೇಳಬೇಕಾಗಿದೆ. ನಾನೂ ನೋಡುತ್ತೇನೆ. ನನಗೆ ಅನುಮಾನ ಬಂದರೆ ಅದನ್ನು ಮಾಡುತ್ತೇನೆಂದು ನಾನು ಹಿಂದೆ ಹೇಳಿದ್ದೆ. ಮಾನ್ಯ ಸದಸ್ಯರು 30—40 ಲಕ್ಷ ರೂಪಾಯಿಗಳು ಖರ್ಚಾಗಿರಬಹುದು ಮತ್ತು ದುರುಪಯೋಗವಾಗಿರಬಹುದು ಎಂದು ಹೇಳುತ್ತಿದ್ದಾರೆ ಅದನ್ನು ನೋಡುತ್ತೇನೆ.

12-30 P.M.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಹಿಂದೆ ಇವರು ಹೇಳಿದ್ದನ್ನು ಇಲ್ಲಿ ಓದಿ ಹೇಳುತ್ತೇನೆ. "ನೀವು ಹೇಳತಕ್ಕದ್ದು ಅಲ್ಲಿ ಬಹಳ ಹಣ ಉಪಯೋಗವಾಗಿದೆ. ಎಲ್ಲಾ ಲೆಕ್ಕ ಹಾಕಿದರೂ ಪ್ರಾಯಶಃ 40 ಲಕ್ಷ ಅಥವಾ 50 ಲಕ್ಷವೆಂದು ಇಟ್ಟುಕೊಳ್ಳಬಹುದು"

ಶ್ರೀ ಎಸ್. ನಿಜಲಿಂಗಪ್ಪ.—ಅವತ್ತು ಅವರು 50 ಲಕ್ಷವೆಂದು ಹೇಳಿ ಇವತ್ತು ಒಂದು ಕೋಟಿ ದುರುಪಯೋಗವಾಗಿದೆ ಎಂದು ಹೇಳಬಹುದು. ನಾನು ಏನನ್ನೂ ಬಚ್ಚಿಟ್ಟಿಲ್ಲ. ಜೊತೆಗೆ ನಾನು ಯಾರನ್ನೂ ಯಾವ ಪ್ರಶ್ನೆಗಳನ್ನೂ ಕೇಳಲಿಲ್ಲ. ಈ ವಿಚಾರದಲ್ಲಿ ಪ್ರತಿಯೊಂದು ಅಧಿವೇಶನದಲ್ಲೂ ಪ್ರಶ್ನೋತ್ತರ ಮೂಲಕವೋ ಅಥವಾ ಚರ್ಚೆಯ ಮೂಲಕವೋ ಬಂದಂಥ ಅಂಶಗಳಿಗೆಲ್ಲಾ ಸಾಕಷ್ಟು ಜವಾಬು ಕೊಟ್ಟಿದ್ದೇನೆ. ವೈಟ್ ಪೇಪರ್ ಬೇಕು ಎಂದು ಕೇಳಿದರು. ಅದನ್ನೂ ಕೊಟ್ಟಿದ್ದೇನೆ. ಅಂದಮೇಲೆ ಇದರಲ್ಲಿ ಬಚ್ಚಿಡಲು ಕಾರಣವಿಲ್ಲ. ನಿಮಗೆ ಅಲ್ಲಿ ಕಂಡುಬಂದಿರುವ ವಿಷಯಗಳನ್ನು ಹೇಳಿದ್ದೀರಿ. ಅದರಿಂದ ನಮಗೂ ಸಂತೋಷ. ಇದನ್ನು ಜುಡಿಷಿಯಲ್ ಎನ್‌ಕ್ವೈರಿಗೆ ಕಳುಹಿಸಬೇಕು, ಇದರಲ್ಲಿ ಅಚಾತುರ್ಯ ನಡೆದಿದೆ ಎಂಬುದಾಗಿ ಹೇಳುವುದಕ್ಕೆ ಕಾರಣವಿಲ್ಲ. ಏಕೆಂದರೆ ನಾನು ರಿಕಾರ್ಡುಗಳನ್ನು ನೋಡಿದ್ದೇನೆ. ರಾಕ್ ಫಿಲಿಂಗ್ ಕೆಲಸವನ್ನು ತಾರಾಪೂರ್ ಕಂಪೆನಿಗೆ ಕೊಟ್ಟಾಗ ನಾಲ್ಕು ಸಲ ಕನ್‌ಸಲ್ಟ್ ಮಾಡಿದ್ದೇವೆ. ಆ ಬಗ್ಗೆ ಲಾ ಡಿಪಾರ್ಟ್‌ಮೆಂಟ್, ಮತ್ತು ಅಡ್ವೋಕೇಟ್ ಜನರಲ್ ಅವರು ಕಾನೂನು ಪ್ರಕಾರ ಇದರಲ್ಲಿ ಅಧಿಕಾರವಿಲ್ಲ, ಇದು ಹೊಸ ಕಂಟ್ರಾಕ್ಟ್ ಆಗುತ್ತದೆ, ಇದನ್ನು ಒಪ್ಪಿಕೊಳ್ಳಲೇ ಬೇಕು ಎಂದು ಹೇಳಿದ ಮೇಲೆ ಬೇರೆ ಮಾರ್ಗವಿಲ್ಲದೆ ಅದನ್ನು ಒಪ್ಪಿಕೊಂಡಿದ್ದೇವೆ. ಏನನ್ನೂ ಕಣ್ಣು ಮುಚ್ಚಿಕೊಂಡು ಮಾಡಿಲ್ಲ. ಇದನ್ನು ಅವರಿಗೆ ಕೊಡಬಹುದೋ ಕೊಡಬಾರದೋ ಎಂಬ ಬಗ್ಗೆ ದೀರ್ಘವಾಗಿ ವಿಚಾರಮಾಡಿ ಕೊಡುವುದು ಸರಿಯೆಂದು ಮನವರಿಕೆಯಾದಮೇಲೆ ತ್ವರಿತವಾಗಿ ಕೆಲಸ ನಡೆಯಬೇಕು, ಹಾಗೂ ಮೈಸೂರಿನ ಅಭಿವೃದ್ಧಿಯಾಗಬೇಕು ಎಂಬುದನ್ನು ತಿಳಿದುಕೊಂಡು ಮಾಡಿದ್ದೇವೆ. ಆದ್ದರಿಂದ ನಾನು ಹೇಳಿರುವುದು ಸರ್ವ ಸಾಧಾರಣವಾಗಿ ಜನತೆಗೂ ತಮಗೂ ಒಪ್ಪಿಗೆಯಾಗುತ್ತದೆಂದು ಹೇಳುತ್ತೇನೆ. ಒಟ್ಟಿನಲ್ಲಿ ಇದು ಜುಡಿಷಿಯಲ್ ಎನ್‌ಕ್ವೈರಿಗೆ ಅಥವಾ ಕಮಿಷನ್ನಿಗೆ ಹೋಗುವ ಕಾರಣ ನನಗೆ ಕಾಣುವುದಿಲ್ಲ. ಹೊಳೇ ನರಸೀಪುರ ಕ್ಷೇತ್ರದಿಂದ ಬಂದಂಥ ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ, ಇದರಲ್ಲಿ ಬಹಳ ಅನ್ಯಾಯವಾಗಿದೆ; ಅಂಥಾದ್ದನ್ನು ತೋರಿಸಿದರೆ, ಅಂಥಾದ್ದು ತಪ್ಪುಗಳಿದ್ದರೆ ಅವನ್ನು ವಿಚಾರಮಾಡುತ್ತೀರಾ ಎಂದು ಕೇಳಿದರು. ಎಲ್ಲಾದರೂ ಅಂತಹ ಅನ್ಯಾಯವಾಗಿ ತಪ್ಪುಗಳು ಕಂಡರೆ ಖಂಡಿತವಾಗಿ ಅದನ್ನು ವಿಚಾರ ಮಾಡುತ್ತೇನೆ. ಎಲ್ಲ ಮಾನ್ಯ ಸದಸ್ಯರೂ ಬಹಳ ಮೌನದಿಂದ ಕೇಳಿದ್ದಾರೆ. ಹೆಚ್ಚಿಗೆ ಮಧ್ಯ ಮಧ್ಯ ಮಾತನಾಡಿ ನನಗೆ ಜವಾಬು ಕೊಡುವ ಸಮಯದಲ್ಲಿ ಯಾರೂ ತೊಂದರೆಮಾಡಲಿಲ್ಲ. ಸಂತೋಷ.

ಶ್ರೀ ಕೆ. ಲಕ್ಕಪ್ಪ.—ರಾಮಾಯಣದಲ್ಲಿ ಸೀತೆ ಅಗ್ನಿ ಪ್ರವೇಶಮಾಡಿ ಬಂದನಂತರ ಆಕೆ ಪತಿವ್ರತೆಯೆಂದು ಶ್ರೀರಾಮ ಹೇಳಿದನಂತೆ. ಅಂದಮೇಲೆ ಸರ್ಕಾರ ನಿರ್ದೋಷಗಳಿಂದ ಕೂಡಿದೆ ಎಂದು ಇವರೇ ಹೇಳುವಾಗ ಜುಡಿಷಿಯಲ್ ಎನ್‌ಕ್ವೈರಿಗೆ ಏಕೆ ಇವರು ಅವಕಾಶ ಮಾಡಿಕೊಡಬಾರದು, ಏನು ಇವರಿಗೆ ಕಷ್ಟ? ಏಕೆಂದರೆ ಈ ವಿಚಾರದಲ್ಲಿ ನಮಗೆ ಬಹಳ ಅನುಮಾನ ಬಂದಿದೆ. ಇದರಲ್ಲಿ ಸರ್ಕಾರದ ದೋಷಗಳಿವೆ.

Mr. SPEAKER.—No one can mistake the wood for the tree. In this matter is he Ravana?

ಶ್ರೀ ಎಸ್. ಗೋಪಾಲ ಗೌಡ.—ಆರ್ಬಿಟ್ರೇಟರ್‌ನ್ನು ನೇಮಕಮಾಡುತ್ತಾರೆ. ಅವರ ಅಭಿಪ್ರಾಯವನ್ನು ಆಖೈರಾಗಿ ತೆಗೆದುಕೊಳ್ಳುತ್ತಾರೆ. ಆದರೆ ಆರ್ಬಿಟ್ರೇಟರ್‌ಗಳ ಪ್ರಾಮಾಣಿಕತೆಯ

(ಶ್ರೀ ಎಸ್. ಗೋಪಾಲ ಗೌಡ)

ಬಗ್ಗೆ ದೂರು ಬಂದಾಗ, ಕೊಟ್ಟಿರತಕ್ಕ ಎವಿಡೆನ್ಸ್‌ನ್ನು ಆರ್ಬಿಟ್ರೇಟರೇ ಸರಿಯಾಗಿ ಅಪ್ರಿಷಿಯೇಟ್ ಮಾಡಲಿಲ್ಲ ಅಂದಮೇಲೆ, ಅವರ ತಪ್ಪುಮಾಡಿರಬಹುದು ಎಂದು ಹೇಳುವುದಕ್ಕಾಗುವುದಿಲ್ಲವೇ? ಏಕೆಂದರ ನೀವು ವಕೀಲರು, ನೋಡಬೇಕು.

Mr. SPEAKER.—There is an essential difference between an award and judgment in a Court of Law. A judgment must contain reasons, but an award is not like that. An Arbitrator is not bound to give any reasons. He can simply say, " my decision is like this".

ಶ್ರೀ ಎಸ್. ಗೋಪಾಲ ಗೌಡ.—ಈಗ ಇರುವ ಹಾಗೆ ವಿಚಾರ ಮಾಡುವಾಗ 18 ಲಕ್ಷ ರೂಪಾಯಿಗಳನ್ನೂ ಕೂಡ ಕೊಡಬೇಕಾಗುತ್ತದೆ. ಇನ್ನೂ ಏನೇನು ಕೊಡಬೇಕಾಗಿದೆಯೋ ಗೊತ್ತಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಮೊದಲನೆಯದಾಗಿ ಮಾನ್ಯ ಶ್ರೀ ಲಕ್ಕಪ್ಪನವರ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ರಾಮ ಸೀತೆಗೆ ಅಗ್ನಿಪ್ರವೇಶ ಮಾಡಿಸಿದ್ದು ಸರಿಯಲ್ಲವೆಂದು ನನಗನ್ನಿಸುತ್ತದೆ. ರಾಮು ಸೀತೆಗೆ ಅಗ್ನಿ ಪರೀಕ್ಷೆ ಮಾಡಿಸಿದ ಎಂದು ಯಾವನೋ ಒಬ್ಬ ಹೇಳಿದನೆಂದು ನಾನು ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆದರೆ ಇದು ಒಂದು ಪಾಲಿಸಿ ಪ್ರಶ್ನೆ. ಈ ಪಾಲಿಸಿ ಪ್ರಶ್ನೆಯಲ್ಲಿ ಬಹಳ ಗಂಭೀರವಾಗಿ, ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ಆದ್ದರಿಂದ ನಾವು ಯಾವುದೇ ವಿಚಾರವನ್ನು ತೆಗೆದುಕೊಂಡರೂ ಅದರಲ್ಲೂ ಸರ್ಕಾರ ಮಾಡತಕ್ಕ ಕೆಲಸಗಳಲ್ಲಿ ಯೋಜನಾ ಕಾರ್ಯಗಳಲ್ಲಿ ಅವನ್ನು ಜುಡಿಷಿಯಲ್ ಎನ್‌ಕ್ವೈರಿ ಅಥವಾ ಕಮಿಷನ್ನಿಗೆ ಕಳುಹಿಸುವಾಗ ಅದಕ್ಕೆ ಸಾಕಷ್ಟು ಸಾಕ್ಷಿ ಸಾಹಿತ್ಯಗಳು, ಸಕಾರಣಗಳಿವೆಯೇ ಎಂಬುದನ್ನು ನೋಡಿ ನಮಗೆ ಸಮಾಧಾನವಾದರೆ ಕಳುಹಿಸಬೇಕೇ ಹೊರತು ಕೇಳಿದ್ದಕ್ಕೆಲ್ಲಾ ಕಳುಹಿಸುವುದಂತೂ ಸಾಧ್ಯವಾಗುವುದಿಲ್ಲ. ಅದು ಸರಿಯೂ ಅಲ್ಲ. ಇನ್ನು ಗೋಪಾಲ ಗೌಡರ ಪ್ರಶ್ನೆಗೆ ಉತ್ತರ ಹೇಳಬೇಕಾದರ ಮಾನ್ಯ ಸದಸ್ಯರು ಕಾನೂನು ಓದಿದರೋ ಇಲ್ಲವೊ ಗೊತ್ತಿಲ್ಲ. ಅವರು ಚೆನ್ನಾಗಿ ಓದಿದ್ದರೆ ಆ ರೀತಿ ಹೇಳುತ್ತಿರಲಿಲ್ಲ. ಪಂಚಾಯಿತಿಗೆ ಹೋಗುವುದು ಮತ್ತು ಸಾಧಾರಣವಾದ ಕೋರ್ಟುಗಳಿಗೆ ಹೋಗುವುದರಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಮೊದಲೇ ತಿಳಿದುಕೊಂಡು ಹೋಗುತ್ತಾರೆಂದು ಹೇಳುತ್ತೇನೆ. ಆರ್ಬಿಟ್ರೇಟರ್ಸಿಗಿರುವ ಕಾನೂನೇ ಬೇರೆ, ನಾವೇ ಪಂಚಾಯಿತಿ ಎಂದು ಹೇಳಿದಮೇಲೆ ಅಲ್ಲಿ ಹೋಗುವುದು ಸರಿಯಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಅಂದರೆ ಆರ್ಬಿಟ್ರೇಟರ್ಸ್ ಅವಾರ್ಡನ್ನು ಕೋರ್ಟಿನಲ್ಲಿ ಪ್ರಶ್ನಿಸಬಹುದು. ಅವರು ಕೊಟ್ಟ ಪ್ರಕಾರ ಕೋರ್ಟಿನಲ್ಲಿ ದುಡ್ಡು ಕೊಡಬೇಕೋ?

Mr. SPEAKER.—The question of arbitration is quite different. He may read Section 30 of the Act.

Sri K. LAKKAPPA.—The award has been framed in such a way that it is helpful to the Contractors.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಈ ವಿಚಾರದಲ್ಲಿ ಸರ್ಕಾರದವರ ಮೇಲೆ ದೋಷವಿದೆ ಎಂಬುದರಲ್ಲಿ ಅನುಮಾನವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳೇ ಹಿಂದೆ ವಿಧಾನ ಸೌಧದ ಕಟ್ಟಡದ ಬಗ್ಗೆ ಎನ್‌ಕ್ವೈರಿಯಾಗಬೇಕು ಎಂದು ಹೇಳುತ್ತಿದ್ದರು. ಅಂಥಾದ್ದನ್ನು ಒಬ್ಬ ರಿಟೈರ್ಡ್ ಜಸ್ಟೀಸ್ ಅವರು ನಾಗಪುರದಿಂದ ಬಂದು ಎನ್‌ಕ್ವೈರಿ ಮಾಡಿದರು. ಸರ್ಕಾರದವರೇ ಅದಕ್ಕೆ ಕಾರಣರು ಎಂದು ಹೇಳಿರುವಾಗ ಇಂತಹ ಕೋಟ್ಯಾಂತರ ರೂಪಾಯಿಗಳ ಹಗರಣ ನಡೆದಿದೆ ಎಂದು ನಾವು ಹೇಳುವಾಗ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದರಲ್ಲಿ ಈ ಸರ್ಕಾರದ ನಿಲುವು ಏನು?

ಶ್ರೀ ಎಸ್. ನಿಜಲಿಂಗಪ್ಪ.—ಅನುಮಾನ ಬಂದದ್ದರಿಂದ ಆಗಿನ ಸರ್ಕಾರವೇ ಅದನ್ನು ನೇಮಕ ಮಾಡಿದ್ದು. ಸರ್ಕಾರಕ್ಕೆ ಅನುಮಾನ ಬಂತು. ಆದರೆ ನಮ್ಮ ಸರ್ಕಾರಕ್ಕೆ ಈ ವಿಚಾರದಲ್ಲಿ ಪ್ರಾಮಾಣಿಕತೆಯ ಅಭಾವ ಇದೆಯೆಂಬ ಅನುಮಾನ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಆಗ ಅಪ್ರಾಮಾಣಿಕತೆ ಇತ್ತೋ?

ಶ್ರೀ ಎಸ್. ನಿಜಲಿಂಗಪ್ಪ.—ಆ ಸರ್ಕಾರಕ್ಕೆ ಆ ಅಭಿಪ್ರಾಯವಿತ್ತು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆರ್ಬಿಟ್ರೇಟರ್ಸ್‌ನಲ್ಲಿ ಒಬ್ಬರಾಗಿದ್ದ ರಿಟೈರ್ಡ್ ಚೀಫ್ ಇಂಜನಿಯರ್ ಶ್ರೀಮಾನ್ ಕೆ. ಎಸ್. ಗಂಗಾಧರ್ ಅವರ ವರದಿ ಈ ಸಭೆಯಲ್ಲಿ ಬರುವುದಕ್ಕೆ ಮುಂಚೆ ಅವರ ವರದಿ ಬಂದಾಗ್ಗೆ ಸಾಧ್ಯವಾದಷ್ಟು ಅನ್ಯಾಯಗಳಾಗಿ ಅವರು ಆ ಕಂಟ್ರಾಕ್ಟುದಾರರಿಗೆ ಒಳಗಾದಾಗ ಅವರಿಗೆ ಬೇಕಾದವರಿಗೆ 3 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿದುದರಿಂದ ತಾನೆ ಅದು ಅವರ ಮರಣಕ್ಕೆ ಕಾರಣವಾದುದು?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಏನು ರಿಪೋರ್ಟ್ ಬರೆದಿದ್ದಾರೋ ಅದಿನ್ನೂ ವೈಟ್ ಪೇಪರ್‌ಗೆ ಬಂದಿಲ್ಲ. ಅವತ್ತು ಬರೆದಿರತಕ್ಕ ಕಟ್ಟುಕತೆ ನನಗೆ ಗೊತ್ತಿಲ್ಲ. ಅದನ್ನು ಹಿಂದೆಯೇ ಹೇಳಿದ್ದೇನೆ. ಹಾಗೇನಾದರೂ ಇದರಲ್ಲಿ ಅನ್ಯಾಯ ಇದ್ದರೆ ಮಾನ್ಯ ಸದಸ್ಯರು ಬಂದು ಹೇಳಲಿ. ಅವರು ಬಹುಶಃ ಜಡ್ಜ್‌ಮೆಂಟ್ ಬರೆದು ರುಜು ಮಾಡಿರಲಿಲ್ಲ. ಬರೆದವರು ತೀರಿಹೋದರು. ಆದರೆ ಅವರು ಏನು ಬರೆದಿದ್ದರೋ ಅದನ್ನು ಬಾಕಿಯವರು ಬಂದು ಅನುಮೋದಿಸಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹನುಮಂತಯ್ಯನವರ ಮಂತ್ರಿ ಮಂಡಲದಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ. ಆಗ ನಾವು ನಮ್ಮ ಪ್ರಾಮಾಣಿಕತೆಯನ್ನು ಎತ್ತಿ ತೋರಿಸುವುದಕ್ಕೋಸ್ಕರ ವಿಚಾರಣ ಸಮಿತಿಯನ್ನು ನೇಮಿಸಿದೆವು.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಪ್ರಾಮಾಣಿಕತೆಯ ಬಗ್ಗೆ ಅನುಮಾನ ಬಂದಾಗ ಜುಡಿಷಿಯಲ್ ಎನ್‌ಕ್ವೈರಿಯ ಅಗತ್ಯತೆ ಇದೆಯೆಂದು ಹೇಳಿದರು. ತಾವು ನಮಗೆ ಕೊಟ್ಟಿರತಕ್ಕ ವರದಿಯಲ್ಲಿ 3 ಆರ್ಬಿಟ್ರೇಷನ್ ಕೇಸುಗಳಲ್ಲಿ ಎರಡನ್ನು ಬಿಟ್ಟು ಒಂದು ಕೇಸಿಗೆ ಮಾತ್ರ ಕೋರ್ಟಿಗೆ ಹೋಗಿದ್ದೀರಿ. ಇಲ್ಲಿ ತಮ್ಮ ಪ್ರಾಮಾಣಿಕತೆಯ ಬಗ್ಗೆ ನಮಗೆ ಸಂಶಯ ಬರುತ್ತದೆ. ಆಮೇಲೆ ಅಪ್ ಸ್ಟ್ರೀಮ್ ಕೆಲಸಕ್ಕೆ ಟೆಂಡರನ್ನು ಕರೆದು ಡೌನ್ ಸ್ಟ್ರೀಮ್ ಕೆಲಸಕ್ಕೆ ಟೆಂಡರನ್ನು ಕರೆಯಲಿಲ್ಲ. ಇಲ್ಲಿ ಪ್ರಾಮಾಣಿಕತೆಯ ಸಂಶಯ ಬಂದಿದೆ. ನಿರ್ದಿಷ್ಟವಾಗಿ ತಮ್ಮ ಪ್ರಾಮಾಣಿಕತೆಯ ಬಗ್ಗೆ ಸಂಶಯ ಪಡತಕ್ಕ ಎರಡು ಸಮಸ್ಯೆಗಳು ಇರುವುದರಿಂದ ತಮ್ಮ ಪ್ರಾಮಾಣಿಕತೆಯನ್ನು ಸ್ಥಿರ ಮಾಡಿ ಕೊಳ್ಳಬೇಕಾದರೆ ಜುಡಿಷಿಯಲ್ ಎನ್‌ಕ್ವೈರಿ ಅಲ್ಲದೇ ಬೇರೆ ಯಾವ ರೀತಿಯಲ್ಲಿ ತಮ್ಮ ಪ್ರಾಮಾಣಿಕತೆಯನ್ನು ಸ್ಥಿರಪಡಿಸಿಕೊಳ್ಳಲು ಆಲೋಚನೆ ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ನಾವು ಎರಡು ಕೇಸುಗಳಲ್ಲಿ ಕೋರ್ಟಿಗೆ ಹೋಗಿದ್ದೇವೆ. ಒಂದು ಬೋರಯ್ಯನವರಿಗೆ ಸಂಬಂಧಿಸಿದ್ದು. ಆ ವಿಷಯದಲ್ಲಿ ಪಾರ್ಟಿ ಕೊಟ್ಟ ಹೇಳಿಕೆಯು ಸರಿಯಾಗಿಲ್ಲ ಎಂದು ಕೋರ್ಟಿಗೆ ಹಾಕಿದ್ದೇವೆ. ಆ ವಿಚಾರದಲ್ಲಿ ಡೀಟೈಲ್ಸ್ ಡಿಸ್‌ಕಸ್ ಮಾಡಬೇಕಾಗಿಲ್ಲ. ಇನ್ನು ಎರಡನೆಯದು ಎಂ. ಎಸ್. ರಾಮಯ್ಯನವರಿಗೆ ಸಂಬಂಧಪಟ್ಟದ್ದು. ಅವರು ನಮಗೆ ಇನ್ನೂ ಹೆಚ್ಚು ದುಡ್ಡು ಬರಬೇಕೆಂದು ಆರ್ಬಿಟ್ರೇಷನ್ನಿಗೆ ಹೋಗಿದ್ದರು. ಅಲ್ಲಿ ಅವರು ಕೊಟ್ಟ ತೀರ್ಮಾನ ಸರಿಹೋಗಲಿಲ್ಲ. ಆದ್ದರಿಂದ ಇದನ್ನು ಮತ್ತೆ ಕೋರ್ಟಿಗೆ ಹಾಕಿದ್ದೇವೆ. ಇನ್ನು ಡೌನ್ ಸ್ಟ್ರೀಮ್ ಕಂಟ್ರಾಕ್ಟ್ ವಿಷಯದ ಬಗ್ಗೆ ಹೇಳುವುದಕ್ಕೆ ಸಂಬಂಧಪಟ್ಟ ಮಂತ್ರಿಗಳಿದ್ದಾರೆ. ಅವರು ಅದನ್ನು ಹೇಳುತ್ತಾರೆ.

† ಶ್ರೀ ವೀರೇಂದ್ರ ಪಾಟೀಲ್.—ಈ ಡೌನ್ ಸ್ಟ್ರೀಮ್ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮ ಸಂಶಯವನ್ನು ಕೇಳಿದ್ದಾರೆ. ಅದಕ್ಕೆ ಈ ಸಭೆಯಲ್ಲಿ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಡೌನ್ ಸ್ಟ್ರೀಮಿನ ಕೆಲಸಕ್ಕೆ ಟೆಂಡರು ಕರೆಯಲಿಲ್ಲ. ಆದರೆ ಆ ಕೆಲಸವನ್ನು ತಾರಾ ಪುರ್ ಅಂಡ್ ಕಂಪೆನಿಯವರಿಗೆ ಕೊಡಲಾಗಿದೆ. ಅಲ್ಲಿನ ಮಣ್ಣಿನ ಕೆಲಸವನ್ನು ಅವರಿಗೇ ಕೊಟ್ಟಿದ್ದರಿಂದ ರಾಕ್ ಫಿಲಿಂಗ್ ಕೆಲಸವನ್ನು ಬೇರೆಯವರಿಗೆ ಕೊಡಲು ಆಗಲಿಲ್ಲ. ಏತಕ್ಕೆಂದರೆ ಡೌನ್ ಸ್ಟ್ರೀಮಿನಲ್ಲಿ ರಾಕ್ ಫಿಲಿಂಗ್ ಕೆಲಸವನ್ನು ಮಾಡಬೇಕಾದರೆ ಅಲ್ಲಿಗೆ ಬೇರೆ ಯಾರು ಹೋಗಬೇಕಾದರೂ ತಾರಾ ಪುರ್ ಅಂಡ್ ಕಂಪೆನಿಯವರ ಜಾಗದಮೇಲೆಯೇ ಹೋಗಬೇಕು. ಆ ರಸ್ತೆಯ ಮುಖಾಂತರವೇ ಅಲ್ಲಿಗೆ ಸಾಮಾನುಗಳ ಲಾರಿಗಳನ್ನು ತೆಗೆದುಕೊಂಡು ಹೋಗಬೇಕು. ಈ ದೃಷ್ಟಿಯಿಂದ ತಾರಾಪುರ್ ಅಂಡ್ ಕಂಪೆನಿಯವರ ಸಹಕಾರ ಇದ್ದರೆ ಆ ಕೆಲಸ ಆಗುತ್ತದೆ ಇಲ್ಲದೆ ಹೋದರೆ ತೊಂದರೆ ಯಾಗುತ್ತದೆ ಮತ್ತು ಕೆಲಸ ಸಫರ್ ಆಗುತ್ತದೆ. ಡೌನ್ ಸ್ಟ್ರೀಮಿನ ಮಣ್ಣಿನ ಕೆಲಸವನ್ನು ತಾರಾ ಪುರ್ ಅಂಡ್ ಕಂಪೆನಿಯವರಿಗೆ ಕೊಟ್ಟಿದೆ. ಅವರು ರಹದಾರಿ ಕೊಟ್ಟ ಹೊರತು ಬೇರೆಯವರು ಡೌನ್ ಸ್ಟ್ರೀಮಿಗೆ ಬರುವುದಕ್ಕೆ ಸಾಧ್ಯವಿಲ್ಲ. ಜೊತೆಗೆ ಅಲ್ಲಿ ಅರ್ತ್ ವರ್ಕ್ ನಡೆಯುತ್ತಿದೆ. ಈಗ ಗೊತ್ತುಪಡಿಸಿರುವ ಅವಧಿಯೊಳಗಾಗಿ ಆ ಕೆಲಸ ಕೂಡ ಮುಗಿಯಬೇಕು. ಆದ್ದರಿಂದ ಡೌನ್ ಸ್ಟ್ರೀಮಿನ ರಾಕ್ ಫಿಲಿಂಗ್ 'ಕೆಲಸವನ್ನು ಬೇರೆಯವರಿಗೆ ಕೊಡದೆ ತಾರಾಪುರ್ ಅಂಡ್ ಕಂಪೆನಿ ಯವರಿಗೇ ಕೊಟ್ಟರೆ ಒಂದೇ ಸಮನೆ ಎರಡು ಕೆಲಸಗಳು ನಡೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದಲೂ ಮತ್ತು ಬೇರೆಯವರಿಗೆ ಡೌನ್ ಸ್ಟ್ರೀಮಿನ ಕೆಲಸ ಕೊಟ್ಟರೆ ತೊಂದರೆ ಯಾಗುತ್ತದೆ ಎನ್ನುವ ದೃಷ್ಟಿಯಿಂದಲೂ ಈ ಕೆಲಸವನ್ನು ತಾರಾಪುರ್ ಅಂಡ್ ಕಂಪೆನಿಯವರಿಗೆ ಕೊಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ವಿಷಯ ಅಪ್ರಾಯಮಾನ ವಾಗಿದ್ದರೂ, ತಾವು ಮುಖ್ಯ ಮಂತ್ರಿಗಳಾಗಿ ಚುನಾವಣೆಯಾಗುವುದಕ್ಕೆ ಎರಡು ದಿನ ಮುಂಚೆ ಆಗಿನ ಮುಖ್ಯ ಮಂತ್ರಿಗಳು ಟ್ರೈನಿನಲ್ಲಿ ಬಿಜಾಪುರಕ್ಕೆ ಹೋಗುವಾಗ ರೈಲ್ವೆ ಸ್ಟೇಷನ್‌ನಲ್ಲಿ ಎಂ. ಎಸ್. ರಾಮಯ್ಯನವರಿಗೆ ಹಣವನ್ನು ಪಾವತಿ ಮಾಡುವ ಅರ್ಜಿಗೆ ರುಜು ಹಾಕಿದ್ದಾರೆ. ಅದಕ್ಕೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಆ ಹಣವನ್ನು ಕೊಡುವುದಕ್ಕಾಗುವುದಿಲ್ಲ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂದು ಹೇಳಲಿಲ್ಲವೇ? on the eve of handing over charge to you this order was passed by then Chief Minister. Will it not show that there is something fishy?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ನನ್ನ ಸಂಬಂಧದಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಶ್ರೀಮಾನ್ ಕಂಠಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ನಾನು ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಯಾಗಿದ್ದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು ನಾನು ಪಬ್ಲಿಕ್ ವರ್ಕ್ಸ್ ಮಂತ್ರಿಯಾಗಿ ಆಗ ಆ ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದೆ ಎಂದು, ಮತ್ತು ಶ್ರೀಮಾನ್ ಕಂಠಿಯವರು ಈಗಿನ ಮುಖ್ಯ ಮಂತ್ರಿಗಳಿಗೆ ಅಧಿಕಾರ ವಹಿಸಿಕೊಡುವುದಕ್ಕೆ 2 ದಿವಸ ಮುಂಚೆ ಅವರು ರೈಲ್ವೆ ಸ್ಟೇಷನ್‌ನಲ್ಲಿ ಎಂ. ಎಸ್. ರಾಮಯ್ಯನವರಿಗೆ ಹಣ ಪಾವತಿ ಮಾಡುವ ಆಜ್ಞೆಗೆ ರುಜು ಹಾಕಿದ್ದೂ ಸತ್ಯಕ್ಕೆ ದೂರವಾದ ಮಾತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆವೊತ್ತಿನ ಕಾನೂನೂ ಶಾಖೆಯ ಕಾರ್ಯದರ್ಶಿಯವರು ಆ ಹಣವನ್ನು ಕೊಡಬಾರದು ಎಂದು ಹೇಳಿದರು. ಆದರೆ ಆವೊತ್ತಿನ ಮುಖ್ಯ ಮಂತ್ರಿಗಳು ಆ ಹಣವನ್ನು ಕೊಡುವುದರಲ್ಲಿ ಏನಾಗಿದೆ ಎಂಬುದನ್ನು ಸ್ವಲ್ಪ ನೋಡಿ ಮಾಡಿ ಎಂದು ಹೇಳಿದ್ದಾರೆ. ಇದನ್ನು ಬೇಕಾದರೆ ನಾನು ನಿರ್ದಿಷ್ಟವಾಗಿ ರುಜುವಾತು ಮಾಡುತ್ತೇನೆ. Because he is in possession of so many papers and evidences. But we have only to rely upon the papers furnished to us in this white paper. ಏತಕ್ಕೆಂದರೆ ನಮ್ಮಲ್ಲಿ ಸಾಕಷ್ಟು ಕಾಗದಪತ್ರಗಳು ಇಲ್ಲದೆ ಇರುವಾಗ ನೀವು ಹೇಳುವುದೇ ಸರಿ. In such an important matter like Sharavathi, which is a scandal going round the world, I request the Chief Minister to clean the dirty linen by holding a judicial enquiry. Is it not a fact that the Advocate General and the Law Minister and even Mr. Tirumale and the construction Board say to the Government that Ramaiah was not entitled to one pie? Today, I will give my resignation. If I am not going to prove I will resign and get away. Let Sri S. Nijalingappa place all the records in my hands.

Sri S. NIJALINGAPPA.—Let him come to me and discuss it. I know as a matter of fact that the H.E.C.P. opined against it. In fact the Advocate General has strongly pleaded that it would be very wrong to go to court on the award. I would like to quote it. I have got that here.

Sri G. V. GOWDA.—When the award is given against the Government, why did it not challenge it on the ground that it is not a point to be arbitrated.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಡ್ವೋಕೇಟ್ ಜನರಲ್ ಅವರು ಅಧಿಕಾರವನ್ನು ಬಿಟ್ಟು ಹೋಗುವಾಗ ಅವರಿಂದ ಎಲ್ಲ ಸರಿಯಾಗಿ ನಡೆದಿದೆ ಎಂದು ಒಂದು ಕಾಗದವನ್ನು ಪಡೆದುಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿಯೂ ಕೂಡ ಇದರ ವಿಚಾರಣೆ ನಡೆಸಬೇಕು ಎಂದು ಇದೆ. ಆದರೆ ಏಕೋ ಹಿಂದು ಮುಂದು ನೋಡುತ್ತಿದ್ದಾರೆ.

Mr. SPEAKER.—No Advocate-General will give such a letter. He has got status and reputation and he will not bend like that.

ಶ್ರೀ ಎಸ್. ನಿಜಲಿಂಗಪ್ಪ.—ಅಡ್ವೋಕೇಟ್ ಜನರಲ್ ಅವರು ನಾನು ಬಂದ ಮೇಲೆ ಒಂದು ಒಂದೂವರೆ ವರ್ಷ ಇದ್ದರು. ಆಮೇಲೆ ಅವರು ಬಿಟ್ಟುಹೋದರು. ಅವರು ಸ್ಪಷ್ಟವಾಗಿ ಹೇಳಿದ್ದಾರೆ. "The chances of success in such matter are very slender. It is a valid decision and it must be accepted."

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಜನಗಳ ಮನಸ್ಸಿನಲ್ಲಿ ಒಂದು ಅನುಮಾನ ಇದೆ. ತಾರಾಪೂರ್ ಅಂಡ್ ಕಂಪನಿಯವರಿಗೆ ಸಾವಿರ ಅಡಿಗೆ 80 ರೂಪಾಯಿ ದರದಲ್ಲಿ ಕೊಡಬೇಕಾದ್ದಕ್ಕೆ ಹೆಚ್ಚು ದರದಲ್ಲಲ್ಲ ಎಂದರೆ 245 ದರದಲ್ಲಿ ಟೆಂಡರ್ ಕರೆಯದೆ ಕೊಟ್ಟಿದ್ದಾರೆ ಎಂದು ಅನುಮಾನ ಪಡುತ್ತಿದ್ದಾರೆ. ಅದರ ಬಗ್ಗೆ ಏನು ಹೇಳುತ್ತಾರೆ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಜನಗಳ ಅನುಮಾನಕ್ಕೆ ಕಾರಣವಿಲ್ಲ, ಅದು ಸಕಾರಣವೂ ಅಲ್ಲ. ನಮ್ಮ ಮಿತ್ರರಿಗೆ ಅನುಮಾನವಿದೆ. ನಾವು ಆ ರೀತಿ ಮಾಡಿಲ್ಲ.

Mr. SPEAKER.—I have to mention one thing to the House so that it may not be under a wrong impression. We should have received notice of amendment to this motion before the House and since there is no notice, I have disallowed it. I have ruled it out on the ground that this motion is not one on which vote is going to be taken; it is only to be discussed. I am not going to put it to the vote of the House. The proposed amendment seeks to convert it suddenly into something else which becomes votable. If there were really an amendment, however innocuous it might be, and if it were to be considered, I would have to allow debate on that. Anyway, that has not happened. If members do not co-operate with me, what can I do ?

Then, some Hon'ble Members wanted to have an indication of the next meeting. They will come to know it in right time; it will not be very early......

Sri S. NIJALINGAPPA.—I am grateful to the Members for the way in which they have co-operated with me and with you, Sir, and also to you for your kindness in guiding us. We have done a lot of work. We might meet round about November. This session has been more strenuous than expected. We have turned out more work than was envisaged at the commencement of the sittings. That has been possible because Members have co-operated fully. I did not permit interruptions during debates but I may tell the House that without interruptions life would have been dull.

Mr. SPEAKER.—The House will now adjourn *sine die*.

The House adjourned sine die *at One of the Clock.*

WD 3355—GPB—900—22-10-64